بِسْمِ اللّٰہِ الرَّحْمٰنِ الرَّحِیْمِ     نَحْمَدُہٗ وَنُصَلِّی عَلٰی رَسُوْلِہِ الْکَرِیْمِ     وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَکُمُ اللّٰہُ بِبَدْرٍ وَّاَنْتُمْ اَذِلَّۃٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 01

ಸಂಚಿಕೆ: 25

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

02 ಜುಲೈ 2020, 02 ವಫಾ 1399 ಹಿಜರಿ ಶಮ್‌ಸಿ,
10 ಝುಲ್-ಖಅದಃ 1441 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

وَمَنْ یَّعْصِ اللّٰہَ وَرَسُوْلَہٗ
وَیَتَعَدَّ حُدُوْدَہٗ یُدْخِلْہُ
نَارًا خَالِدًا فِیْھَا۪
وَلَہٗ عَذَابٌ مُّھِیْنٌ ○ (النساء:15)

*(ಅನ್ನಿಸಾಅ್:15)*

ಅಂದರೆ: ಅಲ್ಲಾಹನನ್ನು ಮತ್ತು ಅವನ ಸಂದೇಶ ವಾಹಕನನ್ನು ಧಿಕ್ಕರಿಸಿ ಅವನ (ಅಲ್ಲಾಹನ) ನಿಯಮೋಲ್ಲಂಘನ ಮಾಡುವವನನ್ನು ಅವನು ನರಕದಲ್ಲಿ ಪ್ರವೇಶಗೊಳಿಸುವನು. ಅವನು ಅದರಲ್ಲಿ ದೀರ್ಘಕಾಲ ವಾಸಿಸುವನು. ಅಲ್ಲಿ ಅವನಿಗೆ ಅಪಮಾನಕರವಾದ ಶಿಕ್ಷೆಯಿದೆ.

**ಸ್ಥಿರಚಿತ್ತತೆ ದೊಡ್ಡ ವಿಷಯವಾಗಿದೆ. ಯಾವುದೆ ವಸ್ತುವಿರಲಿ ಸಂರ್ಧಬೋಚಿತವಾಗಿದ್ದರೆ ಅದು ಜಾಣ್ಮೆ ಅಥವಾ ಸ್ಥಿರಚಿತ್ತತೆ ಎಂದಾಗುತ್ತದೆ. ನಾನು ಬಯಸುವುದೇನೆಂದರೆ ನೀವು ಸ್ಥಿರಚಿತ್ತತೆಗಾಗಿ ಹೋರಾಡಬೇಕು ಮತ್ತು ಭಕ್ತಿಯಿಂದ ಅದನ್ನು ಪಡೆಯಬೇಕು. ಏಕೆಂದರೆ ಅದು ಮನುಷ್ಯನನ್ನು ದೇವಸಾನಿಧ್ಯದವರೆಗೆ ತಲುಪಿಸುತ್ತದೆ ಮತ್ತು ಅವನ ಪ್ರಾರ್ಥನೆಗಳು ಸ್ವೀಕಾರದ ಭಾಗ್ಯ ಪಡೆಯುತ್ತದೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

**ಸ್ಥಿರಚಿತ್ತತೆಯೇ ಮನುಷ್ಯನ ಮಹೋನ್ನತ ಹೆಸರಾಗಿದೆ.**

ನಾನು ಸ್ಥಿರಚಿತ್ತತೆ ಕುರಿತು ಹೇಳತೊಡಗಿದೆ. ಮತ್ತೊಮ್ಮೆ ಹೇಳಲು ಬಯಸುತ್ತೇನೆ ಅದನ್ನು ಸೂಫಿ ಸಂತರು ತನ್ನ ಭಾಷೆಯಲ್ಲಿ "ಫನಾ" (ತಿಲಾಂಜಲಿ) ಎಂದೆ ಪರಿಗಣಿಸುತ್ತಾರೆ. ಅಂದರೆ ಆತ್ಮ, ಆಸಕ್ತಿ ಮತ್ತು ನಿಶ್ಚಯಗಳು ಎಲ್ಲವು ದೇವನಿಗೆ ಸಮರ್ಪಿತವಾಗಿರುತ್ತದೆ. ಮತ್ತು ಮೋಹ, ಮದ, ಆಕಾಂಕ್ಷೆಗಳು ಮಣ್ಣುಮುಕ್ಕಿರುತ್ತವೆ. ಅಲ್ಲಾಹನನ್ನು ಪಡೆಯುವ ಆಸಕ್ತಿ, ನಿಶ್ಚಯಗಳನ್ನು ಬಿಟ್ಟು ಇಹ ಲೋಕದ ಮೋಹಕ್ಕೆ ಬಲಿಯಾದ ಮನುಷ್ಯರು ಹೆಚ್ಚಿನಾಂಶ ಲೋಕದ ಮೋಹ ಆಕಾಂಕ್ಷೆಗಳಲ್ಲಿ ವಿಫಲಗೊಂಡು ಲೋಕವನ್ನು ತ್ಯಜಿಸುತ್ತಾರೆ. ನಮ್ಮ ಸಹೋದರ ದಿವಂಗತ ಮಿರ್ಝಾ ಗುಲಾಮ್ ಖಾದಿರ್ ಸಾಹಿಬ್ ಯಾವಾಗಲು ನಾನ ತರಹದ ಮುಖದ್ದಮೆಗಳಲ್ಲಿ ಮಗ್ನರಾಗುತ್ತಿದ್ದರು. ಎಲ್ಲಿಯವರೆಗೆ ಅಂದರೆ ಅಂತಿಮವಾಗಿ ಅವರು ಅನಾರೋಗ್ಯಕ್ಕೆ ತುತ್ತಾಗಿ ತೀರಿಹೋದರು. ಇನ್ನು ಹಲವು ಜನರನ್ನು ನೋಡಿರುತ್ತೇನೆ ಅವರು ತಮ್ಮ ಆಸೆ ಆಕಾಂಕ್ಷೆಗಳಿಗೆ ಅಲ್ಲಾಹನ ಮೇಲೆ ಆಧ್ಯತೆ ನೀಡುತ್ತಾರೆ. ಅಂತಿಮವಾಗಿ ಅವರು ಈ ಆಧ್ಯತೆಯಲ್ಲಿಯೂ ಸಫಲರಾಗುವುದಿಲ್ಲ. ಲಾಭದ ಬದಲಿಗೆ ನಷ್ಟವನ್ನೇ ಅನುಭವಿಸುತ್ತಾರೆ. ಇಸ್ಲಾಮ್ ಧರ್ಮದ ಬಗ್ಗೆ ಚಿಂತಿಸಿದರೆ ತಿಳಿಯಬಹುದು. ವಿಫಲತೆಯು ಸುಳ್ಳಿನ ಪರಿಣಾಮವಾಗಿರುತ್ತದೆ. ಅಲ್ಲಾಹನ ಕಡೆ ಆಧ್ಯತೆ ಕಡಿಮೆಯಾದರೆ ಅಲ್ಲಾಹನ ಪ್ರಕೋಪ ಅವತರಣಗೊಳ್ಳುತ್ತದೆ. ಅದು ಅವರನ್ನು ವಿಫಲವನ್ನಾಗಿ ಮಾಡುತ್ತದೆ. ವಿಶೇಷವಾಗಿ ವಿವೇಕ ಉಳ್ಳವರಿಗೆ ಅದು ತಿಳಿದಿದ್ದರು ಇಹ ಲೋಕದ ಮೋಹಕ್ಕೆ ಬಲಿಯಾಗುತ್ತಾರೆ. ಆಗ ಅಲ್ಲಾಹನು ಅವರನ್ನು ವಿಫಲಗೊಳಿಸುತ್ತಾನೆ. ಆದರೆ ಸಜ್ಜನರಿಗೆ ಪವಿತ್ರವಾದ ವಿಧಾನಗಳ ಬಗ್ಗೆ ಅರಿವಿರುತ್ತದೆ ಮತ್ತು ಅವರು ಯಾವಾಗಲು ಮರಣವನ್ನು ಗಮನದಲ್ಲಿಟ್ಟುಕೊಳ್ಳುತ್ತಾರೆ. ಅವರು ಭಾವಿಸುತ್ತಾರೆ ಯಾವ ರೀತಿ ನಮ್ಮ ತಂದೆ ತಾಯಿಯರು ತೀರಿ ಹೋಗಿದ್ದಾರೆ ಅಥವಾ ಇತರರು ತೀರಿಹೋಗಿದ್ದಾರೆ. ಅದೇ ರೀತಿ ಒಂದು ದಿನ ನನಗೂ ಮರಣವಿದೆ. ಕೆಲವೊಮ್ಮೆ ತನ್ನ ವಯಸ್ಸು ಗಮನದಲ್ಲಿಟ್ಟುಕೊಂಡು ನನಗೆ ವೃದ್ಧಾಪ್ಯ ಬಂದಿದೆ. ಮರಣದ ದಿನಗಳು ಸಮೀಪವಾಗಿವೆ ಎಂದು ಭಾವಿಸಿ ಅಲ್ಲಾಹನ ಕಡೆ ಮರಳುತ್ತಾರೆ.

ಒಟ್ಟಿನಲ್ಲಿ ಒಂದು ಮಾತನ್ನು ಮರೆಯಬಾರದು, ಅಂತಿಮವಾಗಿ ಒಂದಿಲ್ಲೊಂದು ದಿನ ಈ ಲೋಕವನ್ನು ಅದರ ಸಂತೋಷಗಳನ್ನು ಬಿಟ್ಟುಹೋಗುವುದಿದೆ. ಮತ್ತೇಕೆ ಮನುಷ್ಯನು ಅದರ ಮುಂಚೆಯೆ ಅಧರ್ಮ ಆಧಾರಿತ ಸಂತೋಷಗಳನ್ನು ಬಿಡಬಾರದು. ಮರಣವು ದೊಡ್ಡ ದೊಡ್ಡ ಸತ್ಯವಂತರನ್ನು ಸಜ್ಜನರನ್ನು ಬಿಡಲಿಲ್ಲ, ಅದು ಯುವಕರು, ದೊಡ್ಡ ಶ್ರೀಮಂತರು ಮತ್ತು ವಯಸ್ಕರು ಎಂದು ಲೆಕ್ಕಿಸುವುದಿಲ್ಲ. ಮತ್ತೆ ನಿಮ್ಮನ್ನು ಬಿಡುವುದಕ್ಕೆ ಹೇಗೆ ಸಾಧ್ಯ? ತಾತ್ಕಾಲಿಕ ಮತ್ತು ಕಾಲ್ಪನಿಕ ಆರಾಮ, ಸಂತೋಷಗಳಿಗೋಸ್ಕರ ಮನುಷ್ಯನು ಎಷ್ಟೊಂದು ಕಷ್ಟಗಳನ್ನು ಸಹಿಸಿಕೊಳ್ಳುತ್ತಾನೆ. ಆದರೆ ಅಲ್ಲಾಹನ ಮಾರ್ಗದಲ್ಲಿ ಅಲ್ಪ ಮಾತ್ರ ಕಠಿಣತೆಯನ್ನು ಕಂಡರೆ ಗಾಬರಿಗೊಳ್ಳುತ್ತಾರೆ ಮತ್ತು ಅನುಮಾನ ಪಡಲು ಪ್ರಾರಂಭಿಸುತ್ತಾನೆ. ಅಕಟಕಟ! ಅವನು ಈ ನಷ್ಟವಾದ ಸಂತೋಷಗಳ ಬದಲಿಗೆ ಶಾಶ್ವತವಾದ ಮತ್ತು ಅನಶ್ವರ ಸಂತೋಷಗಳ ಬಗ್ಗೆ ಚಿಂತಿಸುವವನಾಗಿದ್ದರೆ ಎಷ್ಟು ಒಳ್ಳೆಯದಿತ್ತು. ಈ ಕಷ್ಟ ನಷ್ಟಗಳ ಮೇಲೆ ವಿಜಯ ಸಾಧಿಸಲು ಒಂದು ಪರಿಪೂರ್ಣ ಹಾಗು ಅಚಲವಾದ ಮಾರ್ಗವಿದೆ ಅದು ಕೋಟ್ಯನುಗಟ್ಟಲೆ ಮಹಾನುಭಾವರ ಅನುಭವವಾಗಿದೆ. ಅದು ಯಾವುದು? ಆ ಮಾರ್ಗ ನಮಾಝ್ ಆಗಿದೆ.

ನಮಾಝ್ ಎಂದರೇನು? ಅದು ಒಂದು ದುಆ ಆಗಿದೆ. ಅದರಿಂದ ಮನುಷ್ಯನು ಎಲ್ಲ ಕೆಡುಕಗಳಿಂದ ಮತ್ತು ಅಕ್ರಮಗಳಿಂದ ಸುರಕ್ಷತೆ ಪಡೆದು ಒಳಿತುಗಳಿಗೆ ಅರ್ಹನಾಗುತ್ತಾನೆ. ಮತ್ತು ದೈವಿಕ ಅನುಗ್ರಹಗಳಿಗೆ ಪಾತ್ರನಾಗುತ್ತಾನೆ. ಅಲ್ಲಾಹ್ ಎಂಬುದು ಮಹೋನ್ನತ ಹೆಸರಾಗಿದೆ ಎಂದು ಹೇಳಲಾಗಿದೆ. ಅಲ್ಲಾಹನು ಎಲ್ಲ ಗುಣಗಳನ್ನು ಅದರಡಿಯಲ್ಲಿ ಇಟ್ಟಿರುತ್ತಾನೆ. ಈಗ ಸ್ವಲ್ಪ ಯೋಚಿಸಿರಿ. ನಮಾಝಿನ ಪ್ರಾರಂಭವು ಅಝಾನ್‌ನಿಂದ ಆಗುತ್ತದೆ. ಅಝಾನ್ **"ಅಲ್ಲಾಹು ಅಕ್ಬರ್"** ನಿಂದ ಪ್ರಾರಂಭಗೊಳ್ಳುತ್ತದೆ. ಅಂದರೆ ಅಲ್ಲಾಹನ ಹೆಸರಿನಿಂದ ಪ್ರಾರಂಭವಾಗಿ **"ಲಾ ಇಲಾಹ"** ಮೇಲೆ ಅಂತ್ಯಗೊಳ್ಳುತ್ತದೆ. ಈ ಗೌರವ ಇಸ್ಲಾಮಿಕ ಆರಾಧನೆಗೆ ಮಾತ್ರ ಸಲ್ಲುತ್ತದೆ. ಅದು ಆದಿ ಮತ್ತು ಅಂತ್ಯ. ಅಲ್ಲಾಹನ ಲಕ್ಷವನ್ನೆ ಹೊಂದಿರುತ್ತದಲ್ಲದೆ ಬೇರೇನೂ ಅಲ್ಲ. ನಾನು ದಾವೆಯೊಂದಿಗೆ ಹೇಳುವೆನು. ಈ ವಿಧದ ಆರಾಧನೆ ಯಾವ ಸಮುದಾಯ ಮತ್ತು ಜನಾಂಗವು ಹೊಂದಿಲ್ಲ. ಆದುದರಿಂದ ನಮಾಝ್ ಒಂದು ದುಆ ಆಗಿದೆ. ಅದರಲ್ಲಿ ಮಹೋನ್ನತ ಹೆಸರಾದ ಅಲ್ಲಾಹನನ್ನು ಆಧ್ಯತೆಯನ್ನಾಗಿ, ಅದರಂತೆಯೇ ಮನುಷ್ಯನ ಮಹೋನ್ನತ ಹೆಸರು "ಸ್ಥಿರಚಿತ್ತತೆ" ಆಗಿದೆ.

ಮಹೋನ್ನತ ಹೆಸರೆಂಬುದು ಮಾನವೀಯತೆಯ ಶ್ರೇಷ್ಠ ಗುಣಗಳನ್ನು ಪಡೆಯುವ ಮಾರ್ಗವಾಗಿದೆ. ಅಲ್ಲಾಹನು **"ಇಹ್‌ದಿನಸ್ ಸಿರಾತಲ್ ಮುಸ್ತಕೀಮ್"** ಇದನ್ನೇ ಸೂಚಿಸಿರುತ್ತಾನೆ. ಇನ್ನೊಂದೆಡೆಯೂ ಹೀಗೆ ನುಡಿದನು. **"ಅಲ್ಲಝೀನ ಖಾಲು ರಬ್ಬುನಲ್ಲಾಹು ಸುಮ್ಮಸ್ತಖಾಮು ತತನಝ್ಝುಲು ಅಲೈಹಿಮುಲ್ ಮಲಾಯಿಕತು ಅಲ್ಲಾಹ್ ತಖಾಫು ವಲಾ ತಹ್‌ಝನೂ.** (ಹಾಮೀಮ್ ಸಜ್ದ:31) ಅಂದರೇ ಯಾವ ಜನರು ಅಲ್ಲಾಹನ ಘೋಷಣೆಯ ಒಳಬರುತ್ತಾರೋ ಅವರಲ್ಲಿ ಮಹೋನ್ನತ ಹೆಸರಾದ ಸ್ಥಿರಚಿತ್ತತೆಯ ಅಡಿಯಲ್ಲಿ ಮನುಷ್ಯತ್ವದ ಬೀಜ ಅಡಗಿರುತ್ತದೆ. ಅದು ಯಾವ ರೀತಿ ಬೆಳವಣಿಗೆ ಹೊಂದುತ್ತೆಂದರೆ ಅದರ ಮೇಲೆ ದೇವದೂತರ ಅವತರಣಿಕೆ ಪ್ರಾರಂಭವಾಗುತ್ತದೆ. ಆಗ ಯಾವ ರೀತಿಯ ಭಯ ಹಾಗೂ ಪಶ್ಚತ್ತಾಪವಿರುವುದಿಲ್ಲ. ನಾನು ಹೇಳಿರುತ್ತೇನೆ. ಸ್ಥಿರಚಿತ್ತತೆ ದೊಡ್ಡ ವಿಷಯವಾಗಿದೆ. ಸ್ಥಿರಚಿತ್ತತೆ ಎಂದರೇನು? ಪ್ರತಿಯೊಂದು ವಸ್ತು ತನ್ನ ಸರಿಯಾದ ಪಥದಲ್ಲಿರುವಾಗ ಜಾಣ್ಮೆ ಅಥವಾ ಸ್ಥಿರಚಿತ್ತತೆ ಎನ್ನಲಾಗುತ್ತದೆ. ಉದಾಹರಣೆಗೆ ದೂರ್‌ಬಿನ್‌ನ ಭಾಗಗಳನ್ನು ಅದರ ಅಸಲು ಜಾಗದಿಂದ

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಆಯಾ ಕಾಲದ ಖಲೀಫರ ಮತ್ತು ಜಮಾಅತಿನ ಸದಸ್ಯರ ಮಧ್ಯೆ ಪ್ರಾಮಾಣಿಕ ಸಂಬಂಧ, ನಿಷ್ಠೆ, ಪ್ರೀತಿ ಮತ್ತು ವಾತ್ಸಲ್ಯದ ಸಂಬಂಧ ಸ್ಥಾಪಿತವಾಗುವ ತನಕ ಕೇವಲ ವ್ಯವಸ್ಥೆಯ ಸ್ಥಾಪನೆಯಿಂದ ಮಾತ್ರ ಯಾವುದೇ ಪ್ರಯೋಜನ ಸಿಗಲಾರದು. ಇಂತಹ ಸಂಬಂಧವನ್ನು ಅಲ್ಲಾಹನು ಮಾತ್ರ ಸ್ಥಾಪಿಸಬಲ್ಲನು. ಯಾವುದೇ ಮನುಷ್ಯ ಅಥವಾ ಮನುಷ್ಯ ಪ್ರಯತ್ನ ಇಂತಹ ಸಂಬಂಧವನ್ನು ಸೃಷ್ಟಿಸಲು ಸಾಧ್ಯವಿಲ್ಲ.**

**ಅಲ್ಲಾಹನ ವಾಗ್ದಾನಗಳು ಈಡೇರುವ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನಿಂದ ಲಭಿಸಿದ ಬೆಂಬಲ ಮತ್ತು ಸಹಾಯ ಅಹ್ಮದಿಯಾ ಜಮಾಅತ್ ಸತ್ಯವೆಂಬುದರ ಬಗ್ಗೆ ಇರುವ ಸಾಕ್ಷ್ಯಾಧಾರ ಆಗಿದೆ.**

**ಜಮಾಅತ್‌ಗೆ ಖಿಲಾಫತ್‌ನೊಂದಿಗಿರುವ ಸಂಬಂಧ, ಖಲೀಫರಿಗೆ ಜಮಾಅತ್‌ನೊಂದಿಗಿರುವ ಸಂಬಂಧ, ಅಲ್ಲಾಹನ ಬೆಂಬಲದ ಮತ್ತು ಸಹಾಯದ ಸಾಕ್ಷ್ಯವಾಗಿದೆ.**

**ಜಮಾಅತಿನ ಜನರ ದೃಢ ನಿಶ್ಚಯ, ಪ್ರೀತಿ, ಪ್ರಾಮಾಣಿಕತೆ ಮತ್ತು ನಿಷ್ಠೆಯ ಸಂಬಂಧ ಖಿಲಾಫತ್‌ನೊಂದಿಗೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ವರ್ಧಿಸುತ್ತಾ ಮುಂದುವರಿಯುತ್ತಿದೆ. ಹೀಗೆ ಆಗದಿರಲು ಹೇಗೆ ತಾನೆ ಸಾಧ್ಯ? ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನುಡಿದ ಭವಿಷ್ಯವಾಣಿಗಳ ಪ್ರಕಾರವೇ ಸಂಭವಿಸಿದುದಾಗಿದೆ.**

**ಮೇ 27ನೇ ದಿನಾಂಕದಿಂದ ವಿವಿಧ ಪ್ರದೇಶಗಳಿಗೆ ಅನುಕೂಲವಾಗುವಂತೆ ಎಂ.ಟಿ.ಎ. ವನ್ನು 8 ಚ್ಯಾನಲ್ ಪ್ರಾರಂಭಿಸಲಾಗಿದ ಬಗ್ಗೆ ಒಂದು ಪ್ರಕಟಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29–05–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

إِيَّاكَ نَعْبُدُ وَإِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೇಳುತ್ತಾರೆ "ನಾನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇನೆ ಅಲ್ಲಾಹನು ನನಗೆ ಒಂದು ನಿಷ್ಠಾವಂತ ಜಮಾಅತ್ತನ್ನು ನೀಡಿದ್ದಾನೆ. ನಾನು ನೋಡುತ್ತೇನೆ ನಾವು ಯಾವುದೇ ಉದ್ದೇಶಕ್ಕಾಗಿ ಕರೆದರೆ ಅವರೆಲ್ಲರು ಬಹಳ ಉತ್ಸಾಹಭರಿತರಾಗಿ ಒಬ್ಬ ಇನ್ನೊಬ್ಬರಿಕ್ಕಿಂತ ಮೊದಲು ಧೈರ್ಯ ಮತ್ತು ಸಾಮರ್ಥ್ಯದ ಅನುಗುಣವಾಗಿ ಮುಂದೆ ಬರುತ್ತಾರೆ ಮತ್ತು ನಾನು ನೋಡುವುದೇನೆಂದರೆ ಅವರಲ್ಲಿ ಸತ್ಯತೆ ಹಾಗೂ ನಿಷ್ಠೆ ಇದೆ. (ಮಲ್‌ಫೂಝಾತ್ ಸಂಪುಟ–1, ಪುಟ–336)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಸತ್ಯ, ನಿಷ್ಠೆ ಮತ್ತು ಪ್ರೀತಿಯ ಸಂಬಂಧದ ದೃಶ್ಯಗಳನ್ನು ನಾವು ನೋಡುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸಹಾಬರವರ ಅನೇಕ ಘಟನೆಗಳಿವೆ. ಅನೇಕ ಹಳೆ ಅಹ್ಮದಿಯ ಕುಟುಂಬಗಳಲ್ಲಿ ಈ ಪರಂಪರೆ ಮುಂದುವರೆದಿದೆ ಮತ್ತು ನಮ್ಮ ಲಿಟರೇಚರ್‌ಗಳಲ್ಲಿ ಖಲೀಫರು ಖುತ್‌ಬಗಳಲ್ಲಿ ಇದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಇದ್ದ ಸಂಬಂಧ ಮತ್ತು ಆ ಕುಟುಂಬಗಳಲ್ಲಿ ನಡೆಯುತ್ತಿದ್ದ ಸಂಭಂಧದ ಪರಂಪರೆಯು ನಡೆಯುತ್ತಿದೆ. ಮತ್ತು ಹೊಸದಾಗಿ ಸೇರ್ಪಡೆ ಆಗುವವರಲ್ಲಿಯು ಈ ಸಂಬಂಧವನ್ನು ಕಾಣುತ್ತೇವೆ. ಈ ಸಂಬಂಧವೂ ಅಲ್ಲಿಯ ತನಕ ಮಾತ್ರ ಸೀಮಿತವಾಗಿಲ್ಲ ಬದಲಿಗೆ ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಅಲ್ಲಾಹನ ವಾಗ್ದಾನದ ಪ್ರಕಾರ ಇದರ ಕೊನೇಯ ಪೀಳಿಗೆಯವರೆಗೂ ದೃಢ ಸಂಬಂಧವಿರಲಿದೆ. ಈ ಸಂಬಂಧವು ಜಮಾಅತ್ತಿನ ಐಕ್ಯತೆಗೆ ಸಂಕೇತ ಹಾಗೂ ಜಾಮೀನಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಅಲ್ಲಾಹನಂದ ಸೂಚನೆ ಪಡೆದ ನಂತರ ಅವರು ಈ ಲೋಕದಿಂದ ಮರಳಿ ಹೋಗುತ್ತಿರುವ ಸಮಾಚಾರವನ್ನು ಜಮಾಅತ್ತಿನ ಸದಸ್ಯರಿಗೆ ತಿಳಿಸಿದರು ಅದರೊಂದಿಗೆ ಜಮಾಅತ್ತಿನ ಸದಸ್ಯರ ನೆಮ್ಮದಿಗಾಗಿ ಅಲ್ಲಾಹನಿಂದ ಸಮಾಚಾರ ಗಳಿಸಿ ಜಮಾಅತ್ತಿನಲ್ಲಿ ಖಿಲಾಫತ್ ಸರಪಳಿ ಜಾರಿಗೊಳ್ಳುವುದರ ಬಗ್ಗೆ ಸುವಾರ್ತೆ ನೀಡಿದರು. ಹೀಗಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ 'ಅಲ್‌ವಸಿಯ್ಯತ್'ನಲ್ಲಿ ಬರೆಯುತ್ತಾರೆ:

"ನಾನು ನಿಮ್ಮೊಂದಿಗೆ ಹೇಳಿದ ಮಾತಿನಿಂದ ನೀವು ದುಃಖಿತರಾಗಬೇಡಿರಿ. ನಿಮ್ಮ ಹೃದಯಗಳು ಗಾಬರಿಗೊಳ್ಳದಿರಲಿ. ಏಕೆಂದರೆ ಅಲ್ಲಾಹನ ದಿವ್ಯಶಕ್ತಿಯ ಎರಡನೆಯ ಪ್ರಕಟನೆಯನ್ನು ನೀವು ನೋಡುವುದು ಅವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿದೆ. ಅದರ ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು. ನಾನು ನಿಮ್ಮ ಬಳಿಯಿಂದ ನಿರ್ಗಮಿಸದೆ ಆ ದ್ವಿತೀಯ ದಿವ್ಯ ಶಕ್ತಿಯನ್ನು ನಿಮಗಾಗಿ ಕಳುಹಿಸಿ ಕೊಡುವೆನು. "ಬರಾಹಿನೆ ಅಹ್ಮದಿಯಾ" ಎಂಬ ಗ್ರಂಥದಲ್ಲಿ ಅಲ್ಲಾಹನ ವಾಗ್ದಾನವನ್ನು ಉಲ್ಲೇಖಿಸಲಾಗಿದೆ. ಆ ವಾಗ್ದಾನದ ಪ್ರಕಾರ ದ್ವಿತೀಯ ಶಕ್ತಿ ಸದಾಕಾಲ ನಿಮ್ಮ ಜೊತೆಗಿರುವುದು. ಆ ವಾಗ್ದಾನ ನನ್ನ ಬಗ್ಗೆಯಲ್ಲ. ಅದು ನಿಮ್ಮ ಎಂದರೆ ಜಮಾಅತ್ ಬಗ್ಗೆಯಾಗಿದೆ. ಅಲ್ಲಾಹನು ಹೀಗೆ ಹೇಳಿದ್ದಾನೆ: "ನಿನ್ನ ಅನುಯಾಯಿಗಳು ಈ ಜಮಾಅತ್ತಿಗೆ ಪುನರುತ್ಥಾನ ದಿನದ ತನಕ ಅನ್ಯರ ಮೇಲೆ ಜಯವನ್ನು ದಯಪಾಲಿಸುವೆನು." (ಅಲ್‌ವಸಿಯ್ಯತ್, ರೂಹಾನಿ ಖಝಾಯೀನ್, ಸಂಪುಟ–20, ಪುಟ–305–306)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಧನ ಹೊಂದಿದ ನಂತರ ಖಿಲಾಫತ್ ವ್ಯವಸ್ಥೆ ಅಲ್ಲಾಹನ ವಾಗ್ದಾನ ಪ್ರಕಾರ ಜಾರಿಗೊಂಡಿತು. ಆದರೆ ಆಯಾ ಕಾಲದ ಖಲೀಫರ ಮತ್ತು ಜಮಾಅತಿನ ಸದಸ್ಯರ ಮಧ್ಯೆ ಪ್ರಾಮಾಣಿಕ ಸಂಬಂಧ, ನಿಷ್ಠೆ, ಪ್ರೀತಿ ಮತ್ತು ವಾತ್ಸಲ್ಯದ ಸಂಬಂಧ ಸ್ಥಾಪಿತವಾಗುವ ತನಕ ಕೇವಲ ವ್ಯವಸ್ಥೆಯ ಸ್ಥಾಪನೆಯಿಂದ ಮಾತ್ರ ಯಾವುದೇ ಪ್ರಯೋಜನ ಸಿಗಲಾರದು. ಇಂತಹ ಸಂಬಂಧವನ್ನು ಅಲ್ಲಾಹನು ಮಾತ್ರ ಸ್ಥಾಪಿಸಬಲ್ಲನು. ಯಾವುದೇ ಮನುಷ್ಯ ಅಥವಾ ಮನುಷ್ಯ ಪ್ರಯತ್ನ ಇಂತಹ ಸಂಬಂಧವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಅದನ್ನು ನೆಲೆನಿಲ್ಲಿಸಲೂ ಸಾಧ್ಯವಿಲ್ಲ. ಜಮಾಅತಿನ ಏಕತ್ವ, ಐಕ್ಯ ಮತ್ತು ಅಭಿವೃದ್ಧಿಗೆ ಖಾತರಿ ನೀಡುವುದು ಈ ಸಂಬಂಧವೇ ಆಗಿದೆ. ಅಲ್ಲಾಹನ ವಾಗ್ದಾನಗಳು ಈಡೇರುವ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನಿಂದ ಲಭಿಸಿದ ಬೆಂಬಲ ಮತ್ತು ಸಹಾಯ ಅಹ್ಮದಿಯಾ ಜಮಾಅತ್ ಸತ್ಯವೆಂಬುದರ ಬಗ್ಗೆ

ಇರುವ ಸಾಕ್ಷ್ಯಾಧಾರ ಆಗಿದೆ. ಹಳೆಯ ಅಹ್ಮದಿಯರು, ಹೊಸ ಅಹ್ಮದಿಯರು, ಯುವಕರು, ಮಕ್ಕಳು, ಪುರುಷರು, ಮಹಿಳೆಯರು ಮತ್ತು ಖಲೀಫರನ್ನು ಎಂದೂ ಭೇಟಿಯಾಗಿರದ ದೂರ ಪ್ರದೇಶ ನಿವಾಸಿಗಳಾದ ಅಹ್ಮದಿಯರು, ಇವರೆಲ್ಲರೂ ಖಿಲಾಫತ್‌ನೊಂದಿಗೆ ಹೊಂದಿರುವ ಸಂಬಂಧವು ಪ್ರಾಮಾಣಿಕವೂ ನಿಷ್ಠೆಯಿಂದ ಭರಿತವೂ ಆಗಿದೆ. ಅವರು ಅವುಗಳಲ್ಲಿ ವರ್ಧನೆ ಉಂಟುಮಾಡಲು ಪ್ರಯತ್ನಿಸುವವರೂ ಆಗಿದ್ದಾರೆ. ಆಯಾಕಾಲದ ಖಲೀಫರ ಸಂದೇಶ ಲಭಿಸಿದಾಗ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತಾರೆ. ಅವರು ಪ್ರೀತಿ ಮತ್ತು ನಿಕಟ ಬಾಂಧವ್ಯ ಹೇಗೆ ಪ್ರಕಟಿಸುತ್ತಿದ್ದಾರೆಂದರೆ ಆಶ್ಚರ್ಯವಾಗುತ್ತದೆ. ಇವೆಲ್ಲಾ ಅಲ್ಲಾಹನ ವಾಗ್ದಾನಗಳು ಈಡೇರಿದ ಬಗ್ಗೆ ಇರುವ ಕರ್ಮರೂಪದ ಸಾಕ್ಷ್ಯಗಳಾಗಿವೆ. ಜಮಾಅತಿನ ಅಭಿವೃದ್ಧಿ ಸಹ ಈ ಸಂಬಂಧದೊಂದಿಗೆ ಜೋಡಿಸಿದೆ. ಜಮಾಅತ್‌ಗೆ ಖಿಲಾಫತ್‌ನೊಂದಿಗಿರುವ ಸಂಬಂಧ, ಖಲೀಫರಿಗೆ ಜಮಾಅತ್‌ನೊಂದಿಗಿರುವ ಸಂಬಂಧ, ಅಲ್ಲಾಹನ ಬೆಂಬಲದ ಮತ್ತು ಸಹಾಯದ ಸಾಕ್ಷ್ಯವಾಗಿದೆ. ಇವುಗಳು ಕೇವಲ ಬಾಯಿಮಾತಿನ ಹೇಳಿಕೆಗಳಲ್ಲ. ಸಾವಿರಾರು, ಅಲ್ಲ ಲಕ್ಷಾಂತರ ಅಂತಹ ಘಟನೆಗಳು ಇವೆ. ಅವುಗಳು ಜಮಾಅತಿನ ಜನರ ನಿಷ್ಠೆಯನ್ನು ಪ್ರದರ್ಶಿಸುತ್ತವೆ. ಆ ಘಟನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಾದರೆ ಅಸಂಖ್ಯಾತ ಬೃಹತ್ ಗಾತ್ರದ ಸಂಪುಟಗಳಾಗುವುವು.

ಏನೇ ಇರಲಿ ಈಗ ನಾನು ಕೆಲವು ಘಟನೆಗಳು, ಭಾವನೆಗಳನ್ನು ಪ್ರಸ್ತಾಪಿಸುವೆನು ಇದು ಜಮಾಅತ್ತಿನ ಕಾಲಘಟ್ಟದ ಖಲೀಫರಿಂದ ಹಿಡಿದು ಪ್ರತಿಯೊಂದು ಕಾಲದಲ್ಲಿ ಇತ್ತು ಮತ್ತು ಈಗಲೂ ಸಹ ಇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ನಿಧನ ಹೊಂದಿದ ನಂತರದಿಂದ ಪ್ರಾರಂಭಗೊಂಡು ಇಂದು 112 ವರ್ಷಗಳ ನಂತರವೂ ಸಹ ಹಾಗೆಯೇ ಉಳಿದಿವೇ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದ ನಂತರ ಈ ಜಮಾಅತ್ ಕೊನೆಗೊಳ್ಳುವುದು ಎಂದು ಶತ್ರುಗಳು ಭಾವಿಸುತ್ತಿದ್ದರು. ಆದರೆ ಜಮಾಅತಿನ ಜನರ ದೃಢ ನಿಶ್ಚಯ, ಪ್ರೀತಿ, ಪ್ರಾಮಾಣಿಕತೆ ಮತ್ತು ನಿಷ್ಠೆಯ ಸಂಬಂಧ ಖಿಲಾಫತ್‌ನೊಂದಿಗೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ವರ್ಧಿಸುತ್ತಾ ಮುಂದುವರಿಯುತ್ತಿದೆ. ಹೀಗೆ ಆಗದಿರಲು ಹೇಗೆ ತಾನೆ ಸಾಧ್ಯ? ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನುಡಿದ ಭವಿಷ್ಯವಾಣಿಗಳ ಪ್ರಕಾರವೇ ಸಂಭವಿಸಿದುದಾಗಿದೆ. ಈಗ ನಾನು ಕೆಲವು ಘಟನೆಗಳನ್ನು ವಿವರಿಸುವೆನು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ರವರ ಖಿಲಾಫತ್ ಕಾಲದಿಂದ ಪ್ರಾರಂಭಿಸುವೆನು. ಒಂದೆರಡು ಘಟನೆಗಳು ಮೊದಲು ವಿವರಿಸುವೆನು.

ಅಲ್ ಬದರ್ ಪತ್ರಿಕೆಯ ಸಂಪಾದಕರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ರವರು ರೋಗ ಬಾಧಿತರಾಗಿದ್ದ ಕಾಲದ ಬಗ್ಗೆ ಹೀಗೆ ಬರೆಯುತ್ತಾರೆ: ಹಝ್ರತ್ ಖಲೀಫತುಲ್ ಮಸೀಹರ ಆರೋಗ್ಯದ ಬಗ್ಗೆ ಅನ್ವೇಷಿಸುವ ಖುದ್ದಾಮ್‌ಗಳ ಪತ್ರಗಳು ಅನೇಕ ಸಂಖ್ಯೆಯಲ್ಲಿ ಲಭಿಸುತ್ತಿದ್ದುವು. ಆ ಪತ್ರಿಕೆಗಳ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ಹೇಳಿದರು: ನನ್ನ ಆರೋಗ್ಯದ ಬಗ್ಗೆ ಅನ್ವೇಷಿಸುವ ಪತ್ರ ಬರೆದವರ ಪರವಾಗಿ ನಾನು ಪ್ರಾರ್ಥಿಸುತ್ತೇನೆ. ಸಂಪಾದಕರು ಹೀಗೆ ಬರೆಯುತ್ತಾರೆ: ಖಲೀಫರ ಪ್ರೇಮಿಗಳಾದ ಜನರು ತಮ್ಮ ಪ್ರೀತಿಯನ್ನು ವಿಸ್ಮಯಕರವಾಗಿ ಪ್ರಕಟಿಸುತ್ತಿದ್ದರು.

ಹಕೀಮ್ ಮುಹಮ್ಮದ್ ಹುಸೈನ್ ಖುರೈಶಿ ಸಾಹಿಬ್ ತನ್ನ ಪತ್ರದಲ್ಲಿ ಹೀಗೆ ಬರೆದಿದ್ದಾರೆ: ನಾನು ಒಂದು ದಿವಸ ಅಲ್ಲಾಹನೊಂದಿಗೆ ಹೀಗೆ ವಿನಂತಿಸಿದೆ – ಓ ನನ್ನ ಸಂರಕ್ಷಕನೇ, ಹಝ್ರತ್ ನೂಹ್ ಪ್ರವಾದಿಯ ಜೀವಿತದ ಆವಶ್ಯಕತೆ ಸೀಮಿತ ಪ್ರದೇಶಕ್ಕೋಸ್ಕರ ಮಾತ್ರವಾಗಿತ್ತು. ಆದರೆ ಈಗ ಇರುವ ಆವಶ್ಯಕತೆಗಳ ವಿಸ್ತಾರವನ್ನು ನೀನು ಮಾತ್ರ ತಿಳಿದಿರುವೆ. ನಮ್ಮ ಬೇಡಿಕೆಯನ್ನು ಅಂಗೀಕರಿಸು. ನಮ್ಮ ಇಮಾಮರಿಗೆ ಪ್ರವಾದಿ ನೂಹರಿಗೆ ದೊರಕಿದಂತಹ ಆಯುಸ್ಸು ದಯಪಾಲಿಸು.

ಮತ್ತೆ ಸಹೋದರ ಮುಹಮ್ಮದ್ ಹುಸೈನ್ ಸಾಹೆಬ್ ಪಂಜಾಬಿ, ಮದ್ರಾಸ್‌ನಿಂದ ಬರೆಯುತ್ತಾರೆ: ಹಝ್ರತ್ ಸಾಹೆಬ್‌ರವರ ಆರೋಗ್ಯ ಉತ್ತಮವಾಗಿದ್ದ ಬಗ್ಗೆ ಆಲಿಸಿದಾಗ ನನಗೆ ಎಷ್ಟರ ಮಟ್ಟಿಗೆ ಸಂತೋಷವಾಯಿತು ಎಂಬುದರ ಬಗ್ಗೆ ನನ್ನ ಆ ಕರುಣಾಮಯಿ ಅಲ್ಲಾಹನೇ ಬಲ್ಲವನಾಗಿದ್ದಾನೆ. (ಅಲ್‌ಬದರ್, 16–02–1911, ಪುಟ–2, ಸಂಪುಟ–10, ಸಂಚಿಕೆ–16)

ಮತ್ತೆ ಸಂಪಾದಕರು ಬರೆಯುತ್ತಾರೆ: "ಪ್ರೀತಿ ಅಗಾಧವಾದ ವಸ್ತು ಆಗಿದೆ. ನಮ್ಮ ಗೆಳೆಯ ಮಿಯಾಂ ಮುಹಮ್ಮದ್ ಬಖ್ಷ್ ಸಾಹೆಬ್ ಆಸ್ಟ್ರೇಲಿಯದಲ್ಲಿ ವ್ಯಾಪಾರಸ್ಥರಾಗಿದ್ದಾರೆ ಅವರು ತಮ್ಮ ಒಂದು ಪತ್ರದಲ್ಲಿ ಬರೆಯುತ್ತಾರೆ: ತಾವು ಖಾದಿಯಾನಿನ ಪತ್ರಿಕೆಯ ಮುಖ್ಯಾಂಶದಲ್ಲಿ ಹಝ್ರತ್ ಖಲೀಫತುಲ್ ಮಸೀಹ್‌ರವರ ಬಗ್ಗೆ ಮುಖ್ಯಾಂಶ ಬರಿಯುತ್ತೀರ ಇದರಲ್ಲಿ ಕೇವಲ ಖಲೀಫತುಲ್ ಮಸೀಹ್‌ರವರ ಪದಗಳಿರಬಾರದು ಬದಲಿಗೆ ಆ ಮುಖ್ಯಾಂಶಗಳಲ್ಲಿಯೇ ಖಲೀಫತುಲ್ ಮಸೀಹ್‌ರವರ ಯೋಗಕ್ಷೇಮದ ಬಗ್ಗೆ ಯಾವುದಾದರು ಒಂದು ಪದ ಚಿತ್ರಿಸುತ್ತಿರಬೇಕು ಏಕೆಂದರೆ ಬದರ್ ಪತ್ರಿಕೆ ತೆರೆಯುವಾಗ ಮೊಟ್ಟಮೊದಲಿಗೆ ಯಾವ ಪದಗಳನ್ನು ನಾವು ನೋಡಬಯಸುವುದು ಎಂದರೆ ಆ ಮುಖ್ಯಾಂಶಗಳಾಗಿವೆ. ಮತ್ತು ನಮ್ಮ ಮನಸ್ಸು ಬಯಸುವುದೇನೆಂದರೆ ಆ ಶಬ್ಧಗಳನ್ನು ಆಲಿಸಿದ ನಂತರ ಸಂಪೂರ್ಣ ಸಮಾಚಾರವನ್ನು ಓದುವುದಕ್ಕಿಂತ ಮುಂಚೆಯೇ ನಮ್ಮ ಮನಸ್ಸಿಗೆ ನೆಮ್ಮದಿ ದೊರೆಯುವಂತಾಗಬೇಕು. ಆದ್ದರಿಂದ ನಾವು ಈ ಆತ್ಮೀಯ ಗೆಳೆಯನ ನಿಷ್ಠೆಯನ್ನು ಗೌರವದಿಂದ ಕಾಣುತ್ತೇವೆ. ಅವರ ಈ ಆಸೆಯ ಮೇರೆಗೆ ಈಗ ಮುಖ್ಯಾಂಶವನ್ನು ಖಾಯಮ್‌ಗೊಳಿಸುತ್ತೇವೆ." (ಅಲ್‌ಬದರ್. 06–04–1911, ಪುಟ–1, ಸಂಪುಟ–10, ಸಂಚಿಕೆ–22,23)

ಹಝ್ರತ್ ಅಬೂ ಅಬ್ದುಲ್ಲಾ ಸಾಹೆಬ್ ಖೋವ ಬಾಜ್ವರವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸಹಾಬಿ ಆಗಿದ್ದರು. ಒಮ್ಮೆ ಅವರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಸನ್ನಿಧಿಯಲ್ಲಿ ಕುಳಿತಿದ್ದರು ಅವರು ಹೇಳಿದರು ನನಗೆ ಉಪದೇಶಿಸಿರಿ. ಇದಕ್ಕೆ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಾರೆ: ಯಾವ ವಿಷಯ ಕಾರ್ಯರೂಪಕ್ಕೆ ತರಬೇಕಾಗಿದೆಯೋ ಅದನ್ನು ನೀವು ಮಾಡಲಿಲ್ಲ ಎಂದಿಲ್ಲ. ಈಗ ಕೇವಲ ಪವಿತ್ರ ಖುರ್‌ಆನನ್ನು ಕಂಠಪಾಡುವುದು ಒಂದೇ ಉಳಿದಿದೆ. ಅವರು ಖಲೀಫತುಲ್ ಮಸೀಹ್‌ರವರ ಈ ಉಪದೇಶವನ್ನು ಆಲಿಸಿ 65ವರ್ಷ ಪ್ರಾಯದಲ್ಲಿ ಪವಿತ್ರ ಖುರ್‌ಆನ್ ಕಂಠಪಾಠ ಮಾಡಲು ಪ್ರಾರಂಭಿಸಿದರು. ಇಷ್ಟು ವಯಸ್ಸಿನಲ್ಲಿ ಅವರು ಪವಿತ್ರ ಖುರಾನಿನ ಹಾಫಿಝ್ ಆದರು. (ಅಲ್‌ಫಝ್ಲ್ ದಿನಪತ್ರಿಕೆ 8–12–2010, ಪುಟ–4, ಅಲ್‌ಫಝ್ಲ್ ಖಾದಿಯಾನ್ 19–04–1947)

ಇದು ಖಲೀಫತುಲ್ ಮಸೀಹ್‌ರವರ ಆದೇಶಗಳನ್ನು ಅನುಸರಿಸುವುದಾಗಿದೆ. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ರವರ ಕಾಲಘಟ್ಟದಲ್ಲಿ ಶುದ್ಧಿ ಚಳುವಳಿಯು ಬಹಳ ಚರ್ಚೆಯಲ್ಲಿತ್ತು. ಇದು 1923ರಲ್ಲಿ ಮಲ್‌ಕಾನ ಎಂಬಲ್ಲಿ ಪ್ರಾರಂಭವಾಯಿತು. ಈ ಪರಿಸ್ಥಿತಿಯನ್ನು ಕಂಡು ಹಝ್ರತ್ ಮುಸ್ಲಿಹ್ ಮೌಊದ್(ರ) ರವರ ಮನಸ್ಸು ತಳವಳಗೊಂಡಿತು. ಹೀಗಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ರವರು ಅದೇ ವರ್ಷ ಮಾರ್ಚ್ 9ರಂದು ಖುತ್‌ಬ ಜುಮುಅದಲ್ಲಿ ಅಹ್ಮದಿಯರನ್ನು ತಮ್ಮ ವೆಚ್ಚದಲ್ಲಿ ಆ ಸ್ಥಳಗಳಿಗೆ ಭೇಟಿ ನೀಡಿ ದಾವತ್ ಇಲಲ್ಲಾಹ್ (ಅಲ್ಲಾಹನ ಕಡೆ ಅಹ್ವಾನಿಸುವುದು) ನ ಮೂಲಕ ಧರ್ಮವನ್ನು ತ್ಯಜಿಸಿ ಹೋದವರನ್ನು ಪುನಃ ತಮ್ಮ ಧರ್ಮಕ್ಕೆ ಮರಳಿಸುವ ಯೋಜನೆಯನ್ನು ಜಮಾಅತ್ತಿನ ಮುಂದೆ ಪ್ರಸ್ತಾಪಿಸಿದಾಗ ಜಮಾಅತ್ತಿನ ಸದಸ್ಯರು ಅಸಮಾನ್ಯ ರೂಪದಲ್ಲಿ ಲಬ್ಬೈಕ್ ಎಂದು ಮುಂದಾದರು. ಉನ್ನತ ಪದವಿದಾರರು, ಸರ್ಕಾರಿ ನೌಕರರು, ಅಧ್ಯಾಪಕರು, ವ್ಯಾಪಾರಸ್ತರು ಮುಂತಾದವರೆಲ್ಲರು ಈ ಸ್ಥಳಗಳಿಗೆ ಭೇಟಿ ನೀಡಿ ದಾವತ್ ಇಲಲ್ಲಾಹ್ ಮಾಡಿದರು. ಅವರ ಈ ಪ್ರಯತ್ನಗಳಿಂದ ಅನೇಕ ಜನರು ಮತ್ತೊಮ್ಮೆ ಅಲ್ಲಾಹನ ಐಕ್ಯತೆಯ ಕಲಿಮ ಪಠಿಸಲು ಪ್ರಾರಂಭಿಸಿದರು. ಒಮ್ಮೆ ಹುಝೂರ್‌ರವರು ಒಂದು ಸಭೆಯಲ್ಲಿ ಆಸೀನರಾಗಿದ್ದಾಗ ಓರ್ವ ಹಿರಿಯ ವ್ಯಕ್ತಿ ಖಾರಿ ನಯೀಮುದ್ದೀನ್ ಸಾಹೆಬ್ ಬಂಗಾಲಿರವರು ಹೀಗೆ ಆಜ್ಞೆಪಡೆದು ಹೇಳಿದರು: ನನ್ನ ಮಕ್ಕಳು ಮೌಲವಿ ಝಿಲ್ಲುರ್ರಹ್ಮಾನ್ ಮತ್ತು ಬಿ.ಎ ಪದವಿ ಗಳಿಸುತ್ತಿರುವ ಮುತೀಉರ್ರಹ್ಮಾನ್ ಅವರಿಬ್ಬರು ನನಗೆ ಹೇಳಲಿಲ್ಲ ಆದರೆ ನಾನು ಅಂದಾಜು ಮಾಡಿರುವುದೇನೆಂದರೆ ಹುಝೂರ್ ನಿನ್ನೆ ದಿವಸ ರಾಜ್‌ಪೂತಾನಕ್ಕೆ ಹೋಗಿ ದಾವತ್ ಇಲಲ್ಲಾಹ್‌ಗಾಗಿ ವಖ್ಫ್ ಝಿಂದಗಿ ಮಾಡುವ ಯೋಚನೆಯಲ್ಲಿದ್ದಾರೆ ಮತ್ತು ಅಲ್ಲಿ ಇರಲು ಕೆಲವು ಕಠಿಣ ಶರತ್ತುಗಳನ್ನು ನೀಡಿದ್ದರಿಂದ ಅವರ ಮನಸ್ಸಿನಲ್ಲಿ ಒಂದು ವೇಳೆ ಈ ಎಲ್ಲಾ ಶರತ್ತುಗಳನ್ನು ಒಪ್ಪಿ ತಮ್ಮನ್ನು ಅರ್ಪಿಸಿದರೆ ಈ ವಯಸ್ಸಾದ ತಂದೆಗೆ ತೊಂದರೆ ಆಗಬಹುದು ಎಂದು ಬಂದಿರಬಹುದು. ಆದರೆ ನಾನು ಹುಝೂರ್‌ರವರ ಮುಂದೆ ಅಲ್ಲಾಹನನ್ನು ಸಾಕ್ಷಿಯಾಗಿರಿಸಿ ಹೇಳುತ್ತೇನೆ ನನಗೆ ಅವರು ಹೋಗುವುದಕ್ಕೆ ಮತ್ತು ಅಲ್ಲಿ ತೊಂದರೆಗಳನ್ನು ಅನುಭವಿಸುವಲ್ಲಿ ನನಗೆ ಯಾವ ದುಃಖವೂ ಇಲ್ಲ. ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ ಒಂದು ವೇಳೆ ಇವರಿಬ್ಬರು ಅಲ್ಲಾಹನ ಮಾರ್ಗದಲ್ಲಿ ಕಾರ್ಯನಿರ್ವಹಿಸುತ್ತಾ ಶಹೀದರಾದರು ನಾನು ಅವರಿಗಾಗಿ ಕಂಬನಿ ಸುರಿಸುವುದಿಲ್ಲ ಬದಲಿಗೆ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವೆನು. ಮತ್ತೆ ಕೇವಲ ಇವರಿಬ್ಬರೆ ಅಲ್ಲ ನನ್ನ ಮೂರನೇಯ ಪುತ್ರ ಮೆಹ್ಬೂಬುರ್ರಹ್ಮಾನ್ ಸಹ ಧರ್ಮ ಸೇವೆ ಮಾಡುತ್ತ ಶಹೀದನಾದರೂ ನನ್ನ ಹತ್ತು ಪುತ್ರರು ಇನ್ನೂ ಇರುತ್ತಿದ್ದರೂ ಅವರೆಲ್ಲರೂ ಈ ಮಾರ್ಗದಲ್ಲಿ ಶಹೀದರಾದರೂ ನನಗೆ ಯಾವುದೇ ರೀತಿಯ ದುಃಖಿಸುವುದಿಲ್ಲ. ಇದಕ್ಕೆ ಹುಝೂರ್‌ರವರು ಮತ್ತು ಜಮಾಅತ್ತಿನ ಸದಸ್ಯರು ಅವರಿಗೆ ಕೃತಜ್ಞತೆ ಅರ್ಪಿಸಿದರು. (ಅಲ್‌ಫಝ್ಲ್, 15–03–1923, ಪುಟ–11)

ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು 1924ರಲ್ಲಿ ಯುರೋಪಿನ ಪ್ರವಾಸ ಮಾಡಿದ್ದರು. ಅವರು ತಾತ್ಕಾಲಿಕವಾಗಿ ದೂರ ದೇಶಕ್ಕೆ ಹೋದುದು ಸಹ ಜಮಾಅತಿನ ಸದಸ್ಯರಿಗೆ ಮಾನಸಿಕ ತಳಮಳಕ್ಕೆ

ಕಾರಣವಾಗಿತ್ತು. ಒಂದು ವರದಿಯಿಂದ ಇದು ಪ್ರಕಟವಾಗುತ್ತದೆ. ಬಾಬೂ ಸಿರಾಜ್‌ದೀನ್ ಸಾಹಿಬ್ ಎಂಬ ಸ್ಟೇಶನ್ ಮಾಸ್ಟರ್ ಹೀಗೆ ಬರೆದಿದ್ದರು:

"ಓ ನನ್ನ ಯಜಮಾನರೇ, ನಾವು ದೂರದಲ್ಲಿದ್ದೇವೆ, ನಾವು ನಿರ್ಬಂಧಿತರಾಗಿದ್ದೇವೆ. ಸಾಧ್ಯವಾಗುವುದಾದರೆ ತಮ್ಮ ಪಾದಗಳ ಅಡಿಯ ಧೂಳಾಗುತ್ತಿದ್ದೆವು ಮತ್ತು ತಮ್ಮಿಂದ ಅಗಲಿಕೆಯ ದುಃಖ ಸಹಿಸುವ ಆವಶ್ಯ ತಲೆದೋರುತ್ತಿರಲಿಲ್ಲ. ಯಜಮಾನರೇ, ನಾನು ನಾಲ್ಕು ವರ್ಷಗಳಿಂದ ದಾರುಲ್ ಅಮಾನ್ (ಖಾದಿಯಾನ್) ಸಂದರ್ಶಿಸಿಲ್ಲ. ಆದರೆ ನನ್ನ ಮನಸ್ಸಿಗೆ ಸಮಾಧಾನವಿತ್ತು ನನಗೆ ಇಷ್ಟವಿರುವಾಗ ತಮ್ಮ ಬಳಿಗೆ ಸಂದರ್ಶಿಸಲು ಬರಬಹುದೆಂದು. ಆದರೆ ಈಗ ಪ್ರತಿ ದಿನ ಕಷ್ಟವಾಗುತ್ತಿದೆ. ಪರಿಶುದ್ಧನಾದ ಅಲ್ಲಾಹನು ತಮ್ಮನ್ನು ಜಯಶಾಲಿಯನ್ನಾಗಿ ಮತ್ತು ನೆರವು ಪಡೆದವನನ್ನಾಗಿ ಮಾಡಿ ಬೇಗನೆ ತಮ್ಮನ್ನು ಮರಳಿ ತರಲಿ ಎಂದು ಪ್ರಾರ್ಥಿಸುತ್ತೇನೆ." (ಸವಾನೆಹ್ ಫಝ್ಲೆ ಉಮರ್, ಸಂಪುಟ–5, ಪುಟ–475)

ಈ ಪ್ರೀತಿಯು ಯಾರು ಹುಟ್ಟಿಸಿದರು? ಹಝ್ರತ್ ಖಲೀಫತುಲ್ ಮಸೀಹ್ ಸಾನ(ರ) ಹೇಳುತ್ತಾರೆ: "ಸರ್‌ಗೋದದ ನಿವಾಸಿ ಆಗಿದ್ದ ಓರ್ವ ಯುವಕ ನನ್ನ ಯೋಜನೆಯನ್ನು ಕಳೆದ ವರ್ಷ ಆಲಿಸಿದನು. ಆ ಯುವಕ ಪಾಸ್ಪೋರ್ಟ್ ಇಲ್ಲದೆ ಅಫ್‌ಗಾನಿಸ್ತಾನ್‌ಗೆ ತಲುಪಿದ್ದನು." ಆತನು ಹೇಳಿದನು ಕಾಲಘಟ್ಟದ ಖಲೀಫರ ಆದೇಶವಿದೆ. ಅದನ್ನು ಪಾಲಿಸುವುದು ಅವಶ್ಯಕವಾಗಿತ್ತು. ತಬ್‌ಲೀಗಿನ ಯೋಜನೆ ಮಾಡಿ ತಕ್ಷಣವೇ ಅಫ್‌ಗಾನಿಸ್ತಾನ್‌ಗೆ ತಲುಪಿದನು. "ಅಲ್ಲಿ ತಲುಪಿದ ತಕ್ಷಣವೇ ತಬ್ಲೀಗ್ ಪ್ರಾರಂಭಿಸಿದನು." ಪಾಸ್ಪೋರ್ಟ್ ಸಹ ಆತನ ಬಳಿ ಇರಲಿಲ್ಲ. "ಸರ್ಕಾರವು ಅವರನ್ನು ಹಿಡಿದು ಸೆರೆಯಾಳು ಮಾಡಿತು. ಅವರು ಅಲ್ಲಿಯು ಖೈದಿಗಳಿಗೆ, ಅಧಿಕಾರಿಗಳಿಗೆ ತಬ್‌ಲೀಗ್ ಮಾಡಲು ಪ್ರಾರಂಭಿಸಿದರು. ಅಲ್ಲಿ ಕೆಲವು ಸ್ಥಳೀಯ ಅಹ್ಮದಿಯರ ಪರಿಚಯವಾಯಿತು ಮತ್ತು ಕೆಲವರ ಮೇಲೆ ಅವರು ಪ್ರಭಾವ ಬೀರಿದರು. ಕೊನೆಗೆ ಅಲ್ಲಿನ ಅಧಿಕಾರಿಯು ಹೀಗೆ ವರದಿ ನೀಡಿದರು ಈ ವ್ಯಕ್ತಿಯು ಇಲ್ಲಿ ಜೈಲಿನಲ್ಲಿಯು ಸಹ ತನ್ನ ಪ್ರಭಾವ ಬಿರುತ್ತಿದ್ದಾನೆ. ಅಲ್ಲಿನ ನೌಕರರು ಕೊಲ್ಲಲು ಫತ್ವ ನೀಡಿದರು ಆದರೆ ಮಂತ್ರಿಯು ಹೇಳಿದನು ಇದು ಆಂಗ್ಲ ಸರ್ಕಾರವಾಗಿದೆ ಆದ್ದರಿಂದ ನಾವು ಅವರನ್ನು ಕೊಲ್ಲಲು ಸಾಧ್ಯವಿಲ್ಲ. ಕೊನೆಗೆ ಸರ್ಕಾರವೂ ತನ್ನ ರಕ್ಷಣೆಯಲ್ಲಿ ಅವರನ್ನು ಹಿಂದುಸ್ತಾನಕ್ಕೆ ಕಳುಹಿಸಿದರು." ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಬರೆಯುತ್ತಾರೆ: "ಈಗ ಆತನು ಅನೇಕ ತಿಂಗಳ ನಂತರ ಹಿಂದಿರುಗಿದ್ದಾನೆ. ಆತನ ಧೈರ್ಯ ಹೇಗಿತ್ತು ಎಂದರೆ ನಾನು ಆತನಿಗೆ ಹೇಳಿದೆ ನೀನು ತಪ್ಪು ಮಾಡಿದೆ ಇನ್ನು ಬೇರೆ ರಾಷ್ಟ್ರಗಳಿದ್ದವು ಅಲ್ಲಿ ಹೋಗಬಹುದಾಗಿತ್ತು ಅಲ್ಲಿ ಸ್ವತಂತ್ರವಾಗಿ ತಬ್‌ಲೀಗ್ ಮಾಡಬಹುದಾಗಿತ್ತು ಎಂದು. ಆಗ ಆತನು ಹೇಳಿದನು ಈಗ ನೀವು ಯಾವುದಾದರು ರಾಷ್ಟ್ರ ಹೇಳಿರಿ ನಾನು ಅಲ್ಲಿ ಹೋಗುವೆನು. ಈ ಯುವಕನ ತಾಯಿ ಜೀವಂತವಾಗಿದ್ದಾರೆ ಆದರೆ ಇತನು ಅದಕ್ಕು ಸಿದ್ಧನಾಗಿದ್ದನು. ಅಂದರೆ ಆತನು ತನ್ನ ತಾಯಿಯನ್ನು ಭೇಟಿ ಮಾಡದೆ ಬೇರೆ ರಾಷ್ಟ್ರಕ್ಕೆ ಹೋಗಲು ಸಿದ್ಧನಾಗಿದ್ದನು ಆದರೆ ನನ್ನ ಆಜ್ಞೆಯ ಮೇರೆಗೆ ಆತನು ತನ್ನ ತಾಯಿಯನ್ನು ಭೇಟಿಯಾಗಲು ಹೋಗುತ್ತಿದ್ದಾನೆ." ಹಝ್ರತ್ ಖಲೀಫ ಸಾನಿ(ರ) ಹೇಳುತ್ತಾರೆ "ಈ ಯುವಕನ ಹಾಗೆ ಅನ್ಯ ಯುವಕರೂ ಇರುತ್ತಿದ್ದರೆ ನಾವು ಕೆಲವೇ ಸಮಯದಲ್ಲಿ ಲೋಕವನ್ನೆ ಗೆಲ್ಲಬಹುದಾಗಿತ್ತು." (ತಾರೀಖೇ ಅಹ್ಮದಿಯ್ಯತ್, ಸಂಪುಟ–8, ಪುಟ–44)

ಸೀರಿಯಾದ ಓರ್ವ ಸಹೋದರ ಮುಹಮ್ಮದ್ ಅಶ್ವಾ ಸಾಹೆಬ್ ಹಝ್ರತ್ ಮುಸ್ಲಿಹ್ ಮೌಊದ್(ರ) ಸೀರಿಯಕ್ಕೆ ಹೋದಾಗ ಅವರಿಗೆ ಹುಝೂರ್ ಅವರೊಂದಿಗೆ ಲೆಬನಾನ್ ಪ್ರವಾಸ ಕೈಗೊಳ್ಳು ಸೌಭಾಗ್ಯ ಲಭಿಸಿತು. ಉತ್ತಮ ವಕೀಲರಾಗಿದ್ದರು ಮತ್ತು ಖಿಲಾಫತ್‌ನೊಂದಿಗೆ ದೃಢ ಸಂಬಂಧ ಹೊಂದಿದ್ದರು. ವಕೀಲರಾಗಿದ್ದರಿಂದ ಅವರು ಪ್ರತಿಯೊಂದು ಮಾತಿಗೂ ಸಾಕ್ಷಿಗಳನ್ನು ಬಯಸುತ್ತಿದ್ದರು ಆದರೆ ಅವರಿಗೆ ಈ ಮಾತು ಖಲೀಫರು ಹೇಳಿದ್ದಾರೆ ಎಂದು ಹೇಳಿದರೆ ಸಾಕು ಅವರು ಅದನ್ನು ಒಪ್ಪುತ್ತಿದ್ದರು. ಈ ಆದೇಶ ಬಂದರೆ ಸಾಕು ಮಾತು ಮುಗಿಯಿತು. ಇದೇ ತೀರ್ಪು ಎನ್ನುತ್ತಿದ್ದರು. ಅವರೆಲ್ಲರು ಇಂತಹ ಸಂಬಂಧ ಹೊಂದಿದ್ದರು. (ಖುತ್‌ಬ ಜುಮುಅ 23–10–2009, ಖುತ್‌ಬಾತೆ ಮಸ್‌ರೂರ್, ಸಂಪುಟ–7, ಪುಟ–503–504)

ಖಿಲಾಫತೆ ಸಾಲಿಸದ ಕಾಲದ ಒಂದು ಘಟನೆ. ಅಮೇರಿಕದ ಒಬ್ಬ ಅಹ್ಮದಿ ಮಹಿಳೆಯಾದ ಸಿಸ್ಟರ್ ನಈಮ ಲತೀಫ್, ಅವರಿಗೆ ಖಿಲಾಫತ್ ಮತ್ತು ಆ ಕಾಲದ ಖಲೀಫರೊಂದಿಗೆ ಹೊಂದಿದ್ದ ಪ್ರೀತಿ ಎಷ್ಟು ಅಪಾರವಾಗಿತ್ತೆಂದರೆ ಅವರು ಖಲೀಫರ ಆಜ್ಞೆಗಳನ್ನು ಅನುಸರಿಸುವುದಕ್ಕೆ ಪ್ರಥಮ ಸ್ಥಾನ ನೀಡುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹ್‌ತಆಲರವರು ಅಮೇರಿಕದ ಒಂದು ಯುನಿವರ್ಸಿಟಿಯಲ್ಲಿ ಪರದೆಯ ಮಹತ್ವದ ಬಗ್ಗೆ ಮಾಡಿದ ಭಾಷಣವನ್ನು ಆಲಿಸಿದ ಕೂಡಲೇ ಸಿಸ್ಟರ್ ನಈಮ ಲತೀಫ್ ಒಂದು ಹಿಜಾಬ್ ಪಡೆದುಕೊಂಡು ಅದನ್ನು ಧರಿಸಲು ತೊಡಗಿದರು. ಆ ಕಾಲದಲ್ಲಿ ಅವರು ವಾಸಿಸುತ್ತಿದ್ದ ಪ್ರದೇಶದಲ್ಲಿ ಇಸ್ಲಾಮೀ ಪರದೆ ಧರಿಸಿದ ಏಕಮಾತ್ರ ಮಹಿಳೆ ಅವರಾಗಿದ್ದರು. (ಖುತ್‌ಬಾತೆ ಮಸ್‌ರೂರ್, ಸಂಪುಟ–7, ಪುಟ–503–504)

ಅವರಲ್ಲಿ ಈ ಭಾವನೆ ಇತ್ತು: ಖಲೀಫರೊಂದಿಗೆ ಹೊಂದಿರುವ ಆಧ್ಯಾತ್ಮಿಕ ಸಂಬಂಧವನ್ನು ನಿಭಾಯಿಸಲು ಅವರೊಂದಿಗೆ ಮಾಡಿದ ಬೈಅತ್ ಶರತ್ತನ್ನು ಈಡೇರಿಸಲು ಅವರ ಆಜ್ಞೆ ಪಾಲಿಸಬೇಕಾದುದು ಆವಶ್ಯಕವಾಗಿದೆ ಎಂದು.

ನಝೀರ್ ಅಹ್ಮದ್ ಸಾಹೇಬ್ ಸಾನೆವಾಲ್, ಜಿಲ್ಲೆ ಖಾನೆವಾಲ್‌ರವರು ಒಂದು ಘಟನೆ ತಿಳಿಸಿದರು ಖಿಲಾಫತೆ ಸಾಲಿಸದ ಕಾಲದಲ್ಲಿ ಬಾಗಡ್‌ಸರ್‌ಗಾನದಲ್ಲಿ ಒಬ್ಬ ನಿಷ್ಠಾವಂತ ಅಹ್ಮದಿಯಾದ ಮುಹ್ತರಮ್ ಮೆಹರ್ ಮುಖ್ತಾರ್ ಅಹ್ಮದ್ ಸಾಹಿಬ್‌ರನ್ನು 1974ರಲ್ಲಿ ಶತ್ರುಗಳು ಬಹಳ ಕಿರುಕುಳಕ್ಕೆ ಒಳಪಡಿಸುತ್ತಿದ್ದರು. ಅವರು ಉತ್ಸಾಹಿಯಾದ ದಾಯೀ ಇಲಲ್ಲಾಹ್ ಆಗಿದ್ದುದರಿಂದ ಅವರ ಸಂಬಂಧಿಕರು ಸಹ ಕಠಿಣವಾಗಿ ಅವರನ್ನು ವಿರೋಧಿಸುತ್ತಿದ್ದರು ಮತ್ತು ಸಂಪೂರ್ಣವಾಗಿ ಅವರನ್ನು ಬಹಿಷ್ಕಾರ ಮಾಡಿದ್ದರು. ಅವರು ತನ್ನ ಊರಿನ ಜಮೀನನ್ನು ಮಾರಾಟ ಮಾಡಿ ರಬ್ವದ ಸಮೀಪ ಜಮೀನನ್ನು ಗುತ್ತಿಗೆಗೆ ಪಡೆದು ಕೃಷಿಮಾಡಲು ತೊಡಗಿದರು. ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹುರವರನ್ನು ಭೇಟಿಯಾಗಿ ಆ ವಿಷಯ ತಿಳಿಸಿದಾಗ ಹುಝೂರ್ ಅದನ್ನು ಇಷ್ಟಪಡಲಿಲ್ಲ. ಆ ಪ್ರದೇಶವನ್ನು ತ್ಯಜಿಸಿ ಬರಬಾರದಿತ್ತು ಎಂದು ಹೇಳಿದರು. ಆಗ ಮೆಹರ್ ಸಾಹಿಬರು ಖಲೀಫರ ಆಶಯ ಪ್ರಕಾರ ಕೂಡಲೆ ವರ್ತಿಸಲು ಪ್ರಾರಂಭಿಸಿದರು. ಗುತ್ತಿಗೆ ಪಡೆದಾಗ ನೀಡಿದ ಹಣವನ್ನು ಜಮೀನಿನ ಮಾಲಿಕನಿಂದ ಕೇಳಿದಾಗ ಅವನು ನೀಡಲಿಲ್ಲ. ಅವರು ಬೆಳೆದು ನಿಂತ ಫಸಲನ್ನು ಮತ್ತು ಗುತ್ತಿಗೆಗೆ ನೀಡಿದ ಹಣವನ್ನು ಸಹ ಬಿಟ್ಟು ತನ್ನ ಊರಾದ ಬಾಗಡ್‌ಸರ್‌ಗಾನಕ್ಕೆ ಮರಳಿ ಹೋದರು. ಅವರು ತಾನು ಮಾರಿದ ಜಮೀನನ್ನು ಹೆಚ್ಚು ಬೆಲೆ ನೀಡಿ ಮರಳಿ ಖರೀದಿಸಿದರು. ಅನಂತರ ಅವರು ಹಝ್ರತ್ ಖಲೀಫತುಲ್ ಮಸೀಹರ ಸಮೀಪಕ್ಕೆ ಹೋಗಿ ನಾನು ತಮ್ಮ ಆಜ್ಞೆಯನ್ನು ಈಡೇರಿಸಿರುವೆನು ಎಂದು ಹೇಳಿದರು. ಹುಝೂರ್ ಅದರ ಬಗ್ಗೆ ಸಂತೋಷ ಪ್ರಕಟಿಸಿದರು. ಮೆಹರ್ ಸಾಹಿಬರು ಸಹ ಅದರ ಬಗ್ಗೆ ಬಹಳ ಸಂತೋಷಪಡುತ್ತಿದ್ದರು. (ಅಲ್‌ಫಝಲ್ ದಿನ ಪತ್ರಿಕೆ, 10–05–2010, ಪುಟ–5)

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ರವರು ತಮ್ಮ ಒಂದು ಖುತ್‌ಬ ಜುಮಾದಲ್ಲಿ ಹೇಳಿದರು: ನಾನು 1974ರಲ್ಲಿ ಆಫ್ರೀಕದ ಪ್ರವಾಸ ಕೈಗೊಂಡೆ. ಅಲ್ಲಿ ಒಂದು ಕಡೆ ನಮ್ಮ ಮುಬಲ್ಲಿಗ್ ಒಂದು ಕಾರ್ಯಕ್ರಮವನ್ನು ಏರ್ಪಡಿಸಿದರು. ಅದು ನನಗೆ ಬಹಳ ಕಷ್ಟದ ಕಾರ್ಯಕ್ರಮವಾಗಿತ್ತು. ಏಕೆಂದರೆ 100 ಮೈಲಿ ದೂರ ಪ್ರಯಾಣಿಸಿ ತಲುಪಿದಾಗ ನಾನು ಜಮಾಅತ್ತಿನ ಸದಸ್ಯರೊಂದಿಗೆ ಹಸ್ತಲಾಘವ ಮಾಡಲು ಸಾಧ್ಯವಾಗಲಿಲ್ಲ. ನಾನು 100 ಮೈಲಿ ದೂರವನ್ನು ಪ್ರಯಾಣಿಸಿದ್ದರಿಂದ ಬಹಳ ಸಂಕ್ಷಿಪ್ತ ಕಾರ್ಯಕ್ರಮ ಏರ್ಪಡಿಸಿದ್ದರು. ಹೀಗಾಗಿ ಅಲ್ಲಿನ ಸದಸ್ಯರನ್ನು ಭೇಟಿಯಾಗಲು ಹಸ್ತಲಾಘವ ಮಾಡಲು ಸಾಧ್ಯವಾಗಲಿಲ್ಲ. ಏಕೆಂದರೆ ನನಗೆ ಅಲ್ಲಿ ಒಂದು ಉಪನ್ಯಾಸ ನೀಡಬೇಕಾಗಿತ್ತು. ಅಲ್ಲಿ ಅನೇಕ ಅನ್ಯ ರಾಷ್ಟ್ರದ ಕ್ರೈಸ್ತರು ಬಂದು ಸೇರಿದ್ದರು. ಅವರು ಹೇಳುತ್ತಾರೆ ನಾನು ಉಪನ್ಯಾಸ ನೀಡಿದೆ, ಪ್ರಶ್ನೋತ್ತರ ಕಾರ್ಯಕ್ರಮವೂ ಸುದೀರ್ಘವಾಗಿ ನಡೆದಿದ್ದರಿಂದ ಬಹಳ ಹೊತ್ತಾಗಿತ್ತು. ಆಗ ನಮ್ಮ ಮುಬಲ್ಲಿಗ್ ಸಾಹೆಬರು ಹಸ್ತಲಾಘವ ಮಾಡಲು ಸಾಧ್ಯವಿಲ್ಲ ಎಂದು ಘೋಷಿಸಿದರು. ಹುಝೂರ್ ಹೇಳಿತ್ತಾರೆ: ಆ ಎಲ್ಲಾ ಜನರು ತಮ್ಮ ಜೀವನದಲ್ಲಿ ಮೊಟ್ಟಮೊದಲಿಗೆ ಖಲೀಫರನ್ನು ನೋಡಿದ್ದರು, ಅವರು ಮತ್ತೊಮ್ಮೆ ಭೇಟಿಯಾಗುತ್ತಾರೋ ಇಲ್ಲವೋ ಎಂದು ಅವರಿಗೆ ಗೊತ್ತಿರಲಿಲ್ಲ ಆದ್ದರಿಂದ ಎಲ್ಲರೂ ನನ್ನೊಂದಿಗೆ ಹಸ್ತಲಾಘವ ಮಾಡಲು ಮುಗಿಬಿದ್ದರು. ಹಝ್ರತ್ ಖಲೀಫ ಸಾಲಿಸ್(ರ) ಹೇಳುತ್ತಾರೆ: ಅಲ್ಲಿನ ಸ್ಥಳೀಯ ಅಹ್ಮದಿಯರು ನನ್ನ ಪ್ರೈವೇಟ್ ಸೆಕ್ರೇಟರಿ ಮತ್ತು ಇನ್ನಿತರ ಜನರನ್ನು ಹೇಗೆ ದೂಡಿದರು ಎಂದು ಅವರಿಗೆ ತಿಳಿಯಲಿಲ್ಲ. ಅನಂತರ ಹಸ್ತಲಾಘವ ಪ್ರಾರಂಭವಾಯಿತು. ಅವರು ಹೇಳುತ್ತಾರೆ: ಸರಿ ಹಸ್ತಲಾಘವ ಆಯಿತು ಆದರೆ ಆ ಹಸ್ತಲಾಘವವೂ ಹೇಗಿರುತ್ತಿತ್ತು ಎಂದರೆ ಹಸ್ತಲಾಘವ ಮಾಡುವ ಯಾರು ನನ್ನ ಕೈ ಬಿಡುತ್ತಾ ಇರಲಿಲ್ಲ. ನನ್ನ ಮುಖ ನೋಡುತ್ತಿದ್ದರು ಕೈ ಬಿಡುತ್ತಾ ಇರಲಿಲ್ಲ. ಜೊತೆ ಇದ್ದವರು ಕಾಯುತ್ತಲೇ ಇರುತ್ತಿದ್ದರು. ಹೀಗೆ ಅನೇಕ ಜನರು ಮಾಡುತ್ತಿದ್ದರು ಅವರ ಹಿಂದೆ ಬರುವವರು ಅವರ ಕೈ ಹಿಡಿದು ಮುಂದೆ ಸರಿಸುತ್ತಿದ್ದರು. ಏನೇ ಇರಲಿ ಹುಝೂರ್ ಹೇಳುತ್ತಾರೆ: ಬಹಳ ಕಷ್ಟದಿಂದ ಅಲ್ಲಿಂದ ಹೊರಬಂದೆವು. ಇದು ಅನ್ಯರಿಗೆ ತಿಳಿಸುವುದಕ್ಕಾಗಿದೆ. ನಮ್ಮ ಜನರಿಗೆ ಇದು ತಿಳಿದೇ ಇದೆ. ನಮ್ಮ ಜಮಾಅತ್ತಿನವರಿಗೆ ಖಲೀಫರ ಹಾಗೂ ಜಮಾಅತ್ತಿನ ಸದಸ್ಯರ ನಡುವೆ ಇರುವ ಸಂಬಂಧದ ಬಗ್ಗೆ ಅರಿವಿದೆ. ಜನರಿಗೆ ತಿಳಿಸ ಬಯಸುವುದೇನೆಂದರೆ ನಾನು ಮೂರ್ಖನಲ್ಲ ನಾನು ನನ್ನಲ್ಲಿ ಯಾವುದಾದರು ವೈಶಿಷ್ಟ್ಯ ಇರುವುದರಿಂದ ಜನರು ಐದು ಸಾವಿರ ಮೈಲಿ ದೂರ ಪ್ರಯಾಣಿಸಿ ಹೀಗೆ ಬಂದು ಭೇಟಿಯಾಗುತ್ತಾರೆ ಅವರೆಲ್ಲರು

ನನ್ನನ್ನು ನೋಡಿಯೂ ಇಲ್ಲ. ಅವರೆಲ್ಲರು ನನ್ನು ಹಸ್ತಲಾಘವ ಮಾಡಲು ಹೀಗೆ ಮುಗಿಬೀಳುತ್ತಾರೆ ಎಂದು ಹೇಳುವುದರ ಬದಲು ಈ ಪ್ರೀತಿ ಅಲ್ಲಾಹನು ಹುಟ್ಟಿಸಿರುವುದು ಎನ್ನಬೇಕಾಗಿದೆ. (ಖುತ್‌ಬಾತೆ ನಾಸಿರ್, ಸಂಪುಟ–6, ಪುಟ–547–548, ಖುತ್‌ಬ ಜುಮುಅ 22–10–1976)

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲ ಹೇಳುತ್ತಾರೆ: "ಆಫ್ರಿಕದ ದೇಶಗಳಲ್ಲಿ ಸಂಭವಿಸಿರುವ ಉಜ್ವಲ ಪರಿವರ್ತನೆಗಳ ಹಿಂದೆ ಕಾರ್ಯನಿರತರಾಗಿದ್ದ ವಾಕಿಫೇ ಝಿಂದಗಿ ಜನರ ಬಲಿದಾನಗಳ ಫಲವಾಗಿ ಸಂಭವಿಸಿದವುಗಳಾಗಿವೆ. ಆ ದೇಶಗಳಲ್ಲಿ ಎಷ್ಟು ವಿಸ್ಮಯಕರ ಬದಲಾವಣೆಗಳು ಸಂಭವಿಸಿವೆ ಎಂದರೆ ಅಲ್ಲಿನ ಜಮಾಅತ್‌ಗಳು ಕಲ್ಪನೆ ಮಾಡಲು ಸಹ ಸಾಧ್ಯವಿರಲಿಲ್ಲ. ಬಹಳ ಅನುಭವಶಾಲಿಗಳೂ ತಮ್ಮ ದೇಶಗಳ ಸರಕಾರಗಳಲ್ಲಿ ಪ್ರಭಾವಶಾಲಿಗಳೂ ಆಗಿರುವ ಕೆಲವು ಅಹ್ಮದಿಯರು ನನ್ನೊಂದಿಗೆ ಹೇಳಿದರು: ನಮ್ಮ ಕೋಮಿನ ಜನರು ಅಹ್ಮದಿಯ್ಯತ್‌ನೊಂದಿಗೆ ಪ್ರೀತಿ ಮತ್ತು ಸಹಾಯದಲ್ಲಿ ಇಷ್ಟು ಮುಂದೆ ಸಾಗಿದ್ದಾರೆ ಎಂದು ಸ್ವತಃ ನಮಗೆ ಸಹ ತಿಳಿದಿರಲಿಲ್ಲ. ಅವರು ತಮಗೆ ಸಂದೇಶ ತಲಪಿಸಬೇಕೆಂದು ತಯಾರಾಗಿದ್ದಾರೆ. ಒಬ್ಬರು ಹೇಳಿದರು: ಅಹ್ಮದಿಯಾ ಜಮಾಅತಿನ ಖಲೀಫರಿಗೆ ಇಂತಹ ಸೇವೆ ಅರ್ಪಿಸುವ ಭಾಗ್ಯ ಲಭಿಸುವುದೆಂದು, ಇಂತಹ ಪ್ರೀತಿ ಪ್ರಕಟಿಸುವ ಸಂದರ್ಭ ಸಿಗುವುದೆಂದು ನಾನು ಊಹಿಸಿಯೇ ಇರಲಿಲ್ಲ. ಆ ವ್ಯಕ್ತಿ ಹೇಳಿದರು: ನಾನು ಇಲ್ಲಿ ನೋಡಿದಂತಹ ಜನರ ವರ್ತನೆ, ದೇಶಗಳ ಅಧ್ಯಕ್ಷರೊಂದಿಗೆ ಜನರು ವರ್ತಿಸುವ ರೀತಿಯಲ್ಲಿವೆ. ಆದರೆ ಅವರು ಹಾಗೆ ವರ್ತಿಸುವುದು ಲೌಕಿಕ ಲಾಭದ ದೃಷ್ಟಿಯಿಂದ ಆಗಿರುತ್ತದೆ. ಬೇರೆ ಯಾರೊಂದಿಗೂ ಜನರು ಈ ರೀತಿ ವರ್ತಿಸುವುದನ್ನು ನಾನು ಕಂಡಿಲ್ಲ. ಅದು ಸಹ ನಮ್ಮ ಜಮಾಅತಿನ ಪ್ರಯತ್ನಗಳ ಕಾರಣದಿಂದಲ್ಲ. ಇಲ್ಲಿ ಸಂಭವಿಸುತ್ತಿರುವುದೆಲ್ಲಾ ಅದೃಶ್ಯ ಶಕ್ತಿಯ ಮೂಲಕವಾಗಿದೆ. ವಿಸ್ಮಯಕರವಾಗಿ ಹೀಗೆ ಸಂಭವಿಸುತ್ತಾ ಇದೆ. (ಖುತ್‌ಬಾತೆ ತಾಹಿರ್, ಸಂಪುಟ–7, ಪುಟ–134–135)

ಇವೆಲ್ಲಾ ಅಲ್ಲಾಹನ ಮೂಲಕ ಸೃಷ್ಟಿಸಲ್ಪಟ್ಟವುಗಳಾಗಿವೆ. ಅದೇ ರೀತಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ಪಾಕಿಸ್ತಾನದ ಬಗ್ಗೆ ಪ್ರಸ್ತಾಪಿಸುತ್ತಾ ಒಮ್ಮೆ ಹೇಳುತ್ತಾರೆ, ಕೆಲವು ಕುಂದು ಕೊರತೆಗಳನ್ನು ಹೇಳಿದರು:

"ಪಾಕಿಸ್ತಾನದಲ್ಲಿಯು ಕೆಲವು ಕೆಡಕುಗಳು ಪ್ರಾರಂಭವಾಗಿದೆ ಉದಾಹರಣೆಗೆ ವೀಡಿಯೋ ಕ್ಯಾಸೆಟ್‌ನ ತಪ್ಪು ಬಳಕೆಯು ಪ್ರಾರಂಭವಾಗಿದೆ." ಅವರು ಹೇಳುತ್ತಾರೆ: "ನಾನು ಒಮ್ಮೆ ಒಂದು ಖುತ್‌ಬದಲ್ಲಿ ಘೋಷಿಸಿದೆ. ಕೆಲವು ಕೆಟ್ಟು ಸಂಪ್ರದಾಯಗಳು ಪ್ರಾರಂಭವಾಗಿವೆ. ಇದರಿಂದ ಸಮುದಾಯದ ನೈತಿಕ ಸ್ಥಿತಿ ಇಲ್ಲವಾಗುವುದು, ಮನೆಯ ನೆಮ್ಮದಿ ಹಾಳಾಗುವುದು, ದಂಪತಿಗಳ ನಡುವೆ ಇದ್ದ ಪ್ರಾಮಾಣಿಕತೆಯು ಮುರಿಯುವುದು, ಅವರ ಸಂಬಂಧದಲ್ಲಿ ಕೊರತೆಯು ಉಂಟಾಗುವುದು. ಆದ್ದರಿಂದ ಇದು ಹುಟ್ಟಲು ಅವಕಾಶ ನೀಡಬೇಡಿ. ಹೀಗಾಗಿ ತದನಂತರ ನನಗೆ ಅನೇಕ ಜನರು ಪದೇ ಪದೇ ಪತ್ರಗಳನ್ನು ಪಾಕಿಸ್ತನದಿಂದ ಬರೆದರು ಅದರಲ್ಲಿ ಅವರು ಹೇಳಿದರು ನಾವು ಈ ಕೆಡಕಲ್ಲಿ ಸಿಲುಕಿದ್ದೆವು ಎಂದು. ತದನಂತರ ನಾನು ಅಲ್ಲಾಹನ ಆಸ್ತಾನದಲ್ಲಿ ಸಜ್‌ದ (ಸಾಷ್ಟಾಂಗ) ಮಾಡುತ್ತಾ ಅಲ್ಲಾಹನಲ್ಲಿ ಹೇಳಿದೆ ಈ ಕೆಡಕಿನಲ್ಲಿ ಮುಳುಗಿದವರು ನನಗೆ ಸ್ಪಷ್ಟವಾಗಿ ತಿಳಿಸಿದ್ದಾರೆ ಅವರೆಲ್ಲರು ಈ ತಪ್ಪು ಕೆಲಸದಲ್ಲಿ ನಿರತರಾಗಿದ್ದರು ಎಂದು. ಅಲ್ಲಾಹನ ಅನುಗ್ರಹದಿಂದ ಅವರೆಲ್ಲರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಜಮಾಅತ್ತಿನಲ್ಲಿ ಸೇರಿದ್ದಾರೆ. ನೇರವಾಗಿ ನಮಗೆ ನಿಮ್ಮ ಉಪದೇಶ ತಲುಪಿದಾಗ ನಾವು ನಮ್ಮ ಮನಸ್ಸಿನಲ್ಲಿದ್ದ ಸುಳ್ಳು ಮೂರ್ತಿಗಳನ್ನು ನಮ್ಮ ಮನಸ್ಸಿನಿಂದ ಹೊರಹಾಕಿದೆವು. ಆದ್ದರಿಂದ ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ಹೇಳುತ್ತಾರೆ: "ಜಮಾಅತ್ತಿನಲ್ಲಿ ಒಳಿತನ್ನು ಒಪ್ಪಲು ಅನೇಕ ಆತ್ಮಗಳಿರುವ ಅಂಶವೂ ನೈಜ್ಯವಾಗಿ ಸತ್ಯತೆಯ ಮೂಲವಾಗಿವೆ ಮತ್ತು ಈ ಸತ್ಯತೆಯ ಆತ್ಮವು ಯಾವ ಸುಳ್ಳುಗಾರನು ಎಂದಿಗೂ ಸೃಷ್ಟಿಸಲು ಸಾಧ್ಯವಿಲ್ಲ." (ಖುತ್‌ಬಾತೆ ತಾಹಿರ್, ಸಂಪುಟ–11, ಪುಟ–920)

ಇನ್ನು ನನ್ನ ಕಾಲದಲ್ಲಿ ನಡೆದ ಸಂಭವಗಳ ಬಗ್ಗೆ ಹೇಳುವುದಾದರೆ. 2004ರಲ್ಲಿ ನೈಜೀರಿಯಾದಲ್ಲಿ ನಾನು ಮಾಡಿದ ಸಂದರ್ಶನದ ಬಗ್ಗೆ ಹೇಳುತ್ತೇನೆ. ಅದು ಎರಡು ದಿನಗಳ ಸಂದರ್ಶನವಾಗಿತ್ತು. ಮೊದಲು ಅದರ ಬಗ್ಗೆ ನಿರ್ಧರಿಸಿರಲಿಲ್ಲ. ಅಲ್ಲಿಂದ ವಿಮಾನಯಾನ ಮಾಡಲು ಸಾಧ್ಯವಾಗುತ್ತಿದ್ದ ಕಾರಣ ಆಕಸ್ಮಿಕವಾಗಿ ನಿರ್ಬಂಧಿತ ಪರಿಸ್ಥಿತಿಯಲ್ಲಿ ಕಾರ್ಯಕ್ರಮ ನಡೆಸಲಾಯಿತು. ಆದರೆ ಅಲ್ಲಿಗೆ ಹೋದಾಗ ನನಗೆ ಮನವರಿಕೆಯಾಯಿತು ಇದು ಬಹಳ ಆವಶ್ಯಕವಾಗಿತ್ತು ಎಂದು. ಅಲ್ಲಿಗೆ ನಾನು ಹೋಗದಿರುತ್ತಿದ್ದರೆ ಅದು ಬಹಳ ದೊಡ್ಡ ತಪ್ಪಾಗುತ್ತಿತ್ತು. ಸ್ವಲ್ಪ ಸಮಯದ ಮೊದಲು ಅಲ್ಲಿ ಜಮಾಅತ್ತಿನ ಜಲ್ಸ ಸಹ ಆಗಿತ್ತು. ಬಹಳ ಸಂಖ್ಯೆಯಲ್ಲಿ ಜನರು ಜಲ್ಸದಲ್ಲಿ ಭಾಗವಹಿಸಿದ್ದರು. ನಾನು ಅಲ್ಲಿಗೆ ಹೋದಾಗ ನನ್ನನ್ನು ಕಾಣಲು ದೂರ ದೂರ ಪ್ರದೇಶಗಳಿಂದ ಜನರು ಆಗಮಿಸುವರೆಂದು ಯೋಚಿಸಿಯೇ ಇರಲಿಲ್ಲ. ಕೇವಲ ಎರಡು ಗಂಟೆಗಳ ಕಾಲ ನನ್ನನ್ನು ಕಾಣಲು ಅಂದಾಜು ಮೂವತ್ತು ಸಾವಿರ ಪುರುಷರೂ ಮಹಿಳೆಯರೂ ಬಂದು ಸೇರಿದ್ದರು. ಅವರ ಪ್ರಾಮಾಣಿಕತೆ ಮತ್ತು ನಿಷ್ಠೆಯ ದೃಶ್ಯಗಳು ವೀಕ್ಷಿಸಲು ಅರ್ಹವಾಗಿದ್ದುವು.

ಅವರಿಗೆ ಖಿಲಾಫತ್‌ನೊಂದಿಗೆ ಇದ್ದ ನಿಷ್ಠೆ ಮತ್ತು ಪ್ರೇಮ ವಿವರಿಸಲು ಅಸಾಧ್ಯವಾಗಿತ್ತು. ಅವರಲ್ಲಿ ಖಲೀಫರನ್ನು ಹಿಂದೆ ಎಂದೂ ನೋಡಿರದವರು, ಖಲೀಫರನ್ನು ನೇರವಾಗಿ ಕಂಡಾಗ ಹೇಗೆ ತಮ್ಮ ಭಾವನೆಗಳನ್ನು ಪ್ರಕಟಿಸಿದರೆಂದರೆ ಅವು ಆಶ್ಚರ್ಯಕರವಾಗಿದ್ದುವು. ನಾನು ಮರಳಿ ಬರುವಾಗ ದುಆದಲ್ಲಿ ಭಾಗವಹಿಸಿದ ಪುರುಷರು ಮತ್ತು ಮಹಿಳೆಯರು ಬಹಳ ಭಾವೋದ್ವೇಗಭರಿತರಾಗಿದ್ದರು. ಅವರ ಭಾವನೆಗಳ ಪ್ರಕಟಣೆ ಆಶ್ಚರ್ಯವಾಗುತ್ತದೆ. ಇಂತಹ ಪ್ರೀತಿಯನ್ನು ಅಲ್ಲಾಹನು ಮಾತ್ರ ಸೃಷ್ಟಿಸಬಲ್ಲನು ಮತ್ತು ಅವರು ಅಲ್ಲಾಹನಿಗೋಸ್ಕರವೇ ಪ್ರೀತಿ ಪ್ರಕಟಿಸುತ್ತಾರೆ. ವಿರೋಧಿಗಳಾದ ಮೌಲವಿಗಳು 'ನಾವು ಆಫ್ರಿಕದ ಈ ದೇಶದಲ್ಲಿ ಅಹ್ಮದಿಯಾ ಜಮಾಅತಿನ ಮಿಶನ್ ಬಂದ್ ಮಾಡಿಸಿದೆವು. ಇಂತಿಂತಹ ದೇಶದಲ್ಲಿ ನಮ್ಮೊಂದಿಗೆ ಆ ಬಗ್ಗೆ ವಾಗ್ದಾನ ಮಾಡಲಾಗಿದೆ' ಎಂದೆಲ್ಲಾ ಬಡಾಯಿ ಕೊಚ್ಚುತ್ತಿದ್ದಾರೆ. ಆ ಮೌಲವಿಗಳೊಂದಿಗೆ ಯಾರಾದರೂ ವಿಚಾರಿಸಲಿ. ಅಲ್ಲಿನ ಜನರು ಪ್ರಕಟಿಸುವ ನಿಷ್ಠೆ ಮತ್ತು ಎಂ.ಟಿ.ಎ ತೋರಿಸುತ್ತಿರುವ ಅವರ ಮುಖಚಹರೆಗಳು ಮತ್ತು ನಾವು ಸ್ವತಃ ಅಲ್ಲಿಗೆ ಹೋಗಿ ಕಾಣುತ್ತಾ ಇರುವವು ಇವುಗಳು ಏನೆಂದು ಅವರು ಹೇಳಲಿ. ಇವುಗಳು ಮಿಶನ್‌ಗಳನ್ನು ಬಂದು ಮಾಡಿಸಿದರ ಪರಿಣಾಮಗಳೇ? ಒಟ್ಟಾರೆ ಹೇಳುವುದಾದರೆ ಈ ಮೌಲವಿಗಳು ಬಡಾಯಿ ಕೊಚ್ಚುತ್ತಾ ಇರಲಿ. ಆದರೆ ನಮ್ಮ ಈಮಾನ್ ಬಲಿಷ್ಠವಾಗುತ್ತಿದೆ. (ಖುತ್‌ಬಾತೆ ಮಸ್‌ರೂರ್, ಸಂಪುಟ–2, ಪುಟ–253–254)

2008ರಲ್ಲಿ ಘಾನದ ಪ್ರವಾಸವಿತ್ತು. ಅಲ್ಲಿ ಅಲ್ಲಾಹನ ಅನುಗ್ರಹದಿಂದ ಜಮಾಅತ್ತಿನವರು ಒಂದು ಭೂಮಿ ಕರೀದಿಸಿದ್ದರು. ಸುಮಾರು 500 ಏಕರೆಯ ಬಹಳ ವಿಶಾಲವಾದ ಜಾಗವದು. ಅಲ್ಲಿ ಜಲ್ಸ ಏರ್ಪಡಿಸಲಾಗಿತ್ತು. ಅಲ್ಲಿ ಸಾಮಾನ್ಯವಾಗಿ ಎಲ್ಲಾ ಪುರುಷರು ಮತ್ತು ಮಹಿಳೆಯರು ನನ್ನ ಆಗಮನದ ಮುಂಚೆಯೇ ಅಲ್ಲಿಗೆ ಬಂದು ಸೇರಿದ್ದರು. ಈ ಹೊಸ ಜಾಗದಲ್ಲಿ ಮುಂಚೆ ಒಂದು ಪೋಲ್ಟ್ರಿ ಫಾರಮ್ ಇರುತ್ತಿತ್ತು. ಅದರ ಶೆಡ್‌ಗಳಲ್ಲೆ ಅಲ್ಲಿನ ಜಮಾಅತ್ತಿನವರು ಜಲ್ಸದಲ್ಲಿ ಭಾಗವಹಿಸುವವರಿಗೆ ವಸತಿಯ ವ್ಯವಸ್ಥೆ ಮಾಡಿದ್ದರು. ಇಷ್ಟು ವ್ಯವಸ್ಥೆ ಮಾಡಿದರೂ ಸಹ ಅಲ್ಲಿ ಜಾಗದ ಕೊರತೆ ಇತ್ತು. ಭಾಗವಹಿಸಿದ ಅನೇಕ ಜನರು ಜಾಗದ ತೊಂದರೆ ಇದ್ದರೂ ಸಹ ಯಾರೊಬ್ಬರೂ ಜಾಗದ ಕೊರತೆಯ ಬಗ್ಗೆ ಎಂದು ದೂರಲಿಲ್ಲ. ಅವರಲ್ಲಿ ಅನೇಕ ಜನರು ಉತ್ತಮ ವರ್ಗದವರೂ ಇದ್ದರು, ವ್ಯಾಪಾರಿಗಳಿದ್ದರು, ಅಧ್ಯಾಪಕರಿದ್ದರು, ಅನೇಕ ಬೇರೆ ಉತ್ತಮ ಕಸಬು ಮಾಡುವವರೂ ಇದ್ದರು. ಅವರಿಗೆ ನಿದ್ರಿಸಲು ಜಾಗ ಸಿಗಲಿಲ್ಲವಾದರೂ ಅವರು ಹೊರಗಡೆ ಪಂಕ್ತಿಗಳಲ್ಲಿ ಮಲಗಿಕೊಂಡರು. ಬಹಳ ತಾಳ್ಮೆ, ಸಹನೆಯಿಂದ ವ್ಯವಹರಿಸಿದರು. ಯಾರೋ ಒಬ್ಬ ವ್ಯಕ್ತಿ ಅವರಿಗೆ ಪ್ರಶ್ನಿಸಿದರು ನಿಮಗೆ ಹೊರಗಡೆ ಮಲಗಲು ತೊಂದರೆ ಆಗಿರಬಹುದು? ಎಂದು ಆಗ ಅವರೆಲ್ಲರು ಹೇಳಿದರು ನಾವು ಜಲ್ಸ ಆಲಿಸಲು ಮತ್ತು ಖಲೀಫರನ್ನು ನೋಡಲು ಬಂದಿರುವುದು. ಎರಡು ದಿವಸದ ತಾತ್ಕಾಲಿಕ ತೊಂದರೆ ಅನುಭವಿಸುವುದರಲ್ಲಿ ಕಷ್ಟವಿಲ್ಲ. ನಾವು ಸಂತೋಷದಿಂದ ಜಲ್ಸದಲ್ಲಿ ಭಾಗಿಯಾಗಲು ಅಲ್ಲಾಹನು ನಮಗೆ ಅನುಗ್ರಹಿಸಿದ್ದಾನೆ.

ಬುರ್ಕಿನಾ ಫ್ಯಾಸೊದಿಂದಲೂ ಜನರು ಅಲ್ಲಿ ಆಗಮಿಸಿದ್ದರು. ಅದೇ ರೀತಿ ಅನೇಕ ರಾಷ್ಟ್ರಗಳಿಂದಲೂ ಜನರು ಆಗಮಿಸಿದ್ದರು. ನನಗೆ ತಿಳಿದು ಬಂದ ವಿಷಯವೇನೆಂದರೆ ಬುರ್ಕಿನೋಫಾಸೊದಿಂದ ಬಂದ ತಂಡವು ಬಹಳ ದೊಡ್ಡದಾಗಿತ್ತು. ಅವರಲ್ಲಿ ಕೆಲವು ಜನರಿಗೆ ಊಟ ಸಿಗಲಿಲ್ಲ, ಸುಮಾರು ಮೂರು ಸಾವಿರ ಜನರಿದ್ದರು. 300 ಖುದ್ದಾಮ್‌ಗಳು ಸೈಕಲ್ ಮುಖಾಂತರ 1600 ಕಿಲೋಮೀಟರ್ ದೂರವನ್ನು ಕ್ರಮಿಸಿ ಬಂದು ಸೇರಿದ್ದರು. ನಾನು ಒರ್ವ ಮುಬಲ್ಲಿಗ್‌ರಿಗೆ ಹೇಳಿ ಕಳಿಸಿದೆ ಅವರಿಗೆ ಊಟದ ಸಿಗಲಿಲ್ಲ. ಅವರಲ್ಲಿ ಕ್ಷಮೆ ಯಾಚಿಸಿರಿ ಮತ್ತು ನೀವು ಅವರ ವ್ಯವಸ್ಥೇ ಮಾಡಬೇಕು. ಅವರು ಕ್ಷಮೆಯ ಸಂದೇಶ ಅವರ ಕಡೆ ತಲುಪಿಸಿದಾಗ ಅವರು ಉತ್ತರಿಸಿದರು: ನಾನು ಯಾವ ಉದ್ದೇಶಕ್ಕೆ ಬಂದಿದ್ದೆವೋ ಆ ಉದ್ದೇಶ ಈಡೇರಿತು. ಊಟ ನಾವು ದಿನಾಗಲೂ ಉಣ್ಣುತ್ತೇವೆ. ಈಗ ನೋಡಿರಿ ಈ ಬಡ ಜನರು ದಿನಾಗಲೂ ಏನು ತಿನ್ನುತ್ತಾರೆ ಎಂದು. ಅವರು ಹೇಳಿದರು ನಾವು ಈ ಉಣ್ಣುತ್ತಿರುವ ಊಟವು, ಆಧ್ಯಾತ್ಮಿಕ ಊಟ ನಮಗೆ ದಿನಾಗಲೂ ದೊರೆಯುವುದಿಲ್ಲ. ಬುರ್ಕಿನಾಫ್ಯಾಸೋ ಜಮಾಅತ್ ಈಗಲೂ ಅಷ್ಟು ಹಳೆಯ ಜಮಾಅತ್ ಅಲ್ಲ. ನಾನು ಸಂದರ್ಶನಕ್ಕೆ ಹೋದಾಗ ಆ ಜಮಾಅತ್ ಸುಮಾರು ಹತ್ತು, ಹದಿನೈದು ವರ್ಷ ಹಳೆ ಜಮಾಅತ್ ಆಗಿತ್ತು. ಈಗ ಮೂವತ್ತು ವರ್ಷ ಹಳೆ ಜಮಾಅತ್ ಆಗಿರಬಹುದು ಆದರೆ ಅವರು ನಿಷ್ಠೆ, ಪ್ರೀತಿಯಲ್ಲಿ ಪ್ರಗತಿ ಹೊಂದುತ್ತಲೇ ಹೋಗುತ್ತಿದ್ದಾರೆ. ಬಡತನದ ಬಗ್ಗೆ ಹೇಳುವುದಾದರೆ ಕೆಲವರು ಧರಿಸಿದ ಒಂದು ಜೋಡಿ ಬಟ್ಟೆ ಮಾತ್ರವೇ ಇತ್ತು ಅವರ ಬಳಿ. ಅದರಲ್ಲಿಯೇ ಅವರು ಮೂರು, ನಾಲ್ಕು ದಿವಸ, ಒಂದುವಾರದ ದಿವಸ ಇದ್ದು ಹಿಂದಿರುಗಿದರು. ಹಣ ಸಂಗ್ರಹಿಸಿ ಜಲ್ಸಕ್ಕೆ ಆಗಮಿಸಿದ್ದರು. ಖಿಲಾಫತ್ ಜುಬಿಲಿಯ ಜಲ್ಸವಾಗಿತ್ತು ಅದೂ ಖಲೀಫರ

ಉಪಸ್ಥಿತಿಯಲ್ಲಿ ಏರ್ಪಡಿಸಲಾಗುತ್ತಿದೆ ಆದ್ದರಿಂದ ಅದರಲ್ಲಿ ನಾವು ಸಹ ಭಾಗಿಯಾಗಬೇಕೆಂದು ಭಾಗವಹಿಸಿದ್ದರು. ಇಂತಹ ಪ್ರೀತಿ ಅಲ್ಲಾಹನ ಹೊರತು ಯಾರು ಸೃಷ್ಟಿಸಲು ಸಾಧ್ಯವಿಲ್ಲ. ಸೈಕಲ್ ಮುಖಾಂತರ ಬಂದು ಸೇರಿದ್ದ ಜನರ ನಿಷ್ಠೆಯ ಬಗ್ಗೆ ಅಂದಾಜು ಮಾಡಬೇಕಾದರೆ ಅವರು ಏಳು ದಿವಸದ ಕಾಲ ಪ್ರಯಾಣಿಸಿ ಅನೇಕ ಜಾಗಗಳಲ್ಲಿ ಉಳಿದುಕೊಂಡು ಬಂದು ಸೇರಿದ್ದರು. ಈ ಸೈಕಲ್ ಸವಾರರಲ್ಲಿ 50–60 ವರ್ಷದ ಪುರುಷರು ಮತ್ತು 13–14 ವರ್ಷ ಪ್ರಾಯದ ಇಬ್ಬರು ಮಕ್ಕಳೂ ಸೇರಿದ್ದರು. ಅಲ್ಲಿನ ಖುದ್ದಾಮುಲ್ ಅಹ್ಮದಿಯಾದ ಅಧ್ಯಕ್ಷರು ಒಬ್ಬನನ್ನು ಕೇಳಿದರು ತಮಗೆ ಬಹಳ ತೊಂದರೆ ಆಗಿರಬಹುದು? ಆಗ ಅವರು ಉತ್ತರಿಸಿದರು ಆದ್ಯ ಕಾಲದ ಅನೇಕ ಮುಸ್ಲಿಮರು ಅನೇಕ ಬಲಿದಾನಗಳನ್ನು ಅರ್ಪಿಸಿದ್ದಾರೆ. ನಾವು ಬಯಸುವುದೇನಂದರೆ ನಮ್ಮ ಖುದ್ದಾಮರು ಸಹ ಅದೇ ರೀತಿಯ ಬಲಿದಾನಗಳಿಗೆ ಸಿದ್ಧವಾಗಿರಬೇಕು. ಮತ್ತು ನಮ್ಮ ಆಸೆ ಏನಾಗಿತ್ತು ಎಂದರೆ ಖಿಲಾಫತ್ ಜೂಬಿಲೀ ಸಂದರ್ಭದಲ್ಲಿ ನಾವು ನಮ್ಮ ಖಿಲಾಫತ್‌ನೊಂದಿಗೆ ಇರುವ ನಿಷ್ಠೆ ಹಾಗೂ ಪ್ರೀತಿಯನ್ನು ವ್ಯಕ್ತಪಡಿಸಬೇಕು ಎಂದಾಗಿತ್ತು. ಮತ್ತು ಖಲೀಫರಿಗೆ ನಾವು ಬಲಿದಾನಗಳನ್ನು ನೀಡಲು ಸಿದ್ಧರಾಗಿದ್ದೇವೆ ಮತ್ತು ಎಲ್ಲಾ ರೀತಿಯ ಪಂಥಾಹ್ವಾನಗಳನ್ನು ಸ್ವೀಕರಿಸಲು ಸಿದ್ಧರಾಗಿದ್ದೇವೆ ಎಂದು ತೊರಿಸಬೇಕು. ಈ ಸೈಕಲ್ ಸವಾರರು ತಮ್ಮ ಪ್ರವಾಸ ಪ್ರಾರಂಭಿಸುವಾಗ ಓರ್ವ ಪತ್ರಕರ್ತರೂ ಅವರಿಗೆ ಕೇಳಿದರು ನಿಮ್ಮ ಸೈಕಲ್‌ಗಳು ಬಹಳ ಹಾಳು ಪರಿಸ್ಥಿತಿಯಲ್ಲಿವೆ. ಇಲ್ಲಿನ ಯೂರೋಪಿನ ಸೈಕಲ್‌ಗಳ ಹಾಗಿಲ್ಲ, ನೀವೆಲ್ಲರು ಹೇಗೆ ಇಷ್ಟು ದೂರ ಪ್ರವಾಸ ಕೈಗೊಳ್ಳುವಿರೀ? ಎಂದು. ಆಗ ಜಮಾಅತ್ತಿನ ಪ್ರತಿನಿಧಿ ಹೇಳಿದರು ನಮ್ಮ ಸೈಕಲ್‌ಗಳು ಹಾಳಗಿವೆ ಆದರೆ ನಮ್ಮ ಈಮಾನ್ ಮತ್ತು ನಮ್ಮ ಗುರಿ ದೊಡ್ಡದಾಗಿವೆ. ನಾವು ಖಿಲಾಫತ್‌ನ ಬಹುಮಾನಕ್ಕಾಗಿ ಕೃತಜ್ಞತೆ ಅರ್ಪಿಸಲು ಪ್ರವಾಸ ಕೈಗೊಳ್ಳುತ್ತಿದ್ದೇವೆ. ರಾಷ್ಟ್ರೀಯ ಟಿ.ವಿ ಚ್ಯಾನಲ್‌ನವರು ಈ ಸಮಾಚರವನ್ನು ಪ್ರಾರಂಭಿಸಿದಾಗ ಅವರು ಮುಖ್ಯಾಂಶವನ್ನು ಹೀಗೆ ಪ್ರಸ್ತಾಪಿಸಿದರು. ಅಲ್ಲಾಹನಿಗೋಸ್ಕರ ಖಿಲಾಫತ್ ಜೂಬಿಲಿಗಾಗಿ ವಾಗಾದಿಂದ ಇಕ್ರಾದ ಪ್ರಯಾಣ. ವಾಗಾ ಬುರ್ಕಿನಾಫ್ಯಾಸೋವಿನ ರಾಜಧಾನಿ ಆಗಿತ್ತು ಮತ್ತು ಇಕ್ರಾ ಘಾನಾದ ರಾಜಧಾನಿ ಆಗಿತ್ತು. ಮತ್ತೆ ಹೀಗೆ ಬರೆದರು ಅವರೆಲ್ಲರ ಸೈಕಲ್‌ಗಳು ಹಾಳಾಗಿದ್ದರೂ ಅವರ ಈಮಾನ್ ದೃಢವಾಗಿವೆ. ಈ ಅಹ್ಮದೀಯರು ಹುಟ್ಟಿನಿಂದ ಅಹ್ಮದಿಯರಲ್ಲ, ಯಾವ ಸಹಾಬರ ಸಂತಾನವೂ ಅಲ್ಲ ಬದಲಿಗೆ ಅವರೆಲ್ಲರು ಸಾವಿರಾರು ಮೈಲಿ ದೂರದಲ್ಲಿ ವಾಸವಾಗಿರುವ ಜನರಾಗಿದ್ದಾರೆ. ರಸ್ತೆಗಳಿಲ್ಲದ, ನೀರಿಲ್ಲದ, ವಿದ್ಯುತ್ ಇಲ್ಲದ ಊರಿನಲ್ಲಿರುವವರಾಗಿದ್ದಾರೆ. ಇವರೆಲ್ಲರು ಕೆಲವು ವರ್ಷಗಳ ಹಿಂದೆ ಅಹ್ಮದಿಯ್ಯತ್ ಸ್ವೀಕರಿಸಿ ವಿಸ್ಮಯಕರವಾದ ನಿಷ್ಠೆಯ ಸಂಬಂಧವನ್ನು ವ್ಯಕ್ತಪಡಿಸಿದ್ದಾರೆ. ಕೆಲವು ಜಾಗಗಳಲ್ಲಿ ಅವರು ಕಡು ಬಡತನದಲ್ಲಿದ್ದಾರೆ ಆದರೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಮರ ನೈಜ್ಯ ಗುಲಾಮರ ಜಮಾಅತ್ತಿನಲ್ಲಿ ಸೇರಿ ಅವರಲ್ಲಿ ಇಂತಹ ನಿಷ್ಠೆಯ ಸಂಬಂಧವನ್ನು ಹುಟ್ಟಿರುತ್ತದೆ. ಅಂದರೆ ಎಲ್ಲಿ ದೀನಿನ ಪ್ರಶ್ನೆ ಬರುತ್ತದೆಯೋ ಅಲ್ಲಿ ಅವರ ಸಂಕಲ್ಪಗಳು ದೃಢವಾಗಿ ನಿಲ್ಲುತ್ತದೆ. ಮತ್ತು ಪ್ರತಿಯೊಂದು ಬಲಿದಾನಗಳಿಗೆ ಸಿದ್ಧವಾಗುತ್ತಾರೆ ಪ್ರೀತಿ ತುಂಬಿರುತ್ತದೆ. ಆದ್ದರಿಂದ ಯಾವಾಗಲೂ ನಾವು ದುಆ ಮಾಡುತ್ತಲೇ ಇರಬೇಕು ಅಲ್ಲಾಹನು ಅವರನ್ನು ಅವರ ನಿಷ್ಠೆಯಲ್ಲಿ ಇನ್ನು ವೃದ್ಧಿಸಲಿ ಮತ್ತು ನಮ್ಮೆಲ್ಲರ ನಿಷ್ಠೆಯು ಸಹ ವೃದ್ಧಿಗೊಳಿಸಲಿ.

ಬುರ್ಕಿನೊಫಾಸೋವಿನ ಓರ್ವ ಮಿತ್ರ ಈಸಾ ಸಾಹೆಬ್ ಹೇಳುತ್ತಾರೆ: ನಾನು 2005ರಲ್ಲಿ ಬೈಅತ್ ಮಾಡಿದ್ದೆ. ಅವರಿಗೆ ಕೇಳಿದಾಗ ಮೂರು ವರ್ಷವಾಗಿತ್ತು. ಅವರು ಹೇಳಿದರು ನನಗೆ ಬೈಅತ್ ಮಾಡಿ ಮೂರು ವರ್ಷ ಆಗಿದೆ ಆದರೆ ನನಗೆ ಇಂದು ತಿಳಿದು ಬಂತು ನಾನು ಯಾರು, ಎಷ್ಟು ಅದೃಷ್ಟವಂತ ಎಂದು ಮತ್ತು ನಾನು ಏನನ್ನು ಗಳಿಸಿದ್ದೇನೆ ಎಂದು. ನನ್ನ ಸಂತೋಷಕ್ಕೆ ಮಿತಿಯೇ ಇಲ್ಲ ಏಕೆಂದರೆ ನಾನು ಇಂದು ಖಲೀಫರನ್ನು ಭೇಟಿ ಮಾಡಿದೆ. ಅವರ ಕಣ್ಣಿನಿಂದ ಕಂಬನಿ ಸುರಿಯುತ್ತಲೇ ಇತ್ತು. ಹೀಗೆ ಇಂತಹ ನಿಷ್ಠೆಯ ಸಂಬಂಧ ಹೊಸ ಅಹ್ಮದಿಯರಲ್ಲಿ ಖಾಯಮ್ ಆಗುತ್ತಿದೆ. (ಖುತ್‌ಬಾತೆ ಮಸ್ರೂರ್, ಸಂಪುಟ–6, ಪುಟ–181–186)

ಕಳೆದ ವರ್ಷ ಓರ್ವನ ಕಿಡಿಗೇಡಿತನದ ಕಾರಣ ಆತನ ಒಂದು ತಪ್ಪು ತಿಳುವಳಿಕೆಯನ್ನು ಹಿಡಿದು ಜಮಾಅತ್ತಿನಲ್ಲಿ ಕ್ಷೋಭೆ ಉಂಟು ಮಾಡಲು ಪ್ರಯತ್ನಿಸಿದಾಗ ಕೆಲವು ನಿಷ್ಠಾವಂತ ಯುವಕರು ಸಹ ಅದರಲ್ಲಿ ಭಾಗಿಯಾಗಿದ್ದರು. ಆದರೆ ಯುವಕರಲ್ಲಿ ಅನೇಕರು ಅವನ ಜೊತೆ ಸೇರಿ ಅವರ ವರ್ತನೆಯು ಬದಲಾಯಿತು. ತಮ್ಮನ್ನು ಅಹ್ಮದಿ ಎಂದು ಹೇಳುತ್ತಿದ್ದರು ಆದರೆ ನಿಝಾಮಿನಿಂದ ದೂರ ಸರಿಯುತ್ತಿದ್ದರು. ಆದ್ದರಿಂದ ಮಾಲಿಯಿಂದ ನಾನು ಓರ್ವ ಮುಬಲ್ಲಿಗ್ ಮುಆಝ್ ಸಾಹೆಬ್ ಅವರನ್ನು ಅಲ್ಲಿಗೆ ಕಳುಹಿಸಿದೆ. ಅಲ್ಲಿ ಅವರು ಹೋಗಿ ಅವರಿಗೆ ತಿಳಿಹೇಳುತ್ತಾ ಹೇಳಿದರು ನೀವು ಒಂದು ಕಡೆ ಖಿಲಾಫತ್‌ನೊಂದಿಗೆ ನಿಮ್ಮ ಸಂಬಂಧವಿದೆ ಎಂದು ಹೇಳುತ್ತೀರ ಇನ್ನೊಂದು ಕಡೆ ನಿಝಾಮಿನಿಂದ ದೂರ ಸರಿಯುತ್ತಿದ್ದೀರ ಇದು ಸರಿಯಲ್ಲ. ಹೀಗೆ ಹೇಳಿದಾಗ ಅವರಲ್ಲಿ ಎಲ್ಲರೂ ಕ್ಷಮೆ ಕೋರಿ ಪತ್ರಗಳನ್ನು ಬರೆಯಲು ಪ್ರಾರಂಭಿಸಿದರು. ಮತ್ತು ಹೇಳಿದರು ನಾವು ತಪ್ಪು ತಿಳುವಳಿಕೆಯ ಕಾರಣದಿಂದ ಮತ್ತು ತರಬೇತಿಯ ಕೊರತೆಯಿಂದ ಅವರ ಮಾತುಗಳನ್ನು ಅನುಸರಿಸಿದೆವು. ನಾವು ಖಿಲಾಫತ್‌ನೊಂದಿಗೆ ಸಂಪೂರ್ಣ ನಿಷ್ಠೆಯ ಸಂಬಂಧ ಹೊಂದಿದ್ದೇವೆ ನಾವು ಎಂದಿಗೂ ಖಿಲಾಫತ್‌ನಿಂದ ದೂರ ಸರಿಯುವ ಬಗ್ಗೆ ಯೋಚನೆಯು ಮಾಡಲು ಸಾಧ್ಯವಿಲ್ಲ. ಹೀಗೆ ಅವರು ಮತ್ತೊಮ್ಮೆ ಅಲ್ಲಾಹನ ಅನುಗ್ರಹದಿಂದ ಜಮಾಅತ್ತಿನ ವ್ಯವಸ್ಥೆಯಲ್ಲಿ ಸೇರ್ಪಡೆ ಆದರು. ತರಬೇತಿ ಇಲ್ಲದಿದ್ದರಿಂದ ಖಿಲಾಫತ್‌ನಿಂದ ದೂರ ಸರಿದರು. ಅವರಿಗೆ ತಿಳುವಳಿಕೆ ಮೂಡಿಸಿದಾಗ ಅವರಿಗೆ ತಪ್ಪಿನ ಅರಿವಾಯಿತು ಮತ್ತು ಖಿಲಾಫತ್‌ನೊಂದಿಗೆ ಸಂಪೂರ್ಣ ನಿಷ್ಠೆಯ ಸಂಬಂಧವನ್ನು ವ್ಯಕ್ತಪಡಿಸಿದರು. ಮತ್ತೆ ಹೇಳಿದರು ನಾವು ಬೇರೆ ಇರುವಾಗಲೂ ಸಹ ಖಿಲಾಫತ್‌ನಿಂದ ಬೇರೆಯಾಗಿರಲಿಲ್ಲ. ನಾವು ಕೇವಲ ಕೆಲ ಹುದ್ದೆದಾರರಿಂದ ದೂರವಾಗಿದ್ದೆವು. ಇದು ಅವರ ನಿಷ್ಠೆಯ ಮಟ್ಟವಾಗಿದೆ. ಅದೇ ರೀತಿ ಗ್ಯಾಂಬಿಯಾದಿಂದ ಆಗಮಿಸುವವರ ಪರಿಸ್ಥಿತಿಯು ಹೀಗೆ ಇದೆ. ಐವರಿಕೊಷ್ಟ್‌ನಿಂದ ಜನರು ಆಗಮಿಸಿದ್ದರು. ಅನ್ಯ ರಾಷ್ಟ್ರಗಳಿಂದ ಜನರು ಆಗಮಿಸಿದ್ದರು. ಪ್ರತಿಯೊಬ್ಬರು ತಮ್ಮ ತಮ್ಮ ಪ್ರಕಾರ ನಿಷ್ಠೆಯಲ್ಲಿ ಅಭಿವೃದ್ಧಿ ಹೊಂದಿದ್ದರು.

ಘಾನಾದಲ್ಲಿ ಜಲ್ಸದ ಸಂದರ್ಭದಲ್ಲಿ ನಾನು ಮೊದಲೇ ಹೇಳಿರುವೆನು ಬಹಳ ದೂರವಿದೆ. ಜಲ್ಸ ಗಾಹ್‌ದಿಂದ ನಮ್ಮ ವಸತಿಯು ಬಹಳ ದೂರವಿತ್ತು. ಅಲ್ಲಿ ತಲುಪುವ ತನಕ ರಸ್ತೆಯು ಹಾಳಾಗಿತ್ತು ಆದ್ದರಿಂದ ಒಂದು ಕಿಲೋಮೀಟರ್ ಜಾಸ್ತಿ ಆಗುತ್ತಿತ್ತು. ಪುರುಷರು, ಮಹಿಳೆಯರು ಎಲ್ಲರು ರಸ್ತೆ ಬದಿಯಲ್ಲಿ ನಿಲ್ಲುತ್ತಿದ್ದರು. ಮಹಿಳೆಯರು ತಮ್ಮ ಮಕ್ಕಳನ್ನು ಎತ್ತಿಕೊಂಡು ಸಲಾಮ್ ಮಾಡಿಸುತ್ತಿದ್ದರು. ಪ್ರೀತಿ ವ್ಯಕ್ತವಾಗುತ್ತಿತ್ತು. ಖಿಲಾಫತ್ ಜುಬಿಲೀಯ ಸಂದರ್ಭದಲ್ಲಿ ಆ ಜಲ್ಸದಲ್ಲಿ ಮಹಿಳೆಯರ ಸಂಖ್ಯೆ ಸುಮಾರು ಐವತ್ತು ಸಾವಿರದವರಿಗಿತ್ತು. ಅವರೆಲ್ಲರು ಖಿಲಾಫತ್‌ನಿಂದ ನಿಷ್ಠೆಯ ಸಂಬಂಧವನ್ನು ವ್ಯಕ್ತ ಪಡಿಸುತ್ತಿದ್ದರು ಅವರ ಪ್ರೀತಿ ಅವರ ಕಣ್ಣಿನಿಂದ, ಅವರ ನಡತೆಯಿಂದ, ಅವರ ಮುಖ ಚಹರೆಯಿಂದ ವ್ಯಕ್ತವಾಗುತ್ತಿತ್ತು. ಅವರೆಲ್ಲರು ತಮ್ಮ ನಮಾಝ್‌ಗಳನ್ನು ರಕ್ಷಿಸಿಕೊಳ್ಳುವವರಾಗಿದ್ದರು. ಎಲ್ಲಾ ನಮಾಝ್‌ಗಳಲ್ಲಿ ಹಾಗೂ ತಹಜ್ಜುದ್ ನಮಾಝ್‌ಗಳಲ್ಲಿ ಅವರೆಲ್ಲರೂ ಕಡ್ಡಾಯವಾಗಿ ಭಾಗವಹಿಸುತ್ತಿದ್ದರು.

ನೈಜೀರಿಯಕ್ಕೆ ಎರಡನೆಯ ಬಾರಿ ಬೆನನ್‌ನಿಂದ ರಸ್ತೆಯ ಮುಖಾಂತರ ಹೋದಾಗ ಅಥವಾ ಇದಕ್ಕೂ ಮೊದಲೆ ಹೋದಾಗ ನಡೆದ ಘಟನೆಯೇ ಇರಬಹುದು. ಸುಮಾರು 2004ರಲ್ಲಿ ನಡೆದ ಘಟನೆ ಇದು. ರಸ್ತೆಯಲ್ಲಿ ಒಂದು ಕಡೆ ನಾವೆಲ್ಲರು ತಂಗಬೇಕಾಗಿತ್ತು. ಮೊದಲು ಈ ಕಾರ್ಯಕ್ರಮವಿರಲಿಲ್ಲ ಆದರೆ ಅವರು ಹೇಳಿದರು ಇಲ್ಲಿ ಹೊಸದಾಗಿ ಮಸೀದಿ ನಿರ್ಮಾಣವಾಗಿದೆ ನೋಡಿಕೊಂಡು ಹೋಗೋಣ ಎಂದು ಅಲ್ಲಿ ಜನರಿದ್ದರು. ಅಲ್ಲಿನ ಎಲ್ಲಾ ಪುರುಷರ ಹಾಗೂ ಮಕ್ಕಳ ಆಸೆ ನನ್ನ ಹಸ್ತಾಲಾಘವ ಮಾಡುವುದ್ದಾಗಿತ್ತು. ಮಹಿಳೆಯರು ಹತ್ತಿರದಿಂದ ಕಾಣಲು ಬಯಸುತ್ತಿದ್ದರು. ಸಮಯದ ಅಭಾವದಿಂದ ಹಸ್ತಾಲಾಘವ ಮಾಡಲು ಸಾಧ್ಯವಿರಲಿಲ್ಲ ಆದರೆ ಅವರು ಶ್ರಮವಹಿಸಿ ಹಸ್ತಾಲಾಘವ ಮಾಡುವವರು ಮಾಡಿಕೊಂಡರು. ಬಹಳ ರಷ್ ಆದ ಕಾರಣ ನಮ್ಮ ತಂಡದಲ್ಲಿದ್ದ ಒಬ್ಬರು ಮಹಿಳೆಯೊಬ್ಬರಿಗೆ ದೂರ ಸರಿಯಲು ಹೇಳಿದಾಗ ಆ ಮಹಿಳೆ ಸಿಟ್ಟಾದಳು ಆತನನ್ನು ಈಗ ಎತ್ತಿ ಹೊರಹಾಕುವಳು ಎಂದು ಭಾಸವಾಗುತ್ತಿತ್ತು. ಆ ಮಹಿಳೆ ಹೇಳಿದಳು ನನ್ನ ಮತ್ತು ನನ್ನ ಖಲೀಫರ ಮಧ್ಯ ಬರುವರು ನೀವು ಯಾರು? ಇದು ಅವರೆಲ್ಲರ ಭಾವನೆಯಾಗಿತ್ತು. ಆಗ ನಾನು ಅವರೆಲ್ಲರನ್ನು ನಿಶಬ್ಧವಾಗಿ ಕುಳಿತುಕೊಳ್ಳಲು ಆದೇಶಿಸಿದಾಗ ಅಲ್ಲಿದ್ದ ಸಾವಿರಾರು ಜನರು ನಿಶಬ್ಧವಾಗಿ ಕುಳಿತುಕೊಂಡರು. ಇದು ಅವರ ಖಿಲಾಫತ್‌ನೊಂದಿಗಿನ ಸಂಬಂಧವಾಗಿದೆ. (ಖುತ್‌ಬಾತೆ ಮಸ್ರೂರ್, ಸಂಪುಟ–6, ಪುಟ–191–192)

ಪ್ರಪಂಚದ ಜನರು ಅಮೇರಿಕವನ್ನು ಕೇವಲ ಲೌಕಿಕ ಭಾವನೆಗಳುಳ್ಳವರು ಅವರಿಗೆ ಧರ್ಮದೊಂದಿಗೆ ಯಾವುದೇ ಸಂಬಂಧವಿರುವುದಿಲ್ಲ ಎಂದು ಭಾವಿಸುತ್ತಾರೆ. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಒಮ್ಮೆ ತಮ್ಮ ಒಂದು ಘಟನೆಯನ್ನು ಪ್ರಸ್ತಾಪಿಸಿದ್ದಾರೆ. ಹೇಗೆ ಒಮ್ಮೆ ಅವರಿಗೆ ಒಂದು ಅಪಾಯದ ಸೂಚನೆ ಲಭಿಸಿದಾಗ ಅಲ್ಲಿನ ಎರಡು ಅಹ್ಮದಿ ಸೆಕ್ಯುರಿಟಿಯ ತಜ್ಞರು ಅವರು ಸ್ವತಃ ಬಂದು ಇಡೀ ರಾತ್ರಿ ಪಹರೆ ನೀಡಿದರು. ಹೀಗೆ ಅಮೇರಿಕದವರಲ್ಲಿಯು ಬಹಳ ನಿಷ್ಠೆ ಇದೆ. ನನ್ನ ಸಂದರ್ಶನದ ಸಂದರ್ಭದಲ್ಲಿ ಅವರೆಲ್ಲರು ನಿಷ್ಠೆಯನ್ನು ವ್ಯಕ್ತಪಡಿಸಿದ್ದರು. ಇಲ್ಲಿಯು ಸಹ ಅಮೇರಿಕಾದಿಂದ ಅನೇಕ ತಂಡಗಳು ಬರುತ್ತಾರೆ. ಅವರೆಲ್ಲರು ಖಿಲಾಫತ್‌ನಿಂದ ಇರುವ ಸಂಬಂಧವನ್ನು ವ್ಯಕ್ತಪಡಿಸುತ್ತಾರೆ. ಮತ್ತು ಅವರು ತಮ್ಮ ಕರ್ಮಗಳಿಂದ ತಮ್ಮ ದಾರ್ಮಿಕ ನಿಷ್ಠೆಯನ್ನು ತೋರುತ್ತಾರೆ. ಕೆಲ ಡ್ಯೂಟಿ ನೀಡುವ ಯುವಕರು ನನ್ನೊಂದಿಗೆ ತಮ್ಮ ಸಮಯವನ್ನು ಕಳೆದಿದ್ದಾರೆ ಅವರಲ್ಲಿ ಕೆಲವರು ತಮ್ಮ ನೌಕರಿಯನ್ನು ತ್ಯಜಿಸಿದ್ದಾರೆ. ಅವರಲ್ಲಿ ಇನ್ನು ಕೆಲವರು ಹೇಗಿದ್ದರು ಎಂದರೆ

ಅವರ ನೌಕರಿಗಳು ಈಗ ತಾನೆ ಪ್ರಾರಂಭವಾಗಿತ್ತು ಜಲ್ಸದಲ್ಲಿ ಭಾಗವಹಿಸಲು ಮತ್ತು ಖಲೀಫರನ್ನು ಭೇಟಿಯಾಗಲು ರಜೆ ಸಿಗದ ಕಾರಣ ಆ ನೌಕರಿಗಳನ್ನು ತ್ಯಜಿಸಿ ಬಂದಿದ್ದರು. (ಖುತುಬಾತೆ ಮಸ್ರೂರ್, ಸಂಪುಟ-10, ಪುಟ-424)

ಕೆನೆಡಾದ ಖುದ್ದಾಮರ ವರ್ತನೆಗಳು ಸಹ ಹೀಗೇಯೇ ಇದೆ. ಯುವಕರಾಗಲಿ, ಮಕ್ಕಳಾಗಲಿ, ಮಹಿಳೆಯರಾಗಲಿ ಅವರೆಲ್ಲರು ಪ್ರಾಮಾಣಿಕ ನಿಷ್ಠೆ ಹೊಂದಿದ್ದರು. ಅಮೇರಿಕ, ಕೆನಡ, ಅಥವಾ ಯುರೋಪಿನ ಯಾವುದೇ ದೇಶವಾಗಲಿ ಅಲ್ಲಿ ಪ್ರತಿ ಸ್ಥಳದಲ್ಲಿ ಪ್ರಮಾಣಿಕ ನಿಷ್ಠೆಯ ಉದಾಹರಣೆಗಳು ಕಾಣಿಸುತ್ತವೆ. ಮನುಷ್ಯ ಪ್ರಯತ್ನದಿಂದ ಈ ರೀತಿಯ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಸೃಷ್ಟಿಸಲು ಸಾಧ್ಯವಿಲ್ಲ. ಕೆಲ ವರ್ಷಗಳ ಮುಂಚೆ ನಾನು ಜರ್ಮನಿಯಲ್ಲಿ ಒಂದು ಖುತ್‌ಬ ನೀಡಿದ್ದೆ ಅದರಲ್ಲಿ ಖಿಲಾಫತ್‌ನೊಂದಿಗೆ ಸಂಬಂಧದ ಬಗ್ಗೆ ಪ್ರಸ್ತಾಪಿಸಿದೆ. ಅದು ಕೇವಲ ಜರ್ಮನಿಯವರಿಗಿರಲಿಲ್ಲ ಬದಲಿಗೆ ಅದು ಪ್ರತಿಯೊಬ್ಬರಿಗೂ ಇತ್ತು ಆದರೆ ಅಲ್ಲಿನ ಪರಿಸ್ಥಿಗನುಗುಣವಾಗಿ ನಾನು ಜರ್ಮನಿಯವರದ್ದೇ ಕೆಲವು ಉದಾಹರಣೆಗಳು ಪ್ರಸ್ತಾಪಿಸಿದೆ. ಇದಕ್ಕೆ ಪ್ರಪಂಚಾದ್ಯಂತ ಅಹ್ಮದಿಯರು ಪ್ರತಿಕ್ರಿಯಿಸಿದರು ಮತ್ತು ತಕ್ಷಣವೇ ಖಿಲಾಫತ್‌ನೊಂದಿಗೆ ಪ್ರಾಮಾಣಿಕ ನಿಷ್ಠೆಯನ್ನು ವ್ಯಕ್ತಪಡಿಸಿದರು. ಜರ್ಮನಿಯವರೂ ಸಹ ಇದೇ ರೀತಿ ಪ್ರತಿಕ್ರೀಯಿಸಿದರು. ಅದೇ ರೀತಿ ಜರ್ಮನಿಯವರು ಎಲ್ಲಿಯ ತನಕ ಹೇಳಿದರು ಎಂದರೆ ನಮ್ಮಲ್ಲಿ ಕೆಲವು ಹುದ್ದೆದಾರರು ಖಲೀಫರ ಆದೇಶವನ್ನು ವ್ಯಾಖ್ಯಾನಿಸಲು ಪ್ರಾರಂಭಿಸುತ್ತಾರೆ ಇನ್‌ಶಾಅಲ್ಲಾಹ್ ಇನ್ನು ಮುಂದೆ ಹೀಗೆ ನಡೆಯುವುದಿಲ್ಲ ಎಂದರು. ಅವರು ಇದರ ಮೇಲೆ ಖಾಯಿಮ್ ಇರಲು ಅಲ್ಲಾಹನು ಅನುಗ್ರಹಿಸಲಿ. (ಖುತ್‌ಬಾತೆ ಮಸ್ರೂರ್, ಸಂಪುಟ-12, ಪುಟ-369)

ಅರ್‌ದನ್‌ನಿಂದ ಖಾಸಿಮ್ ಸಾಹೇಬ್ ಹೇಳುತ್ತಾರೆ "ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸತ್ಯತೆಗೆ ಬಹಳ ದೊಡ್ಡ ಸಾಕ್ಷಿ ಎಂದರೆ: ಅಲ್ಲಾಹನು ನಮ್ಮ ಮನಸ್ಸಿನಲ್ಲಿ ಖಿಲಾಫತ್‌ನೊಂದಿಗೆ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಸೃಷ್ಟಿಸಿದ್ದಾನೆ. ಕೆಲವು ವರ್ಷಗಳ ಹಿಂದೆ ನಾನು ಬೈಅತ್ ಮಾಡಲು ನಿರ್ಧರಿಸಿದಾಗ ನನ್ನ ಮನಸ್ಸಿನಲ್ಲಿ ಏನು ಈ ಜಮಾಅತ್ ಇನ್ನು ಸತ್ಯವಾಗಿದೆಯೇ ಮತ್ತು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉದ್ದೇಶ ಲಕ್ಷ್ಯವನ್ನು ಈಡೇರಿಸುತ್ತಾ ಇದೆಯ ಅಥವಾ ಅಲ್ಲವೋ? ಎಂದು ಒಂದು ಯೋಚನೆ ಬಂತು. ಅಲ್ಲಿಯ ತನಕ ನನಗೆ ಖಿಲಾಫತ್‌ನ ಬಗ್ಗೆ ಅರಿವಿರಲಿಲ್ಲ. ಇದಕ್ಕೆ ಖಲೀಫತುಲ್ ಮಸೀಹ್‌ರವರು ನನಗೆ ನನ್ನ ಕನಸಿನಲ್ಲಿ ಶಾಂತಿ ಹರಡುತ್ತಿರುವುದನ್ನು ಮತ್ತು ಯುದ್ಧಮಾಡುತ್ತಿದ್ದವರ ನಡುವೆ ತೀರ್ಮಾನ ಮಾಡುತ್ತಿರುವುದನ್ನು ಕಾಣಿಸಿತು. ಅವರು ಹೇಳುತ್ತಾರೆ ನಾನು ನನ್ನ ಕೈಯನ್ನು ಅವರ ಕೈ ಮೇಲಿರಿಸಿದೆನು." ಈ ಪತ್ರ ಅವರು ನನಗೆ ಬರೆದಿರುವುದು. "ಉಂಗುರವನ್ನು ಚುಂಬಿಸಿದೆ. ಆ ಸಂದರ್ಭದಲ್ಲಿ ನಾನು ಖಲೀಫರ ಕರುಣೆಯನ್ನು ಅನುಭವಿಸುತ್ತಾ ಇದ್ದೆ ಮತ್ತು ನನ್ನ ಮನಸ್ಸಿನಲ್ಲಿ ನಿಮಗೋಸ್ಕರ ಅಸಮಾನ್ಯ ಪ್ರೀತಿ ಹುಟ್ಟಿತು ಅದು ದಿನಾಗಲು ಬೆಳೆಯುತ್ತಲೇ ಇದೆ. ನಾನು ಮತ್ತೊಮ್ಮೆ ಬೈಅತ್ ಮಾಡ ಬಯಸುತ್ತೇನೆ ಮತ್ತು ನಿಮ್ಮನ್ನು ಅನುಸರಿಸದಿದ್ದವರ ಬಗ್ಗೆ ಬೇಸರ ವ್ಯಕ್ತಪಡಿಸುತ್ತೇನೆ." (ಜಲ್ಸ ಸಾಲಾನ ಲಂಡನ್-2017, ಅಲ್‌ಫಝುಲ್ ಇಂಡರ್‌ನ್ಯಾಷ್ನಲ್ 6-04-2018, ಪುಟ-15)

ಮತ್ತೆ ಬಲ್ಗಾರಿಯ ಇದೆ. ಅಲ್ಲಿಯು ಸಹ ವಿರೋಧಿಗಳು ತಮ್ಮ ವಿರೋಧದಲ್ಲಿ ತೀವ್ರತೆಯನ್ನುಂಟು ಮಾಡಿದ್ದಾರೆ. ಈಗ ಬಹಳ ವರ್ಷಗಳ ನಂತರ ಜಮಾಅತ್ ರಿಜಿಸ್ಟರ್ ಆಗಿದೆ. ಒಮ್ಮೆ ರಿಜಿಸ್ಟ್ರೇಷನ್ ಕ್ಯಾನ್ಸಲ್ ಆಗಿತ್ತು. ಕೆಲ ಅಹ್ಮದಿಯರನ್ನು ಬಲ್ಗಾರಿಯಾದ ಮುಫ್ತಿ, ಲಾಲಾಸೆ ತೋರಿಸಿ ಜಮಾಅತ್ತನ್ನು ತ್ಯಜಿಸಲು ಹೇಳಿದ್ದನು ಆದರೆ ಅಲ್ಲಾಹನ ಅನುಗ್ರಹದಿಂದ ಎಲ್ಲಾ ಅಹ್ಮದಿಯರು ತಮ್ಮ ಈಮಾನಿನಲ್ಲಿ ಸ್ಥಿರವಾಗಿ ನಿಂತಿದ್ದಾರೆ. ಅದಲ್ಲದೇ ಬಹಳ ದೃಢತೆಯಿಂದ ನಿಷ್ಠೆಯ ಸಂಬಂಧವನ್ನು ವ್ಯಕ್ತಪಡಿಸುತ್ತಿದ್ದಾರೆ. ಓರ್ವ ಮಹಿಳೆಯ ಬಳಿ ಮೂರು ಜನರು ಹೋಗಿದ್ದರು ಅವರು ಜಮಾಅತ್ತನ್ನು ತ್ಯಜಿಸಿ ಅವರೊಂದಿಗೆ ಸೇರ್ಪಡೆ ಆದ್ದಲ್ಲಿ ಸಹಾಯ ಮಾಡುವರು ಎಂದು ಹೇಳಿದರು. ಆ ಮಹಿಳೆ ಬಹಳ ಜೋರಾಗಿ ಹೇಳಿದಳು ಅಹ್ಮದಿಯತ್ ಸತ್ಯವಾಗಿದೆ ಮತ್ತು ನಾನು ನಮ್ಮ ಖಲೀಫರನ್ನು ಭೇಟಿಯಾಗಿ ಬಂದಿರುವೆನು ಮತ್ತು ಇದಕ್ಕಿಂತ ಮಿಗಿಲಾಗಿ ಅಲ್ಲಾಹನು ನನಗೆ ಮೂರು ನಾಲ್ಕು ಕನಸುಗಳನ್ನು ತೋರಿಸಿ ಈ ಜಮಾಅತ್ ಸತ್ಯವಾಗಿದೆ ಎಂದು ತಿಳಿಸಿದ್ದಾನೆ. ಆದ್ದರಿಂದ ಇದನ್ನು ತ್ಯಜಿಸುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. (ಜಲ್ಸ ಸಲಾನ ಜರ್ಮನಿ 30-06-2013ಯ ಕೊನೆಯ ದಿವಸದ ಭಾಷಣ, ಅಲ್‌ಫಝುಲ್ ಇಂಟರ್ ನ್ಯಾಷನಲ್ ಸಂಪುಟ-20, ಸಂಚಿಕೆ-44, 01-11-2013, ಪುಟ-14)

ಬೆನನ್‌ನಲ್ಲಿ ಈಗಿರುವ ಕಾಲದಲ್ಲಿರುವ ಅಲ್ಲಿನ ಮುಬಲ್ಲಿಗ್ ಇಂಚಾರ್ಜ್ ಬರೆಯುತ್ತಾರೆ: ನವ ಅಹ್ಮದಿಯರ ಒಂದು ಜಲ್ಸದಲ್ಲಿ ಓರ್ವ ನವ ಅಹ್ಮದಿ ರಝ್ಝಾಖ್ ಅಹ್ಮದ್ ಸಾಹೇಬ್‌ರವರು ನವ ಅಹ್ಮದಿಯರ ಪ್ರತಿನಿಧಿಯಾಗಿ ಹೇಳಿದರು ಲೌಕಿಕ ಕಾರ್ಯಗಳಲ್ಲಿ ಏನೇ ತೊಂದರೆಯಾದರು ಜನರು ಮೇಲಾಧಿಕಾರಿಗಳ ಬಳಿ ಹೋಗುತ್ತಾರೆ. ಅಲ್ಲಿ ಪರಿಹಾರ ಸಿಗದಿದ್ದರೆ ತಹಶಿಲ್ದಾರರ ಬಳಿ ಹೋಗುತ್ತಾರೆ. ಅನಂತರ ಮೇಯರ್ ಬಳಿ ಹೋಗುತ್ತಾರೆ, ಅನಂತರ ಮಂತ್ರಿಗಳ ಬಳಿ ಹೋಗುತ್ತಾರೆ ಅನಂತರ ಪ್ರಧಾನಮಂತ್ರಿಯ ಬಳಿ ಹೋಗುತ್ತಾರೆ ಅವರು ನಿಮ್ಮ ಮಾತು ಆಲಿಸುತ್ತಾರೋ ಇಲ್ಲವೂ ಅದರ ಬಗ್ಗೆ ಅರಿವಿಲ್ಲ ಆದರೆ ಜಮಾಅತೆ ಅಹ್ಮದಿಯಾದ ನಿಝಾಮ್ ಅದ್ಭುತವಾಗಿದೆ. ಜಮಾಅತೆ ಅಹ್ಮದಿಯಾದವರ ಬಳಿ ಖಿಲಾಫತ್ ನಿಝಾಮ್ ಇದೆ ಅವರು ಎಲ್ಲರ ಮಾತು ಆಲಿಸಿ ಎಲ್ಲರನ್ನು ಅನುಗ್ರಹಿಸುತ್ತಾರೆ. ಅವರು ಹೇಳಿದರು ಖಿಲಾಫತ್‌ನ ಅನುಗ್ರಹದಿಂದಲೇ ನಾನು ಪವಿತ್ರ ಖುರ್‌ಆನ್ ಪಠಿಸಲು ಪ್ರಾರಂಭಿಸಿದ್ದೇನೆ ಮತ್ತು ಪ್ರವಾದಿ(ಸ) ಅವರು ತಂದ ಇಸ್ಲಾಮ್ ಧರ್ಮದ ಬಗ್ಗೆ ಇಂದು ನಮಗೆ ತಿಳಿದುಬಂತು.

ಫ್ರಾನ್ಸಿನಿಂದ ಲೈಲ ಸಾಹಿಬ ಹೇಳುತ್ತಾರೆ: 2017ರಲ್ಲಿ ನಾನು ಬೈಅತ್ ಮಾಡಿದ್ದೆ. ಪ್ರತಿ ದಿನ ಮುಂಜಾನೆ ನಾನು ನಿಮ್ಮ ಪತ್ರವನ್ನು ಓದುತ್ತೇನೆ. ಅದರಿಂದ ನನ್ನ ಜೀವನ ಪರಿವರ್ತನೆ ಆಗಿದೆ. ನಿಮ್ಮ ರಕ್ಷಣೆ ಮತ್ತು ಸಹಾಯಕ್ಕಾಗಿ ನಾನು ನನ್ನ ಪ್ರತಿಯೊಂದು ನಮಾಝಿನಲ್ಲಿ ದುಆ ಮಾಡುತ್ತಿರುತ್ತೇನೆ. ಈ ದುಆ ಮಾಡುವ ಯೋಚನೆ ಸಹ ಅಲ್ಲಾಹನೆ ಸೃಷ್ಠಿಸಿರುವುದು. ಬೈಅತ್‌ನ ನಂತರ ಹೊಸ ಮಾನವನಾಗಿದ್ದೇನೆ.

ಗತಯುಮಾಲಿ ರೀಜನ್‌ನ ಸಾನ್‌ನ ಮುಬಲ್ಲಿಗರು ಬರೆಯುತ್ತಾರೆ. ನಮ್ಮ ಒಂದು ಜಮಾಅತ್ ವೋಲೂನ್‌ನ ಓರ್ವ ಸದಸ್ಯ ಅಬ್ದುರ್ರಹ್ಮಾನ್ ಕೋಲೆಬಾಲಿ ಸಾಹೆಬ್ ಅವರು ನಿಧನ ಹೊಂದಿದ್ದಾರೆ. ಅವರು ಕೆಲವು ದಿವಸಗಳ ಮುಂಚೆ ತಮ್ಮ ಎಲ್ಲಾ ಮಕ್ಕಳನ್ನು ಸೇರಿಸಿ ವಸಿಯ್ಯತ್ ಬರೆಸಿದರು. ಒಂದು ವೇಳೆ ನಾನು ಯುವಕನಾಗಿದ್ದು ಓಡಾಡಿಕೊಂಡಿರುತ್ತಿದ್ದರೆ ನಾನು ಜಮಾಅತ್ತಿನ ಮಿಶನ್‌ನಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದೆ. ಅಲ್ಲಿ ನನಗೆ ಜಮಾಅತ್ ಯಾವ ಕಾರ್ಯ ಹೇಳುತ್ತಿದ್ದರು ಅದನ್ನು ಮಾಡುತ್ತಿದ್ದೆ. ಅದರೊಂದಿಗೆ ಅವರು ತಮ್ಮ ಮಕ್ಕಳಿಗೆ ಉಪದೇಶಿಸಿದರು ಅವರ ಎರಡು ತಿಂಗಳಿನ ಚಂದ ಬಾಕಿ ಉಳಿದಿದೆ ಮರಣದ ಬಗ್ಗೆ ಅರಿವಿಲ್ಲ. ಆದ್ದರಿಂದ ಅವರ ಜೀವನದಲ್ಲಿಯೇ ಅದನ್ನು ಪಾವತಿಸಲು ಉಪದೇಶಿಸಿದರು. ಹೀಗೆ ನಾನು ಮರಣ ಹೊಂದುವಾಗ ಸಾಲಗಾರನಾಗಿರಬಾರದು. ಮೂರನೆಯ ವಸಿಯ್ಯತ್ ಅವರು ತಮ್ಮ ಮಕ್ಕಳಿಗೆ ಹೀಗೆ ಮಾಡಿದರು. ಖಿಲಾಫತ್‌ನೊಂದಿಗೆ ನಿಷ್ಠೆಯ ಸಂಬಂಧ ಹೊಂದಿರಬೇಕು ಮತ್ತು ಅದರೊಂದಿಗೆ ಎಂದಿಗೂ ದ್ರೋಹ ಮಾಡಬಾರದು ಅದೇ ರೀತಿ ಯಾವಾಗಲೂ ಚಂದ ನೀಡುತ್ತಾ ಇರಬೇಕು.

ಗೇಂಬಿಯಾದ ಅಮೀರ್ ಸಾಹೆಬ್ ಬರೆಯುತ್ತಾರೆ. ಓರ್ವ ಮಹಿಳೆ ರಹ್ಮತ್ ಜಾಲೂ ಸಾಹಿಬ ಅವರು ಬೈಅತ್ ಮಾಡಿದ್ದರು. ಅವರಿಗೆ ಅಲ್ಲಾಹನ ಮಾರ್ಗದಲ್ಲಿ ಬಲಿದಾನಗಳ ಬಗ್ಗೆ ತಿಳಿಸಿದಾಗ ಅವರು ಆಗಲೇ ನೂರು ಡಿಲಾಸಿ ನೀಡಿದರು. ತಮ್ಮ ಯೋಗ್ಯತೆಗಿಂತ ಹೆಚ್ಚಾಗಿ ಚಂದ ನೀಡುತ್ತಿದ್ದರು. ಅವರು ಹೇಳುತ್ತಿದ್ದರು ನಾನು ಕೇವಲ ಅಲ್ಲಾಹನ ಹಾಗೂ ಖಲೀಫರ ಪ್ರೀತಿ ಬಯಸುತ್ತೇನೆ. ಈ ಪ್ರಾಮಾಣಿಕತೆ ಹಾಗೂ ನಿಷ್ಠೆಯ ಸಂಬಂಧದ ಕಾರಣದಿಂದಾಗಿದೆ ನಾನು ನೀಡುತ್ತಿರುವುದು ಮತ್ತು ಅಲ್ಲಾಹನಿಗೋಸ್ಕರವಾಗಿದೆ ತ್ಯಾಗವನ್ನು ಮಾಡುತ್ತಿರುವುದು.

ತಾಜಿಸ್ತಾನದಿಂದ ಓರ್ವ ಮಿತ್ರ ಇಝ್ಝತ್ ಅಮಾನ್ ಸಾಹೆಬ್ ಹೇಳುತ್ತಾರೆ. ನನ್ನ ತಾಯಿ 72 ವರ್ಷ ಪ್ರಾಯಕ್ಕೆ ತಲುಪಿದಾಗ ಅವರು ರೋಗಿಯಾಗಿದ್ದರು. ಮೊದಲೇ ಹೃದಯ ಕಾಯಿಲೆ ಹಾಗೂ ಮಾನಸಿಕ ರೋಗಿಯಾಗಿದ್ದರು. ಆದರೆ ಈ ಕಾಯಿಲೆಯ ಕಾರಣ ಅವರು ಇನ್ನಷ್ಟು ಅನಾರೋಗಿ ಆದರು. ವೈದ್ಯರ ಮಾತುಗಳಿಂದ ನಮ್ಮ ಇಡೀ ಕುಟುಂಬದಲ್ಲಿ ಭಯ ಹುಟ್ಟಿತು. ಹೇಳುತ್ತಾರೆ ಖಲೀಫತುಲ್ ಮಸೀಹ್‌ರವರೊಂದಿಗಿನ ಭೇಟಿ ಮತ್ತು ಅವರೊಂದಿಗಿರುವ ಸಂಬಂಧದಿಂದ ನಮಗೆ ದುಆವಿನ ಬಗ್ಗೆ ನಂಬಿಕೆ ಇತ್ತು ಆದ್ದರಿಂದ ಖಲೀಫರಿಗೆ ದುಆಗಾಗಿ ಹೇಳುವೆನು ಅಲ್ಲಾಹನು ಅವರ ದುಆ ಸ್ವೀಕರಿಸುವನು ಎಂದು ನಂಬಿ ಖಲೀಫರಿಗೆ ಪತ್ರವನ್ನು ಬರೆದೆ. ಆಗ ದುಆವಿನೊಂದಿಗೆ ನನಗೆ ಹೋಮಿಯೋಪಥಿ ಔಷಧಿಗಳು ಸಹ ದೊರಕಿತು. ನನ್ನ ತಾಯಿ ಆರೋಗ್ಯವಂತಳಾದಳು. ಈಗ ಅವರ ತಾಯಿಯ ವಯಸ್ಸು 79ವರ್ಷವಾಗಿದೆ. ಅವರು ಹಜ್ಜ್ ಮಾಡಲು ಸಿದ್ಧವಾಗಿದ್ದಾರೆ. ಇವೆಲ್ಲವೂ ಖಿಲಾಫತ್‌ನೊಂದಿಗೆ ಹೊಂದಿದ ಸಂಬಂಧ ಹಾಗೂ ಖಲೀಫರ ದುಆವಿನ ಪ್ರತಿಫಲವಾಗಿದೆ. ಅಲ್ಲಾಹನು ಅವರಿಗೆ ಆರೋಗ್ಯವಂತ ಜೀವನ ನೀಡಲಿ.

ಓರ್ವ ಅಹ್ಮದಿ ಹುಡುಗನ ಖಿಲಾಫತ್‌ನೊಂದಿಗೆ ಹೊಂದಿರುವ ಪ್ರೀತಿಯ ಘಟನೆ ತಾಹಿರ್ ನದೀಮ್ ಸಾಹೆಬ್ ಬರೆಯುತ್ತಾರೆ. ತುರ್ಕಿಯ ಸಂದರ್ಶನದ ಸಂದರ್ಭದಲ್ಲಿ ಓರ್ವ ಅಹ್ಮದಿಯರ ಮನೆಗೆ ಅನಿರೀಕ್ಷಿತವಾಗಿ ಹೋಗ ಬೇಕಾಯಿತು. ಅಲ್ಲಿ ಕುಳಿತಿರುವಾಗ ಅವರ ಮೂರು, ನಾಲ್ಕು ವರ್ಷದ ಮಗು ಬಂದು ಸಲಾಮ್ ಮಾಡಿ ನನ್ನ ಕಿವಿನಲ್ಲಿ ಹೇಳಿದನು ನಾನು ಹುಝೂರ್‌ರವರಿಗೆ

ಒಂದು ಪತ್ರ ಕಳುಹಿಸಬೇಕಾಗಿದೆ. ನೀವು ಅದನ್ನು ತೆಗೆದುಕೊಂಡು ಹೋಗುವಿರ? ಅದಕ್ಕೆ ನಾನು ಹೇಳಿದೆ ಸರಿ ನಾನು ತೆಗೆದುಕೊಂಡು ಹೋಗುವೆನು. ಆಗ ಆ ಮಗು ಒಂದು ಕಾಗದ ಮೇಲೆ ಒಂದೆರಡು ಸೊಟ್ಟಪೊಟ್ಟ ಲೈನ್‌ಗಳನ್ನು ಗೀಚಿ ತಂದನು. ಆಗ ನಾನು ಆ ಮಗುವಿಗೆ ಹೇಳಿದೆ ಇದು ಏನು ಬರೆದಿರುವೆ ಎಂದು ಆಗ ಆ ಮಗು ಹೇಳಿದನು 'ಹುಝೂರ್ ನಾನು ನಿಮ್ಮನ್ನು ಪ್ರೀತಿಸುತ್ತೇನೆ' ಎಂದು ಬರೆದಿರುವೆನು ಎಂದನು. ಅವರು ಹೇಳುತ್ತಾರೆ ನಾನು ಆ ಪತ್ರವನ್ನು ಇಲ್ಲಿ ತಂದು ನೀಡಿದೆ. ನನ್ನ ಕಡೆಯಿಂದ ಅವರಿಗೆ ಉತ್ತರವು ಸಹ ರವಾನಿಸಲಾಯಿತು. ಆ ಮಗುವಿಗೆ ನನ್ನ ಉತ್ತರ ಲಭಿಸಿದಾಗ ಅವರ ತಂದೆ ಹೇಳುತ್ತಾರೆ ಆತನ ಮತ್ತು ಇಡಿ ಕುಟುಂಬದ ಸಂತೋಷಕ್ಕೆ ಮಿತಿ ಇರಲಿಲ್ಲ.

ಅದೇ ರೀತಿ ಇನ್ನೊಂದು ಹುಡುಗನ ಉದಾಹರಣೆ ಇದೆ. ಮೆಸಿಡೋನಿಯದ ಮುಬಲ್ಲಿಗರು ಬರೆಯುತ್ತಾರೆ: ಕಳೆದ ದಿನಗಳಲ್ಲಿ ಬೋಸ್ನಿಯದ ಸಂದರ್ಶನದ ಸಂದರ್ಭದಲ್ಲಿ ನನ್ನ ಭೇಟಿಯು ಓರ್ವ ಅಹ್ಮದಿಯೊಂದಿಗಾಯಿತು. ಅವರು ಪಾಕಿಸ್ತಾನದವರಾಗಿದ್ದರು ತಬ್‌ಲೀಗಿನ ಮಾತುಕತೆ ನಡೆಯಿತು. ಸತತವಾಗಿ ಭೇಟಿಗಳು ನಡೆಯುತ್ತಲೆ ಇದ್ದವು. ಆತನು ಹೇಳಿದನು ಕೆಲವು ದಿವಸಗಳ ಮುಂಚೆ ದುಬೈ ವಿಮಾನ ನಿಲ್ದಾಣದಲ್ಲಿ ಅವರ ಭೇಟಿಯು ಒಂದು ಕುಟುಂಬದೊಂದಿಗಾಯಿತು. ಅವರ ಮೂರು ನಾಲ್ಕು ವರ್ಷ ಪ್ರಾಯದ ಹುಡುಗಿ ಹೇಳುತ್ತಿದ್ದಳು ನಾವೆಲ್ಲರು ನಮಾಝ್ ನಿರ್ವಹಿಸಬೇಕು ಮತ್ತು ಸತ್ಯವನ್ನೇ ಹೇಳಬೇಕು ಎಂದು ಹೇಳುತ್ತಿದ್ದಳು. ನನಗೆ ಇವರು ಜಮಾಅತೆ ಅಹ್ಮದಿಯಾದ ಸದಸ್ಯರು ಎಂದು ತಿಳಿದು ಬಂದಾಗ ನಾನು ಆ ಹುಡುಗಿಯನ್ನು ಕೇಳಿದೆ ನಿನ್ನ ಜೀವನದ ಅತಿ ದೊಡ್ಡ ಆಸೇ ಏನಾಗಿದೆ ಎಂದು. ಅವಳು ಹೇಳಿದಳು ಲಂಡನ್‌ನಲ್ಲಿ ಪ್ರೀತಿಯ ಹುಝೂರ್ ಅವರನ್ನು ಭೇಟಿಯಾಗಲು ಬಯಸುತ್ತೇನೆ ಎಂದು. ಅವರು ಹೇಳುತ್ತಾರೆ ಈ ಮಾತು ನನ್ನ ಮೇಲೆ ಬಹಳ ಪ್ರಭಾವವನ್ನು ಬೀರಿತು ಇಷ್ಟು ಚಿಕ್ಕ ಪ್ರಾಯದ ಹುಡುಗಿಯ ದೊಡ್ಡ ಆಸೆ ಖಲೀಫರನ್ನು ಭೇಟಿಯಾಗುವುದಾಗಿದೆ.

ಅದೇ ರಿತಿ ಪ್ರಸ್ತುತ ಕಾಲದಲ್ಲಿ ಮಕ್ಕಳ ಆಟದ ಬಗ್ಗೆ ನಾನು ಅದನ್ನು ಆಡಬಾರದು ಅದರಿಂದ ಕೆಟ್ಟ ಅಭ್ಯಾಸಗಳು ಬೀಳುವುದು ಎಂದು ಹೇಳಿದಾಗ ಅನೇಕ ಪೋಷಕರು ಇವರನ್ನು ಹೇಗೆ ತಡೆಯುವುದು ಎಂದು ಸಂಕಟದಲ್ಲಿದ್ದರು. ಆದರೆ ಅನೇಕ ಪೋಷಕರು ನನಗೆ ಬರೆದಿದ್ದಾರೆ ನಿಮ್ಮ ಖುತ್‌ಬವನ್ನು ಆಲಿಸಿದ ನಂತರ ಮಕ್ಕಳು ಸ್ವತಃ ಬಂದು ಹೇಳಿದರು ಈಗ ಖಲೀಫರ ಆದೇಶವಿದೆ ಇದನ್ನು ಆಡಬಾರದು ಎಂದು. ಆದ್ದರಿಂದ ನಾವು ಯಾವಾಗಲು ಇದನ್ನು ಆಡುವುದಿಲ್ಲ ಎಂದು. ಈಗಲೂ ಸಹ ಅನೇಕ ಮಕ್ಕಳಿಂದ ಪತ್ರಗಳು ಲಭಿಸುತ್ತಿದೆ. ಅವರೆಲ್ಲರು ಅದರಲ್ಲಿ ನಾವು ಇಷ್ಟು ಹೊತ್ತು ಆಡಬಹುದೇ ಎಂದು ಪ್ರಶ್ನಿಸುತ್ತಿದ್ದಾರೆ ಅಂದರೆ ಅವರಲ್ಲಿ ಖಲೀಫರೊಂದಿಗೆ ಒಂದು ನಿಖಟವಾದ ಸಂಬಂಧವಿದೆ. ನಾವು ಅವರಿಗೆ ದೂರು ನೀಡಬಾರದು. ಖಲೀಫರು ತಡೆದಿರುವ ಕೆಲಸ ಮಾಡಬಾರದು ಖಲೀಫರು ನಮ್ಮ ಒಳಿತಿಗಾಗಿಯೇ ಹೇಳುತ್ತಾರೆ ಎಂಬ ಬಾವನೆಗಳು ಅವರಲ್ಲಿವೆ.

ಹೋಂಡೊ ರೂಸಿನ ಓರ್ವ ಮುಬಲ್ಲಿಗರು ಬರೆಯುತ್ತಾರೆ ಓರ್ವ ಸ್ಥಳಿಯ ಅಹ್ಮದಿ ಪರ್ಸಿ ಮೋರಿಯೋ ಅನೇಕ ತೊಂದರೆಗಳಿಗೆ ಸಿಲುಕಿದ್ದರು. ಅವರ ಪರಿಸ್ಥಿತಿಗಳನ್ನು ಆಲಿಸಿ ನಾನು ಅವರಿಗೆ ಹೇಳಿದೆ ತಮ್ಮ ತೊಂದರೆಗಳ ಪರಿಹಾರಕ್ಕೆ ಖಲೀಫರಿಗೆ ದುಆ ಗಾಗಿ ಪತ್ರ ಬರೆಯಿರಿ ಎಂದು. ಅವರು ಪತ್ರ ಬರೆದಾಗ ಅವರ ಸುಮಾರು ಸಮಸ್ಯೆಗಳು ಬಗೆ ಹರಿದವು. ಹೇಳುತ್ತಾರೆ ಅದರಿಂದ ನನಗೆ ಒಂದು ದಿವ್ಯ ಶಕ್ತಿ ಪ್ರಾಪ್ತವಾಯಿತು ಮತ್ತು ಖಿಲಾಫತ್‌ನ ಮೇಲೆ ನನಗೆ ದೃಢ ನಂಬಿಕೆ ಉಂಟಾಯಿತು.

ಮರಾಕಷ್‌ನಿಂದ ಅಫಾರಿ ಸಾಹೆಬ್ ಹೇಳುತ್ತಾರೆ ನೀವು ನನ್ನ ಜೀವನವನ್ನು ಅನುಗ್ರಹಗಳಿಂದ ಪ್ರಜ್ವಲಿಸಿದ್ದೀರ. ಅಲ್ಲಾಹನಿಗೆ ಕೃತಜ್ಞನಾಗಿದ್ದೇನೆ. ಅಲ್ಲಾಹನು ನನಗೆ ಮಾರ್ಗದರ್ಶನ ನೀಡಿದ್ದಾನೆ. ನಾನು ನಿಮ್ಮನ್ನು ನೋಡಿದರೆ ನನಗೆ ಅವಮುಲು ಏರಿದಂತಾಗುತ್ತದೆ. ಒಂದು ಆಗಾಧವಾದ ಭಾವನೆಗಳುಂಟಾಗುತ್ತದೆ. ನಾನು ಎಂದೂ ನಿಮ್ಮೊಂದಿಗೆ ಕುಳಿತುಕೊಂಡಿಲ್ಲ ಮತ್ತು ಎಂದಿಗೂ ಮಾತನಾಡಲಿಲ್ಲ. ನಿಸ್ಸಂದೇಹವಾಗಿಯೂ ಇದು ಅಲ್ಲಾಹನ ಅನುಗ್ರಹವಾಗಿದೆ ಮತ್ತು ನಿಜವಾದ ಪ್ರೀತಿಯಾಗಿದೆ. ಅಲ್ಲಾಹನು ನಿಮಗೆ ಸಹಾಯ ನೀಡಲಿ.

ಯಮನ್‌ನಿಂದ ಈಮಾನ್ ಸಾಹಿಬ ಹೇಳುತ್ತಾರೆ: ನನಗೆ ಹುಝೂರ್ ಅವರೊಂದಿಗೆ ನನಗಿಂತ, ನನ್ನ ಮಕ್ಕಳಿಗಿಂತ, ನನ್ನ ಕುಟುಂಬಕ್ಕಿಂತ ಮತ್ತು ಎಲ್ಲರಿಗಿಂತ ಹೆಚ್ಚು ಪ್ರೀತಿ ಇದೆ. ಇದರಿಂದ ನನ್ನ ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ. ಮತ್ತು ನನಗೆ ಇನ್‌ಶಾಅಲ್ಲಾಹ್ ಪರಿಸ್ಥಿತಿಯು ಉತ್ತಮವಾಗುತ್ತದೆ ಎಂದು ದೃಢವಾದ ನಂಬಿಕೆ ಇದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಆಗಮನ ಮತ್ತು ಅವರ ನಂತರ ಖಿಲಾಫತ್ ಖಾಯಮ್ ಆದ ಕಾರಣವು ಅನೈಕ್ಯತೆಯನ್ನು ಸುಧಾರಿಸಲು ಹಾಗೂ ನಮ್ಮೆಲ್ಲರ ದುಃಖಗಳನ್ನು ದೂರಗೊಳಿಸಲಿಕ್ಕಾಗಿದೆ. ಖಿಲಾಫತ್ ಖಾಯಮ್ ಆಯಿತು. ನನ್ನ ಪರಿಸ್ಥಿತಿಯು ಪ್ರವಾದಿ ಮುಹಮ್ಮದ್(ಸ) ಹೇಳಿದ ಹಾಗೆ ಓ ಅಲ್ಲಾಹನೆ! ಒಂದು ವೇಳೆ ನೀನು ನಮ್ಮಿಂದ ಬೇಸರವಿಲ್ಲದಿದ್ದರೆ ನಮಗೆ ಯಾವುದೇ ಚಿಂತೆ ಇಲ್ಲ. ಅಲ್ಲಾಹನಲ್ಲಿ ನಾನು ಬೇಡಿಕೊಳ್ಳುವುದೇನೆಂದರೆ ಅಲ್ಲಾಹನು ನನ್ನನ್ನು ಆ ಅದೃಷ್ಟವಂತರಲ್ಲಿ ಸೇರಿಸಲಿ, ಯಾರಿಂದ ನೀವು ಪ್ರೀತಿಸುವವರಾಗಿದ್ದೀರಿ ಅವರಿಂದ ಮತ್ತು ಅವರ ಮಡದಿ ಮಕ್ಕಳುಗಳಿಂದ ನೀವು ಸಂತುಷ್ಟರಾಗಿದ್ದೀರಿ.

ಹೃದಯಗಳಲ್ಲಿ ಪ್ರಾಮಾಣಿಕತೆಯನ್ನೂ, ನಿಷ್ಠೆಯನ್ನೂ ಸೃಷ್ಟಿಸುವುದರ ಸಂಬಂಧವು ಅಲ್ಲಾಹನೊಂದಿಗಿವೆ. ಯಾವುದೇ ಲೌಕಿಕ ಶಕ್ತಿ ಅದನ್ನು ಕಿತ್ತುಕೊಳ್ಳಲಾರದು. ಅದರ ಕೆಲವು ಉದಾಹರಣೆಗಳನ್ನು ನಾನು ಮೇಲೆ ವಿವರಿಸಿದ್ದೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದರು: ಅಲ್ಲಾಹನ ವಾಗ್ದಾನಗಳು ಈಡೇರುವುದನ್ನು ನೀವು ಕಾಣುವಿರಿ ಎಂದು. ಅಲ್ಲಾಹನ ವಾಗ್ದಾನಗಳು ಈಡೇರುವುದನ್ನು ಕಾಣಲು ನಮ್ಮಲ್ಲಿ ಬಹುತೇಕ ಜನರಿಗೆ ಭಾಗ್ಯ ಲಭಿಸಲಿ – ಆಮೀನ್.

ಈಗ ನಾನು ಎಂ.ಟಿ.ಎ ಬಗ್ಗೆ ಒಂದು ಪ್ರಕಟಣೆ ನೀಡುವೆನು. ಇದು ಸಹ ಅಲ್ಲಾಹನ ಒಂದು ವಾಗ್ದಾನದ ಮೆರೆಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸಂದೇಶವನ್ನು ಪ್ರಪಂಚಾದ್ಯಂತ ಹರಡಿಸುವ ಬಗ್ಗೆ ಇದೆ. ಮೇ 27ನೇ ದಿನಾಂಕದಿಂದ ವಿವಿಧ ಪ್ರದೇಶಗಳಿಗೆ ಅನುಕೂಲವಾಗುವಂತೆ ಎಂ.ಟಿ.ಎ. ಚ್ಯಾನಲ್ ಪ್ರಾರಂಭಿಸಲಾಗಿದೆ. ಅದರ ವಿವರ ಹೀಗಿದೆ. ಪ್ರಾರಂಭದಲ್ಲಿ ಕೆಲವು ಜಾಗಗಳಲ್ಲಿ ಅಮೇರಿಕಾದಲ್ಲಿ ವಿಶೇಶವಾಗಿ ಸ್ವಲ್ಪ ತೊಂದರೆಯು ಉಂಟಾಯಿತು. ಆದರೆ ಈಗ ಅದು ಬಗೆಹರಿದಿದೆ ಎಂದು ನಂಬಿದ್ದೇನೆ. ವಿವಿಧ ಪ್ರದೇಶಗಳಿಗೆ ಅನುಕೂಲವಾಗುವಂತೆ ಎಂ.ಟಿ.ಎ ಎಂಟು ಚ್ಯಾನಲ್‌ಗಳಾಗಿ ವಿಭಜಿಸಲಾಗಿದೆ.

MTA 1 ಚ್ಯಾನಲ್ ಸಾಮಾನ್ಯವಾಗಿ ಯು.ಕೆ ಮತ್ತು ಯೂರೋಪಿನ ಕೆಲವು ಪ್ರದೇಶಗಳಲ್ಲಿನ ವೀಕ್ಷಕರಿಗಿರುವುದು. ಈ ಚ್ಯಾನಲ್‌ನಲ್ಲಿ main language ಆಂಗ್ಲ ಮತ್ತು ಉರ್ದು ಆಗಿರುವುದು. ಈ ಚಾನಲ್‌ನಲ್ಲಿ ಆಂಗ್ಲ ಮತ್ತು ಉರ್ದು ಭಾಷೆಯ ಕಾರ್ಯಕ್ರಮಗಳು ಪ್ರಕಟವಾಗುವುದು. ಅದೇ ರೀತಿ ಇನ್ನು ಕೆಲವು ಭಾಷೆಯ ಕಾರ್ಯಕ್ರಮಗಳು ಆಂಗ್ಲ ಭಾಷೆ ಮತ್ತು ಉರ್ದು ಭಾಷೆಯಲ್ಲಿ ಭಾಷಾಂತರವಾಗಿ ಪ್ರಕಟವಾಗುವುದು. ನನ್ನ ಲೈವ್, ರೆಕಾರ್ಡ್ ಆಗಿರುವ ಕಾರ್ಯಕ್ರಮಗಳು MTA 1 world ನ ರೂಪದಲ್ಲಿ ಉಳಿದ ಎಲ್ಲಾ ಚ್ಯಾನಲ್‌ಗಳಲ್ಲಿಯು ಪ್ರಕಟವಾಗುವುದು.

MTA 2 Europe ಈ ಚ್ಯಾನಲ್ ಯೂರೋಪ್, ಮಿಡಿಲ್ ಈಷ್ಟ್‌ನ ಪ್ರದೇಶಗಳಲ್ಲಿನ ವೀಕ್ಷಕರಿಗಿರುವುದು. ಇದರಲ್ಲಿ ಉರ್ದು, ಆಂಗ್ಲ, ಟರ್‌ಕಿಷ್, ಫ್ರೆಂಚ್, ಸ್ಪೇನಿಷ್, ಡಚ್, ರಶಿಯನ್ ಹಾಗೂ ಪರ್‌ಶಿಯನ್ ಭಾಷೆಗಳಲ್ಲಿ ಕಾರ್ಯಕ್ರಮಗಳು ಪ್ರಕಟವಾಗುವುದು. ಇದರಲ್ಲಿ ಈಗ ಎರಡು, ಎರಡು ಗಂಟೆಯ ಸೇವೆ ನಡೆಯುತ್ತಿದೆ. ಉಳಿದೆಲ್ಲ ಬಾಷೆಗಳ ಕಾರ್ಯಕ್ರಮಗಳನ್ನು ಅದೇ ರೀತಿಯಲ್ಲಿ ಪ್ರಕಟವಾಗುವುದು.

MTA 3 Al Arabiya. ಈ ಚ್ಯಾನಲ್ ಮೊದಲು ನಡೆಯುತ್ತಿರುವ ರೀತಿಯಲ್ಲಿಯೆ ನಡೆಯುವುದು ಇದರಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ. ಇದರ main language ಅರಬಿ ಆಗಿರುವುದು.

MTA 4 Africa. ಈ ಚ್ಯಾನಲ್ ಪೂರ್ವ ಆಫ್ರೀಕ ಹಾಗೂ ಪಶ್ಚಿಮ ಆಫ್ರಿಕದ ರಾಷ್ಟ್ರಗಳ ವೀಕ್ಷಕರಿಗಿರುವುದು. ಈ ಚ್ಯಾನಲ್‌ನ main language ಆಂಗ್ಲ, ಫ್ರೆಂಚ್, ಮತ್ತು ಸವಾಹೀಲಿ ಆಗಿರುವುದು. ಈ ಭಾಷೆಯ ಕಾರ್ಯಕ್ರಮಗಳೆ ಇದರಲಿ ಪ್ರಕಟವಾಗುವುದು.

MTA 5 Africa. ಈ ಚ್ಯಾನಲ್ ಪಶ್ಚಿಮ ದಿಕ್ಕಿನ ರಾಷ್ಟ್ರಗಳ ವೀಕ್ಷಕರಿಗಿರುವುದು. ಈ ಚ್ಯಾನಲ್‌ನ main language ಆಂಗ್ಲವಾಗಿರುವುದು. ಇದಲ್ಲದೆ ಕರಿಯೋಲ್, ಹಾಓಸಾ, ಜೋಯೀ ಮತ್ತು ಯೂರೋಬ್ಬಾ ಭಾಷೆಗಳ ಕಾರ್ಯಕ್ರಮಗಳು ಪ್ರಕಟವಾಗುವುದು.

MTA 6 Asia. ಈ ಚಾನಲ್ ಏಶಿಯಾ ಸೆಟ್‌ನಲ್ಲಿ ನಡಿಯುವುದು. ಏಶಿಯಾ, ಫಾರ್‌ಈಷ್ಟ್, ಇಂಡೋನೇಶಿಯಾ, ಜಾಪಾನ್, ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡ್ ಮತ್ತು ರಶ್ಶಿಯಾ ಮುಂತಾದ ರಾಷ್ಟ್ರಗಳ ವೀಕ್ಷಕರಿಗಿರುವುದು. ಈ ಚ್ಯಾನಲ್‌ನ main language ಉರ್ದು, ಆಂಗ್ಲ ಮತ್ತು ಇಂಡೋನೇಶಿಯಾ. ಇದರಲ್ಲಿ ಉರ್ದು, ಆಂಗ್ಲ, ಬಂಗಾಳಿ, ಪುಶ್ತು, ಸಿಂಧಿ, ಸರಾಯಿಕಿ, ಫಾರಸಿ, ಇಂಡೋನೇಶಿಯನ್ ಮತ್ತು ರಶ್ಶಿಯನ್ ಭಾಷೆಗಳ ಕಾರ್ಯಕ್ರಮಗಳು ಪ್ರಕಟವಾಗುವುದು.

MTA 7 Asia. ಇದು HD ಚ್ಯಾನಲ್ ಆಗಿರುವುದು. ಚಿಕ್ಕ ಡಿಶ್ ಮುಖಾಂತರ ನೋಡಬಹುದು. ಇದು ಭಾರತ, ಪಾಕಿಸ್ತಾನ, ಬಂಗ್ಲಾದೇಶ್, ಶ್ರೀಲಂಕ ಮತ್ತು ನೇಪಾಳ ಮುಂತದ ರಾಷ್ಟ್ರಗಳಲ್ಲಿ ಇದನ್ನ ವೀಕ್ಷಿಸಬಹುದು. ಈ ಚ್ಯಾನಲ್‌ನ ಭಾಷೆಗಳು ಉರ್ದು, ಬಂಗಾಳಿ, ಮತ್ತು ಹಿಂದಿ ಆಗಿರುವುದು. ಇದಲ್ಲದೆ ತಮಿಳು ಮತ್ತು ಮಲಯಾಳಮ್ ಭಾಷೆಗಳಲ್ಲಿಯು ಕಾರ್ಯಕ್ರಮಗಳು ಪ್ರಕಟವಾಗುವುದು.

MTA 8 America. ಈ ಚ್ಯಾನಲ್ ಅಮೇರಿಕ, ನಾರ್ಥ್ ಅಮೇರಿಕಾ ಮತ್ತು ಕೆನೆಡಾ ಮುಂತಾದ ರಾಷ್ಟ್ರಗಳ ವೀಕ್ಷಕರಿಗಾಗಿರುವುದು. ಚಿಕ್ಕ ಬದಲಾವಣೆ ಇದೆ. ಇದರಲ್ಲಿರುವ ಎಲ್ಲಾ ಚ್ಯಾನಲಲ್‌ಗಳು ಹಾಗೆಯೇ ನೋಡಬಹುದು. ಇಲ್ಲಿ MTA 8 America ಎಂದು ಹೆಸರು ನೀಡಿರುವುದು ಇದು ಅಮೇರಿಕಾ, ನಾರ್ಥ್ ಅಮೇರಿಕಾ ಮತ್ತು ಕೆನೆಡಾದ ವಿಕ್ಷಕರಿಗೋಸ್ಕರ ಇರುವುದು. ಈ ಚ್ಯಾನಲ್‌ನ ಭಾಷೆ ಆಂಗ್ಲ, ಮತ್ತು ಉರ್ದು ಆಗಿರುವುದು. ಇದಲ್ಲದೆ ಪ್ರೆಂಚ್ ಮತ್ತು ಸ್ಪೇನಿಷ್ ಭಾಷೆಗಳ ಕಾರ್ಯಕ್ರಮಗಳು ಪ್ರಕಟವಾಗುವುದು.

ಎಂ.ಟಿ.ಎ ನ ಎಲ್ಲಾ ಲೈವ್ ಕಾರ್ಯಕ್ರಮಗಳು. ಕೆಳಗೆ ನಮೂದಿಸಿದ ಚ್ಯಾನಲ್‌ಗಳಲ್ಲಿ ಪ್ರಕಟವಾಗುವುದು: ರಾಹೆಹುದಾ, ಅಲ್‌ಹವಾರುಲ್ ಮುಬಾಶಿರ್ ಮತ್ತು ಬಾಂಗ್ಲ ಭಾಷೆಯ ಕಾರ್ಯಕ್ರಮಗಳು ಎಂ.ಟಿ.ಎಯ ಎಲ್ಲಾ ಚ್ಯಾನಲ್‌ಗಳಲ್ಲಿ ಪ್ರಕಟವಾಗುವುದು. ಈ ಕಾರ್ಯಕ್ರಮಗಳ ಅನುವಾದ ಈ ಚ್ಯಾನಲ್‌ನ ಮೇನ್ ಲ್ಯಾಂಗ್‌ವೇಜಸ್‌ನೊಂದಿಗೆ ಪ್ರಕಟಗೊಳಿಸುವುದು. ಮತ್ತು MTA Journal, Islam Sesiyetin ಇದು ಜರ್ಮನಿ ಭಾಷೆಯಾಗಿದೆ. ಇದು MTA 2 Europeನಲ್ಲಿ ಪ್ರಕಟವಾಗುವುದು. Horizen de Islam ಇದು MTA 1, MTA 2 Europe, MTA 4 Africa, ಮತ್ತು MTA 5 Africa. ಈ ಚ್ಯಾನಲ್‌ನ main language ನೊಂದಿಗೆ ಫ್ರೆಂಚ್ ಭಾಷೆಯಲ್ಲಿ ಪ್ರಕಟವಾಗುವುದು. ಇದರ ಅನುವಾದವು ಜೊತೆ ಜೊತೆಯಲ್ಲಿ ಆಗುವುದು. ಅದೇ ರೀತಿ ಇನ್ತೆ ಖಾಬೆ ಸುಖನ್ ಮುಂತಾದ ಕಾರ್ಯಕ್ರಮಗಳು ಸಹ MTA 1, MTA 2 Europe, MTA 6 ಮತ್ತು MTA 7 Asia ನಲ್ಲಿ ಪ್ರಕಟವಾಗುವುದು.

ಚ್ಯಾನಲ್‌ಗಳ ಪ್ರಕಾರ ಸ್ವಲ್ಪ ಬದಲಾವಣೆದೊಂದಿಗೆ ಬೇರೆ ಬೇರೆಯ ಹೆಸರುಗಳನ್ನು ನೀಡಲಾಗಿದೆ. ಸೆಟ್ಟಿಂಗ್ಸ್‌ನಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ.

ಅಲ್ಲಾಹನು ಈ ವ್ಯವಸ್ಥೆಯಲ್ಲಿ ಅನುಗ್ರಹ ನೀಡಲಿ. ಮೊದಲಿಗಿಂತ ಹೆಚ್ಚಿನ ಮಟ್ಟದಲ್ಲಿ ಇಸ್ಲಾಮಿನ ನೈಜ ಸಂದೇಶ ಲೋಕಕ್ಕೆ ತಲಪಿಸಲು ಎಂ.ಟಿ.ಎ.ಗೆ ಭಾಗ್ಯ ದೊರಕಲಿ – ಆಮೀನ್.

*************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಬೇರ್ಪಡಿಸಿ ಇಟ್ಟರೆ ಅದು ಕಾರ್ಯ ನಿರ್ವಹಿಸುವುದಿಲ್ಲ. ಹೀಗೆ **ವಝ್‌ಉಶ್ಶೈ ಫೀ ಮಹಲ್ಲಿಹೀಂ** ಯ ಹೆಸರು ಸ್ಥಿರಚಿತ್ತತೆಯಾಗಿದೆ. ಅಥವಾ ಬೇರೆ ಪದಗಳಲ್ಲಿ ಹೇಳುವುದಾದರೆ ಅದರ ಹೆಸರು ಸ್ಥಿರಚಿತ್ತತೆಯಾಗಿದೆ. ಆದುದರಿಂದ ಮನವನ ಸೃಷ್ಟಿಯನ್ನು ಅದರ ಅಂಗರಚನೆಗಳನ್ನು ಅದೇ ಸ್ಥಿತಿಯಲ್ಲಿ ಕಾಪಾಡದಿದ್ದರೆ ಅದನ್ನು ಸರಿಯಾದ ಸ್ಥಿತಿಯಲ್ಲಿ ಇಡದಿದ್ದರೆ ಅದು ತನ್ನ ಶ್ರೇಷ್ಠತೆ ಎತ್ತಿ ಹಿಡಿಯಲಾಗುವುದಿಲ್ಲ, ದುಆದ ರೀತಿಯೂ ಅದೇ ಆಗಿದೆ ಎರಡು ಮಹೋನ್ನತ ಹೆಸರುಗಳು ಒಟ್ಟುಗೂಡಬೇಕಾಗಿದೆ. ಅದು ಅಲ್ಲಾಹನೆಡೆ ಹೋಗಬೇಕು ಹೊರತು ಬೇರೆಡೆ ತಿರುಗಬಾರದು. ತನ್ನ ಸ್ವಹಿತವೇ ಇರಲಿ ತನ್ನ ಸ್ವಾರ್ಥದ ವಿಗ್ರಹವು ಇರಕೂಡದು, ಆಗ **"ಉದ್‌ಊನಿ ಅಸ್ತಜಿಬ್‌ಲಕುಮ್"** (ಅಲ್‌ಮೂಮಿನ್:61) ಎಂಬುದರ ಸಂತೋಷ ಲಭಿಸುತ್ತದೆ. ಆದುದರಿಂದ ನಾನು ಬಯಸುವುದೇನೆಂದರೆ ನೀವು ಸ್ಥಿರಚಿತ್ತತೆಗಾಗಿ ಹೋರಾಡಿರಿ. ಭಕ್ತಿಯ ಮೂಲಕ ಅದನ್ನು ಪಡೆಯಿರಿ ಏಕೆಂದರೆ ಅದು ಮನುಷ್ಯನನ್ನು ದೇವಸಾನಿಧ್ಯದವರೆಗೆ ತಲುಪಿಸುತ್ತದೆ ಮತ್ತು ಅವನ ಪ್ರಾರ್ಥನೆಗಳು ಸ್ವೀಕಾರದ ಭಾಗ್ಯ ಪಡೆಯುತ್ತದೆ. ಪ್ರಸ್ತುತ ಕಾಲದಲ್ಲಿ ಪ್ರಾರ್ಥನೆಗಳು ಸ್ವೀಕಾರ ಆಗುವುದಿಲ್ಲ ಎಂದು ದೂರುವ ಬಹಳ ಜನರಿದ್ದಾರೆ. ಆದರೆ ನಾನು ಹೇಳುತ್ತೇನೆ, ವಿಷಾದ ಸೂಚಿಸುತ್ತೇನೆ. ಎಲ್ಲಿಯವರೆಗೆ ಸ್ಥಿರಚಿತ್ತತೆ ಕಾಪಾಡುವುದಿಲ್ಲವೋ ಪಾರ್ಥನೆ ಸ್ವೀಕಾರದ ಸಂತೋಷಗಳು ಹೇಗೆ ಪಡೆಯುವಿರಿ, ಪ್ರಾರ್ಥನೆ ಸ್ವೀಕಾರದ ಕುರುಹು ನಾವು ಇದೇ ಲೋಕದಲ್ಲಿ ಪಡೆಯುತ್ತೇವೆ. ಸ್ಥಿರಚಿತ್ತತೆಯ ನಂತರ ಮಾನವನ ಹೃದಯದ ಮೇಲೆ ಒಂದು ಸಮಾಧಾನ ಹಾಗೂ ಶಾಂತತೆಯ ಭಾವಗಳು ಉಂಟಾಗುತ್ತದೆ. ಯಾವುದೇ ರೀತಿಯ ದೈಹಿಕ ಅಸಫಲತೆ ಮತ್ತು ವಿಫಲತೆಯ ಪರಿಣಾಮ ಮನಸ್ಸಿನ ಮೇಲೆ ಆಗುವುದಿಲ್ಲ. ಆದರೆ ಪ್ರಾರ್ಥನೆ (ದುಆದ) ವಾಸ್ತವಿಕತೆಯನ್ನು ಅರಿಯದಿರುವ ಕಾರಣ ಅಲ್ಪ ಸ್ವಲ್ಪ ಕಷ್ಟ ನಷ್ಟಗಳು ಸಹ ನರಕಾಗ್ನಿಯಂತೆ ಹೃದಯವನ್ನು ಆವರಿಸುತ್ತದೆ ಮತ್ತು ಗಾಬರಿಗೊಳಿಸುತ್ತದೆ. ಅದರ ಸಂಕೇತವಾಗಿದೆ. ಈ ವಚನಃ **"ನಾರುಲ್ಲಾಹಿ ಮುಖದ, ಅಲ್ಲತಿ ತತ್ತಲಿವು ಅಲ್ ಅಫ್‌ಯಿದ** (ಅಲ್‌ಹುಮಝು:7,8). ಅಲ್ಲದೆ ಹದೀಸಿನಲ್ಲಿ ಹೀಗೆ ವರದಿ ಆಗಿದೆ: ಜ್ವರವು ನರಕಾಗ್ನಿಯ ಒಂದು ಮಾದರಿಯಾಗಿದೆ. **(ಮಲ್ಫೂಝಾತ್ ಸಂ:1, ಪುಟ: 152 ರಿಂದ 155, ಮುದ್ರಣ 2018 ಖಾದಿಯಾನ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಸ್ಥಾಪಕರಾದ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಮತ್ತು ಅವರ ಶಿಷ್ಯವರ್ಗ 13 ವರ್ಷ ಮಕ್ಕದಲ್ಲಿ ವಿರೋಧವನ್ನು ಎದುರಿಸಿದರು. ಶತ್ರುಗಳು ಅವರನ್ನು ಹಿಂಸಿಸಿದರು. ಉಪದ್ರವ ನೀಡಿದರು. ಇಸ್ಲಾಮ್ ಸ್ವೀಕರಿಸುವವರನ್ನು ಹತ್ಯೆ ಮಾಡಲಾಯಿತು. ಕೊನೆಯಲ್ಲಿ ಅವರು ವಲಸೆ ಹೊಂದಿ ಮದೀನಕ್ಕೆ ಹೋಗಬೇಕಾಯಿತು. ಅಲ್ಲೊಂದು ಸಣ್ಣದಾದ ಇಸ್ಲಾಮಿ ಆಡಳಿತ ಸ್ಥಾಪನೆಯಾಯಿತು. ಆ ಆಡಳಿತದಲ್ಲಿ ಕೇವಲ ಎಲ್ಲರೂ ಮುಸ್ಲಿಮರಾಗಿರಲಿಲ್ಲ. ಅಲ್ಲಿ ಯಹೂದಿಯರೂ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅವರೊಡನೆ ಒಡಂಬಡಿಕೆಗಳು ಆದವು. ಆ ಒಡಂಬಡಿಕೆಗಳು ಅವರವರ ಶರೀಅತ್ತಿನ ಪ್ರಕಾರ ಸಮಸ್ಯೆಗಳನ್ನು ಪರಿಹರಿಸಲು ವಿಧಿಸಲಾಗಿತ್ತು. ಸಮಾನತೆ ಇರುವ ವಿಷಯದಲ್ಲಿ ಒಂದೇ ಕಾಯಿದೆ ವಿಧಿಸಲಾಯಿತು. ಅದರ ಪಾಲನೆ ಪ್ರತಿಯೊಬ್ಬರಿಗೆ ಅನಿವಾರ್ಯವಾಗಿತ್ತು.

ಹುಝೂರ್(ಅಬಿಅ) ಹೇಳಿದರು. ಮುಸಲ್ಮಾನರಲ್ಲಿ ಉಗ್ರವಾದ ಎಂದಾದರೆ ನಾನು ಈ ವೊದಲು ಹಲವು ಸಂದರ್ಭದಲ್ಲಿ ಈ ವಿಷಯದಲ್ಲಿ ಮಾತನಾಡಿದ್ದೇನೆ. ಜಮಾಅತ್ತಿನ ಪರಿಚಯವುಳ್ಳವರು ಈ ವಿಷಯ ಓದಿರಲೂಬಹುದು. ಆದರೆ ಇಲ್ಲಿ ನೆರೆದವರು ಹೆಚ್ಚಿನವರು ಈ ಇತಿಹಾಸ ತಿಳಿಯದವರು ಆಗಿರಬಹುದು. ಆದುದರಿಂದ ಸಂಕ್ಷಿಪ್ತವಾಗಿ ಮದೀನ ವಲಸೆಯಾಗಿ ಬಂದ ನಂತರ, ಅವರ ಹಿಂಸೆಗಳನ್ನು ಸಹಿಸಿಕೊಂಡು ಬಂದ ನಂತರ, ಮದೀನದ ಸ್ಥಳೀಯ ಜನರೊಂದಿಗೆ ಶಾಂತಿಯಿಂದ ಇರಬಯಸಿದರು. ಆಗ ಅಲ್ಲಿ ವಿವಿಧ ಧರ್ಮಗಳ ಜನರು ಇದ್ದರು. ಹಲವು ಗೋತ್ರದವರು ಇದ್ದರು. ಅವರೊಡನೆ ಶಾಂತಿಯಿಂದ ಬದುಕುತ್ತಿದ್ದರು. ಆದಾಗ್ಯೂ ಮಕ್ಕದ ಜನರು ಅವರನ್ನು ಶಾಂತಿಯಿಂದ ಇರಲು ಬಿಡಲಿಲ್ಲ ಮತ್ತು ಮುಸ್ಲಿಮರ ಮೇಲೆ ದಂಡೆತ್ತಿ ಹೋದರು. ಈ ಆಕ್ರಮಣದ ಉತ್ತರ ಮೊದಲ ಬಾರಿಗೆ ಯುದ್ಧ ರೂಪದಲ್ಲಿ ಕೊಡಲು ಪವಿತ್ರ ಖುರ್‌ಆನ್‌ನಲ್ಲಿ ಅವತರಣಗೊಂಡ ಮೊದಲ ಆದೇಶ ಹೀಗಿತ್ತು. ದಂಡೆತ್ತಿ ಬಂದ ಈ ಜನರು ಧರ್ಮ ವಿರೋಧಿಗಳಾಗಿದ್ದಾರೆ. ಇದೀಗ ಅವರನ್ನು ಕಠಿಣವಾಗಿ ಉತ್ತರ ನೀಡಲಿಲ್ಲವಾದರೆ ಯಾವ Synagegue ಉಳಿಯಲಾರದು. ಚರ್ಚ್‌ಗಳು ಉಳಿಯಲಾರವು. ಮಂದಿರಗಳು ಉಳಿಯಲಾರವು. ಮಸೀದಿಗಳು ಉಳಿಯಲಾರವು. ಈ ವಚನದ sequence ನೋಡಿರಿ. ಮಸೀದಿಯ ಹೆಸರು ಸಹ ಮೊದಲು ಬರಲಿಲ್ಲ. ಹೊರತು ಕೊನೆಯಲ್ಲಿ ಬಂದಿರುತ್ತದೆ. ಉತ್ತರ ನೀಡುವ ಅಗತ್ಯವೇನಿತ್ತೆಂದರೆ ಧರ್ಮರಕ್ಷಣೆ ಅವಶ್ಯವಾಗಿತ್ತು. ಏಕೆಂದರೆ ಆ ಜನರು ಧರ್ಮವಿರೋಧಿಗಳಾಗಿದ್ದರು. ಈ ದೃಷ್ಟಿಯಿಂದ ಅವರ ಆಕ್ರಮಣಗಳ ಅಥವಾ ಯುದ್ಧಗಳ ಕಾರಣಗಳನ್ನು ಸೂಕ್ತವಾಗಿ ನ್ಯಾಯಸಮ್ಮತವಾಗಿ ಅವಲೋಕನ ಮಾಡಿದರೆ ತಿಳಿದೀತು ಮುಸಲ್ಮಾನರ ಮೇಲೆ ಯುದ್ಧಗಳನ್ನು ಹೇರಲಾಗಿದೆ. ಅವರನ್ನು ಹಾನಿಗೊಳಿಸುವ ಪ್ರಯತ್ನ ಮಾಡಲಾಗಿದೆ. ಅವರ ಮೇಲೆ ಆಕ್ರಮಣ ಮಾಡಲಾಗಿದೆ. ಇವೆಲ್ಲದಕ್ಕೆ ಉತ್ತರವಾಗಿ ಮುಸ್ಲಿಮರು ಯುದ್ಧ ಮಾಡಿದ್ದಾರೆ. ಅಂತೂ ಇದು ತುಂಬ ಮಹತ್ವದ ಇತಿಹಾಸವಾಗಿದೆ. ಸಂಕ್ಷಿಪ್ತವಾಗಿ ನಾನು ಇಸ್ಲಾಮಿನ ವಾಸ್ತವದ ಇತಿಹಾಸ ನಿಮ್ಮ ಮುಂದೆ ಇಟ್ಟಿದ್ದೇನೆ. ಇದರಿಂದ ನಿಮ್ಮ ಆತಂಕಗಳು ದೂರವಾಗಬಹುದೆಂದು ಆಶಿಸುತ್ತೇವೆ.

ಹುಝೂರ್(ಅಬಿಅ) ಮುಂದುವರೆದು ಹೇಳಿದರು. ಕೆಲವು ಮುಸ್ಲಿಮರ ವರ್ತನೆ ಈ ರೀತಿಯದ್ದಾಗಿದೆ. ಆದರೆ ಕೆಲವು ಭಾಷಣಗಾರರು ಹೇಳಿದಂತೆ ಕೆಲವು ಕಡೆ ಅಮುಸ್ಲಿಮರು ಸಹ ಇಂತಹ ಕೃತ್ಯಗಳು ಎಸಗುತ್ತಿದ್ದಾರೆ. ಅದಾಗ್ಯೂ ಇದು ಮುಸ್ಲಿಮರ ಶಿಕ್ಷಣವಲ್ಲ. ಅದು ಅವರ ವೈಯಕ್ತಿಕ ಚಾಳಿಯಾಗಿದೆ. ಇಸ್ಲಾಮಿ ಶಿಕ್ಷಣವು ಅದಕ್ಕೆ ವಿರುದ್ಧವಾಗಿದೆ. ಅಂತೂ ಈ ಸಂರಕ್ಷಿತ ಸಮಾಧಿಯಲ್ಲಿ ನಾನು ಹೇಳಬಯಸುವೆವು. ಈ ಉಗ್ರವಾದವು ಅವರ ವೈಯಕ್ತಿಕ ಕೃತ್ಯಗಳಾಗಿವೆ. ಇಸ್ಲಾಮಿ ಇತಿಹಾಸವು ಎಂದೂ ಅದನ್ನು ಸಮರ್ಥನೆ ನೀಡುವುದಿಲ್ಲ. ಹುಝೂರ್(ಅಬಿಅ) ಹೇಳಿದರು. ಇಲ್ಲಿ ಆಗಮಿಸಿ ಮಾತನಾಡಿದ ಇನ್ನೊಬ್ಬ ಭಾಷಣಗಾರರು ತುಂಬ ಒಳ್ಳೆಯ ಮಾತನ್ನು ಹೇಳಿದ್ದಾರೆ. ಅವರ ಮನಸ್ಸಿನಲ್ಲಿ ಮತ್ತು ಅವರ ಕುಟುಂಬಸ್ಥರಲ್ಲಿ ಒಂದು ಭಯ ಆವರಿಸಿತ್ತು. ಅದು ಮೂವತ್ತು ವರ್ಷಗಳ ಹಿಂದಿನಿಂದ ನೆಲೆಸಿತ್ತು. ಅಹ್ಮದಿಯರು ಇಲ್ಲಿ ಬಂದು "Love for all, Hatred for none" ಬ್ಯಾನರ್ ಹಾಕಿದಾಗ ನಾನು ಇದು ಕೋರಿಕೆಯ ಬ್ಯಾನರ್ ಆಗಿದೆ ಅಷ್ಟೇ ಎಂದು ತಿಳಿದಿದ್ದೆ. ಮೂವತ್ತು ವರ್ಷಗಳ ಹಿಂದೆ ಇಂದಿನ ಹಾಗೆ ಪರಿಸ್ಥಿತಿ ಇರಲಿಲ್ಲ. ಆದರೂ ಮುಸ್ಲಿಮರ ಬಗ್ಗೆ ಭಯವಿತ್ತು. ಅವರು ಆ ಭಯವನ್ನಂತೂ ವ್ಯಕ್ತಪಡಿಸಲಿಲ್ಲ. ಆದರೆ ಮನಸ್ಸಿನಲ್ಲಿ ಅದು ಗುಪ್ತವಾಗಿತ್ತು. ಆದರೆ ಅಹ್ಮದಿಯರ ಜೊತೆ ಇದ್ದ ಕಾರಣ ಮೂವತ್ತು ವರ್ಷಗಳ ದೀರ್ಘ ಸಮಯ ಆ ಭಯವನ್ನು ಹೋಗಲಾಡಿಸಿತು. ಅದು ಅಹ್ಮದಿಯರು ನಿಜವಾದ ಇಸ್ಲಾಮಿನ ಶಿಕ್ಷಣ ಕೃತಿರೂಪದಲ್ಲಿ ತೋರಿಸಿದ ಪ್ರಯತ್ನಗಳ ಫಲವಾಗಿತ್ತು.

ಹುಝೂರ್(ಅಬಿಅ) ಹೇಳಿದರು. ಇಸ್ಲಾಮ್ ನೆರೆಹೊರೆಯವರ ಹಕ್ಕುಗಳ ಬಗ್ಗೆಯು ಪ್ರಸ್ತಾಪಿಸಿತ್ತದೆ. ಅಹ್ಮದಿಯರು ಅದನ್ನು ಸಾಧಿಸಿ ತೋರಿಸಿದ್ದಾರೆ. ಅದರ ಪರಿಣಾಮವಾಗಿ ನಮ್ಮ ಸಂಶಯಗಳು ದೂರವಾಗಿವೆ. ನೆರೆಹೊರೆಯರ ಹಕ್ಕುಗಳ ಬಗ್ಗೆ ಒಂದಷ್ಟು ವಿಶ್ಲೇಷಣೆ ಮಾಡಬಯಸುತ್ತೇನೆ. . . "ಪವಿತ್ರ ಖುರ್‌ಆನ್ ಬಹು ನಿಶ್ಚಳವಾಗಿ ನೆರೆಹೊರೆಯರ ಬಗ್ಗೆ ವಿವರಿಸಿದೆ. ನಿಮ್ಮ ಮನೆಗಳ ಅಕ್ಕಪಕ್ಕದಲ್ಲಿರುವವರೆಲ್ಲ ನಿಮ್ಮ ನೆರೆಹೊರೆಯವರಾಗಿದ್ದಾರೆ. ನಿಮ್ಮ ಜೊತೆ ಕೆಲಸ ನಿರ್ವಹಿಸುವವರೂ ಸಹ ನಿಮ್ಮ ನೆರೆಹೊರೆಯವರಾಗಿರುತ್ತಾರೆ. ನಿಮ್ಮ ಜೊತೆ ಪ್ರಯಾಣಿಸುವವರು ಸಹ ನಿಮ್ಮ ನೆರೆಹೊರೆಯವರಾಗಿರುತ್ತಾರೆ. ಈ ರೀತಿ ಒಂದು ದೊಡ್ಡ ವಿವರಣೆಯೇ ಇದೆ.

ಮತ್ತು ಹೇಳಿದರು. ನಿಮಗೆ ಅವರ ಅಗತ್ಯಗಳನ್ನು ಗಮನಿಸುವುದು ಅನಿವಾರ್ಯವಾಗಿದೆ. ಇಸ್ಲಾಮಿನ ಸ್ಥಾಪಕರಾದ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಹೇಳಿದರು. ನನಗೆ ನೆರೆಹೊರೆಯರ ಬಗ್ಗೆ ಗಮನಹರಿಸಲು ಹೆಚ್ಚಿನ ಒತ್ತು ನೀಡಲಾಗಿದೆ. ಅದನ್ನು ಗಹನವಾಗಿ ಗಮನಿಸಿದರೆ ನೆರೆಹೊರೆಯವರಿಗೂ ನಮ್ಮ ಆಸ್ತಿಯಲ್ಲಿ ಪಾಲು ಕೊಡಬಹುದೇನೋ ಎಂಬ ಗುಮಾನಿ ಬರುತ್ತದೆ. ಅಷ್ಟರಮಟ್ಟಿಗೆ ಇಸ್ಲಾಮಿ ಶಿಕ್ಷಣವು ನೆರೆಹೊರೆಯರ ಬಗ್ಗೆ ಕಾಳಜಿ ವಹಿಸಿದೆ. ರಸೂಲುಲ್ಲಾಹ್(ಸ) ರವರ ನಡತೆ ಮತ್ತು ಪ್ರತಿಯೊಬ್ಬ ನಿಜವಾದ ಮುಸ್ಲಿಮನ ನಡತೆ ಆ ಕುರಿತು ಸಾಕ್ಷ್ಯವಿದೆ. ಅವರು ನೆರೆಹೊರೆಯವರನ್ನು ಗೌರವಿಸುವರು.

ಹುಝೂರ್(ಅಬಿಅ) ಹೇಳಿದರು. ಇನ್ನು ಮೌಲ್ಯಗಳ (values) ವಿಷಯ ಹೇಳುವುದಾದರೆ, ವಿವಿಧ ರೀತಿಯ ಜನರಿದ್ದಾರೆ. ಸಂಸ್ಕೃತಿಗಳಿವೆ. ಅವರಿಗೆ ಅವರದ್ದೇ ಆದ ಮೌಲ್ಯಗಳಿವೆ. ಇರುತ್ತವೆ ಇರಬೇಕು. ಒಳ್ಳೆಯದು ಅದು ಸ್ಥಿರವಾಗಿರಬೇಕು. ನೈತಿಕ ಮೌಲ್ಯಗಳೇ ಪ್ರಧಾನವಾಗಿರಬೇಕು. ರಸೂಲುಲ್ಲಾಹ್(ಸ) ನಾವು ಒಳ್ಳೆಯ ಗುಣಗಳ ಮೌಲ್ಯಗಳನ್ನು ಎತ್ತಿ ಹಿಡಿಯುವುದಾದರೆ, ಒಳ್ಳೆಯ ನಡತೆಗಳನ್ನು ಹೊಂದಿದವರಾದರೆ, ಪ್ರತಿ ದಿನ ಆ ಮೌಲ್ಯಗಳನ್ನು ಅನುಸರಣೆ ಮಾಡುವವನಾಗುತ್ತಾನೆ. ಪ್ರತಿಯೊಬ್ಬರಿಗೆ ಅವರದ್ದೇ ಆದ ಒಂದು culture ಇರುತ್ತದೆ. ಅಥವಾ ರಿವಾಜುಗಳಿರುತ್ತವೆ. ಧರ್ಮವಿದೆ ಅದರ ಪ್ರಕಾರ ಅವರಿಗೆ ಗೌರವವು ದೊರೆಯುತ್ತದೆ. ಯಾವುದೇ ತರಹದ conflict ಅಡ್ಡಿ ಬರುವುದಿಲ್ಲ. ಯಾವುದೇ ತರಹದ ಘರ್ಷಣೆ ಅಗದ ಹಾಗೆ ಪ್ರಯತ್ನ ಮಾಡುತ್ತಿರುತ್ತೇವೆ.

ಪ್ರತಿಯೊಬ್ಬ ಒಳ್ಳೆಯ ವ್ಯಕ್ತಿಯು ನೈತಿಕ ಮೌಲ್ಯಗಳನ್ನು ರಕ್ಷಿಸಿಕೊಳ್ಳ ಬಯಸುವನು. ವಿವಿಧ culture ಗಳಿದ್ದರೇನು, ವಿವಿಧ ಜನರಿದ್ದರೇನು, ಆದರೆ ಪ್ರತಿಯೊಬ್ಬರಲ್ಲಿ ಒಳ್ಳೆಯ ಗುಣಗಳು ಇರುತ್ತವೆ. ಕೆಟ್ಟ ಗುಣಗಳೂ ಇರುತ್ತವೆ. ಆದರೂ ಕೆಲವರಲ್ಲಿ ಇತರರಿಗೆ ಮಾದರಿಯಾಗುವಂತಹ ಉತ್ತಮ ಗುಣಗಳೂ ಇರುತ್ತವೆ. ಅದನ್ನು ನಾವು ಅನುಸರಿಸಬೇಕು. ನಬಿ ಕರೀಮ್(ಸ) ಆ ಬಗ್ಗೆ ಹೇಳಿದರು. ಒಳ್ಳೆಯ ಮಾತು ಎಲ್ಲಿಂದಲೂ ದೊರೆತರೆ ಸ್ವೀಕರಿಸುವಂತಹದ್ದಾಗಿದೆ. ಮುಸ್ಲಿಮರಿಂದಲೇ ಕಲಿಯಬೇಕೆಂಬುದು ಅನಿವಾರ್ಯವಲ್ಲ. ಎಲ್ಲಿಂದ ದೊರೆಯಲಿ. ಯಾವ ಧರ್ಮದಿಂದಲೂ ದೊರೆಯಲಿ, ಯಾವ ವ್ಯಕ್ತಿಯಿಂದ ದೊರೆಯಲಿ. ಅವನು ಯಾವ ಧರ್ಮದ ಮೇಲೆ ವಿಶ್ವಾಸವಿಡುವವನಾಗಲಿ, ಅದನ್ನು ನಿಮ್ಮ ಕಳೆದುಹೋದ ಬಳುವಳಿ ಎಂದು ಭಾವಿಸಿರಿ, ಅದನ್ನು ಪಡೆಯಿರಿ ಮತ್ತು ಅದರ ಮೇಲೆ ನಡೆಯುವ ಪ್ರಯತ್ನ ಮಾಡಿರಿ. ತಾತ್ಪರ್ಯವೆಂದರೆ ಪ್ರತಿಯೊಬ್ಬರಲ್ಲಿ ಒಳ್ಳೆಯ ಮೌಲ್ಯಗಳಿರುತ್ತವೆ. ಪ್ರತಿಯೊಬ್ಬ ಒಳ್ಳೆಯ ವ್ಯಕ್ತಿಯೂ ಅದನ್ನು ಗೌರವಿಸಬೇಕು. ಕೇವಲ ಗೌರವಿಸುವುದು ಅಲ್ಲ. ಅದನ್ನು ಅನುಸರಿಸಲು ಮುಂದಾಗಬೇಕು.

ಹುಝೂರ್(ಅಬಿಅ) ಹೇಳಿದರು. ಸ್ತ್ರೀಯರ ಹಕ್ಕುಗಳೂ ಇವೆ. ಇದರ ಬಗ್ಗೆ ಇಸ್ಲಾಮ್ ಶಿಕ್ಷಣ ನೀಡಿದೆ. ಇಸ್ಲಾಮ್ ಧರ್ಮವು ಸ್ರೀಗೆ ಶಿಕ್ಷಣದ ಹಕ್ಕು ನೀಡಿದೆ. ಪವಿತ್ರ ಖುರ್‌ಆನಿನಲ್ಲಿ ಪುರುಷರಿಗೆ ತಮ್ಮ ಮನೆಗಳಲ್ಲಿ ಸ್ತ್ರೀಯರೊಡನೆ ಒಳ್ಳೆಯ ರೀತಿಯಲ್ಲಿ ವ್ಯವಹರಿಸಲು ನಿರ್ದೇಶಿಸಿದೆ. ಮತ್ತು ಸ್ತ್ರೀಗೆ ಆಸ್ತಿಯಲ್ಲೂ ಹಕ್ಕು ನೀಡಿದೆ. ರಸೂಲುಲ್ಲಾಹ್(ಸ) ಹೇಳಿದರು. "ಮಾತೆಯರ ಪಾದದ ಅಡಿಯಲ್ಲಿ ಸ್ವರ್ಗವಿದೆ" ಎಂದು ತಾಯಿ ಮತ್ತು ಸ್ತ್ರೀಯು ತನ್ನ ಒಳ್ಳೆಯ ತರಬೇತಿ ಫಲವಾಗಿ ತನ್ನ ಸಂತಾನವನ್ನು ಸ್ವರ್ಗಕ್ಕೆ ಅರ್ಹರನ್ನಾಗಿ ಮಾಡುವವರಾಗುತ್ತಾರೆ. ಸಮಾಜವನ್ನು ಸ್ವರ್ಗಮಯ ಮಾಡುವವರಾಗಿರುತ್ತಾರೆ. ಆ ನಗರವನ್ನು, ಆ ದೇಶವನ್ನು ಎಲ್ಲಿ ಅವರು ಇರುವರೋ ಸ್ವರ್ಗ ಸೃಷ್ಟಿಸುವವರಾಗುತ್ತಾರೆ. ಹೀಗೆ ಇಸ್ಲಾಂ ಧರ್ಮವು ಮಹಿಳೆಯರಿಗೆ ತುಂಬ ಗೌರವ ನೀಡಿದೆ. ಮಹಿಳೆಯರಿಗೆ ಉನ್ನತ ಸ್ಥಾನವನ್ನು ನೀಡಿದೆ. ಅವರನ್ನು ದೇಶ ಕಟ್ಟುವವರಲ್ಲಿ ಒಂದು ಪ್ರಮುಖ ಪಾತ್ರದಾರರು ಎಂದು ಬಣ್ಣಿಸಿದೆ. ಓರ್ವ ಸಾತ್ವಿಕ ಹೆಣ್ಣು, ಒಳ್ಳೆಯ ನಡತೆ ಹೊಂದಿದ ಹೆಣ್ಣು, ವಿದ್ಯಾವಂತೆ ಹೆಣ್ಣು, ತನ್ನ ಮಕ್ಕಳನ್ನು ಒಳ್ಳೆಯ ತರಬೇತಿ ನೀಡಬಲ್ಲರು. ಅವರಿಗೆ ದೇಶ ಸಮುದಾಯದ ಸೇವಕರನ್ನಾಗಿ ಮಾಡಬಲ್ಲಳು. ಈ ರೀತಿ ಇಸ್ಲಾಮ್ ಧರ್ಮವು ಮಹಿಳೆಗೆ ಒಂದು ಉತ್ತಮ ಸ್ಥಾನವನ್ನು ನೀಡಿದೆ.

ಹುಝೂರ್(ಅಬಿಅ) ಹೇಳಿದರು. ಚರ್ಚ್‌ನ ಓರ್ವ ಪ್ರತಿನಿಧಿ ಮಹಿಳೆ ಆಗಮಿಸಿದ್ದರು. ಅವರು ಧಾರ್ಮಿಕ ಸಮಾನತೆ ಕುರಿತು ಮಾತನಾಡಿದರು. ತುಂಬ ಒಳ್ಳೆಯ ಮಾತಾಗಿದೆ. ಧಾರ್ಮಿಕ ಸಮಾನತೆ ಅವಶ್ಯಕವಾಗಿವೆ. ಈ ಮೊದಲು ಆ ಕುರಿತು ಹೇಳಿರುತ್ತೇವೆ. ಸದಾ ಒಬ್ಬರು ಮತ್ತೊಬ್ಬರ ಭಾವನೆಗಳ, ಧರ್ಮಗಳ ಅಲ್ಲದೇ ರೀತಿ ರಿವಾಜುಗಳ ಕುರಿತು ಗೌರವಿಸಬೇಕು. ಆದರ ತೋರಬೇಕು. ಆಗಲೇ ಧಾರ್ಮಿಕ ಸಮಾನತೆಯನ್ನು ಸಾಧಿಸಬಹುದಾಗಿದೆ. ಪವಿತ್ರ ಖುರ್‌ಆನಿನ ಮೊದಲ ಅಧ್ಯಾಯದಲ್ಲಿಯೇ ಇದನ್ನು ಹೀಗೆ ಬರೆಯಲಾಗಿದೆ. ಅಲ್ಲಾಹನು ಸರ್ವಲೋಕಗಳ ಪರಿಪಾಲಕನಾಗಿದ್ದಾನೆ ಎಂದು ಅವನು ಕ್ರೈಸ್ತರ ಪ್ರಭು ಆಗಿದ್ದಾನೆ. ಅವನ ಮುಸ್ಲಿಮನ ಪ್ರಭುವು ಆಗಿದ್ದಾನೆ. ಅವನು ಯಹೂದಿಯರ ಪ್ರಭುವು ಆಗಿದ್ದಾನೆ. ಅವನು ಹಿಂದೂಗಳ ಪ್ರಭುವು ಆಗಿದ್ದಾನೆ. ಅವನು ಎಲ್ಲಾ ಧರ್ಮಗಳ ಪ್ರಭು ಆಗಿದ್ದಾನೆ. ಅಷ್ಟೇ ಅಲ್ಲ ಅವನು ಅಲ್ಲಾಹನ ಮೇಲೆ ವಿಶ್ವಾಸ ಹೊಂದುವವನೇ ಪ್ರಭುವೂ ಆಗಿರುತ್ತಾನೆ. ಅವರನ್ನೂ ಪಾಲನೆ ಪೋಷಣೆ ಮಾಡುವವನು. ಇದು ನಮ್ಮ ವಿಶ್ವಾಸವಾಗಿದೆ. ಅಲ್ಲಾಹನು ಪರಿಪಾಲಕವಾಗಿರುವನು. ಸರ್ವವನ್ನು ನೀಡುವವನು. ಆದುದರಿಂದಲೇ ನಾವು ಲೌಕಿಕ ವಸ್ತುಗಳ ಪ್ರಯೋಜನವು ಪಡೆಯುತ್ತೇವೆ. ಅವೆಲ್ಲ ಅವನೇ ಒದಗಿಸಿರುವನು. ಜಾತಿ ಮತಭೇದವಿಲ್ಲದೆ ಒದಗಿಸಿರುವನು. ಅವನೇ ಎಲ್ಲರ ಪರಿಪಾಲಕನು. ಅವನು ರಬ್ಬುಲ್ ಆಲಮೀನ್, ಜೊತೆಯಲ್ಲಿ ನಾನು ರಹ್ಮಾನ್, ರಹೀಮನೂ ಆಗಿರುವೆನು ಎಂದು ಹೇಳಿರುವನು. ಅದರ ಅರ್ಥ ಪರಮ ದಯವಂತನು. ಮಾನವರ ಮೇಲೆ ಕರುಣೆದೋರುವನು. ಬೇಡುವವರಿಗೆ ಅವರ ಬೇಡಿಕೆಗಿಂತಲೂ ಹೆಚ್ಚು ನೀಡುವನು. ಅವನು ಅವನ ಆರಾಧನೆ ಮಾಡುವವನಾಗಲಿ ಇಲ್ಲದವನಾಗಲಿ, ಅವನೊಂದಿಗೆ ಬೇಡುವವನಾಗಲಿ ಇಲ್ಲದವನಾಗಲಿ, ಅವನ ರಹ್ಮಾನಿಯತ್ ಎಂಬ ಗುಣವು ಎಲ್ಲರಿಗೂ ಕರುಣೆ ತೋರುವನು ಮತ್ತು ಅವರ ಅಗತ್ಯಗಳನ್ನು ಪೂರೈಸುವವನು. ಬೇಡುವವರಿಗೆ ಇನ್ನೂ ಹೆಚ್ಚು ನೀಡುವವನು. ಹುಝೂರ್(ಅಬಿಅ) ಹೇಳಿದರು. ಚರ್ಚಿನ ಪ್ರತಿನಿಧಿಯೊಬ್ಬರು ಕೆಲವು ಮಾತುಗಳನ್ನು ಹೇಳಿದ್ದಾರೆ. ನಮ್ಮ ನಡುವೆ ಕೆಲವು ಭಿನ್ನಾಭಿಪ್ರಾಯಗಳಿವೆ. ಮಹಿಳೆಯ ಕುರಿತು ಅಥವಾ ಇಂತಿಂತಹ ವಿಷಯಗಳ ಕುರಿತು ಭಿನ್ನಾಭಿಪ್ರಾಯಗಳಿವೆ ಎಂದು. ಭಿನ್ನಾಭಿಪ್ರಾಯಗಳು ನಾನು ಹೇಳಿದಂತೆ ಇರುವುದು ಅವಶ್ಯವಾಗಿರುತ್ತದೆ. ಏಕೆಂದರೆ ಪ್ರತಿಯೊಂದು ಧರ್ಮವು ತನ್ನದೇ ಆದ ಒಂದು ಶಿಕ್ಷಣ ಹೊಂದಿರುತ್ತದೆ. ಅದರಲ್ಲಿ ಭಿನ್ನತೆಯೂ ಇರುತ್ತವೆ. ಆದರೆ ಮೂಲ ಉದ್ದೇಶವೇನು? ಅದು ಮುಖ್ಯ ಮಾಡದಂತೆ ನಿರ್ದೇಶಿಸಿರುತ್ತದೆ. ಅದರ ಉದ್ದೇಶ ಮಹಿಳೆಯರ ಗೌರವ ಕಡಿಮೆಗೊಳಿಸುವುದು ಆಗಿರುವುದಿಲ್ಲ. ಅವರ ಸ್ಥಾನಮಾನ ಕಡಿಮೆಗೊಳಿಸುವುದು ಆಗಿರುವುದಿಲ್ಲ. ಬದಲು ಮಹಿಳೆಯ ಗೌರವ ಸ್ಥಾನಮಾನ ಖಾಯಂಗೊಳಿಸುವುದು ಆಗಿರುತ್ತದೆ. ನಾನು ಈ ಮೊದಲು ಹೇಳಿದಂತೆ ಅದಕ್ಕಿಂತ ದೊಡ್ಡ ವಿಷಯ ಯಾವುದಿರಬಹುದು. ಹಝ್ರತ್ ರಸೂಲುಲಾಹ್(ಸ) ಹೇಳಿದರು. ಮಹಿಳೆಯ ಪಾದದಡಿಯಲ್ಲಿ ಸ್ವರ್ಗವಿದೆ. ಪುರುಷರ ಪಾದದಡಿಯಲ್ಲಿ ಅಲ್ಲ. ಆ ಸ್ಥಾನ ದೊರೆಯಲು ಕಾರಣ ಅವಳು ತನ್ನ ಮಕ್ಕಳಿಗೆ ತರಬೇತಿ ನೀಡಿರುವಳು ಮತ್ತು ದೇಶವನ್ನು ಕಟ್ಟಿರುವಳು. ಸಾತ್ವಿಕ ಹೆಣ್ಣಿನ ಕಾರಣದಿಂದಲೇ ಅವಳ ಮಡಿಲಿನಿಂದ ಹೊರಬಂದವರು ಕಾನೂನನ್ನು ಗೌರವಿಸುತ್ತಾರೆ. ತಮ್ಮ ನಡತೆಯನ್ನು ತೋರಿಸುತ್ತಾರೆ. ಉತ್ತಮ ನಡತೆಗಳ ಮೌಲ್ಯವನ್ನು ರಕ್ಷಿಸುತ್ತಾರೆ. ಅವರು ಸಹನಶೀಲರು ಆಗಿರುತ್ತಾರೆ. ಇತರ ಧರ್ಮಗಳನ್ನು ಗೌರವಿಸುವವರು ಆಗಿರುತ್ತಾರೆ. ಹಿಂದೆ ಮೂಲ ಉದ್ದೇಶವೇ ಪ್ರಧಾನವಾಗಿರುತ್ತದೆ. ನಮ್ಮ ದೃಷ್ಟಿಯಲ್ಲಿ ಮೂಲ ಉದ್ದೇಶ ಒಳ್ಳೆಯದಾಗಿದ್ದರೆ ಉಳಿದದ್ದು ವಿವಿಧ ಧರ್ಮಗಳ ವಿವಿಧ ರೀತಿಯ ಶಿಕ್ಷಣಗಳು ಒಳಗೊಂಡಿರುತ್ತವೆ. ಅದಕ್ಕಾಗಿ ಪ್ರತಿಯೊಬ್ಬರಿಗೂ ತನ್ನದಾದ ಧರ್ಮವಿದೆ ಅದರ ಮೇಲೆ ನಡೆಯಲಿ.

ಹುಝೂರ್(ಅಬಿಅ) ಹೇಳಿದರು. ಪವಿತ್ರ ಖುರಆನ್ ಹೇಳುತ್ತದೆ. ಧರ್ಮವು ಅವರವರ ಹೃದಯಕ್ಕೆ ಸಂಬಂಧಿಸಿದ ವಿಷಯವಾಗಿದೆ. ಹೀಗಿರುವಾಗ ಪ್ರತಿಯೊಬ್ಬರಿಗೆ ಹಕ್ಕಿದೆ. ಯಾರು ಯಹೂದಿ ಆಗಬಯಸುತ್ತಾನೋ ಅವನು ಯಹೂದಿ ಆಗಬಹುದು ಅಥವಾ ಕ್ರೈಸ್ತರಾಗಬಯಸುವವನು ಕ್ರೈಸ್ತನಾಗಬಹುದು ಅಥವಾ ಮುಸ್ಲಿಮನಾಗ ಬಯಸುವವನು ಮುಸ್ಲಿಮನಾಗಬಹುದು. ಒಂದಂತು ಸತ್ಯ ಒಬ್ಬರಿಗೆ ಇನ್ನೊಬ್ಬರೊಡನೆ ದ್ವೇಷವಿರಬಾರದು. ಎರಡನೆಯದಾಗಿ ಯಾವುದೇ ರೀತಿಯ ಅಡೆತಡೆ ಇರಬಾರದು. ಈ ಒಳ್ಳೆಯ ಗುಣವು ಎಲ್ಲಿಯವರೆಗೆ ಜರ್ಮನಿಯಲ್ಲಿ ಇರಲಿದೆ ಮತ್ತು ಇತರ ಪಶ್ಚಿಮ ದೇಶಗಳಲ್ಲಿಯೂ ಇದೆ. ಇಲ್ಲಿ ಧಾರ್ಮಿಕ ಸ್ವಾತಂತ್ರ್ಯವಿದೆ. ಹಾಗೆಯೇ ಎಲ್ಲಿಯವರೆಗೆ ಧಾರ್ಮಿಕ ಸ್ವಾತಂತ್ರ್ಯ ಇರುವುದೋ ಅಲ್ಲಿ ಶಾಂತಿಯ ನೆಲೆ ನಿಲ್ಲುವುದು ಮತ್ತು ದೇಶ ಅಭಿವೃದ್ಧಿಯು ಸಾಧಿಸುವುದು.

ಹುಝೂರ್(ಅಬಿಅ) ಹೇಳಿದರು. ಸಂಸತ್ ಸದಸ್ಯರು ಮಾತನಾಡಿದ್ದಾರೆ ಮತ್ತು ಮಸೀದಿಯನ್ನು ಶಾಂತಿಯ ಸೂಚಕ ಎಂದಿದ್ದಾರೆ. ಅವರು ತುಂಬ ಉತ್ತಮ ಮಾತನ್ನು ಹೇಳಿದ್ದಾರೆ. ಮಸೀದಿಯು ಶಾಂತಿಯ ಸೂಚಕವಾಗಿದೆ. ಮಸೀದಿ ನಿರ್ಮಾಣದಿಂದ ತಿಳಿದುಬರುವುದೇನೆಂದರೆ ಮುಸ್ಲಿಮರು ಐಕ್ಯತೆ ಬಯಸುವವರಾಗಿದ್ದಾರೆ ಎಂದು. ನಿಶ್ಚಯವಾಗಿಯೂ ಮಸೀದಿ ನಿರ್ಮಾಣ ಕಾರ್ಯವು ನಮಗೆ ಸಂತೋಷದಾಯಕವಾಗಿದೆ ಮತ್ತು ನಾನು ಈ ಮೂಲಕ

ದೇಶದ ಒಂದು ಅಂಗವಾಗಿದ್ದು ಒಟ್ಟುಗೂಡಿ ಈ ದೇಶದ ಪ್ರಗತಿಯ ಭಾಗವಾಗಬಯಸುತ್ತೇವೆ. ತಮ್ಮ ಧರ್ಮದ ರೀತಿ ನೀತಿಯಂತೆ ತನ್ನ ಧರ್ಮದ ಶಿಕ್ಷಣದಂತೆ ಆರಾಧನೆಗೈಯುತ್ತ ಈ ದೇಶದ ಪ್ರಗತಿಗೋಸ್ಕರ ಸಾಧ್ಯವಾದಷ್ಟು ಪ್ರಯತ್ನ ಮಾಡಬಯಸುತ್ತೇವೆ ಮತ್ತು ಮಾಡುವೆವು. ಅದೇ ಮಸೀಹರ ಪ್ರಾಮುಖ್ಯತೆ ಆಗಿರುತ್ತದೆ. ಏಕೆಂದರೆ ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾದ ಆದೇಶವಿದೆ. ಮಸೀದಿಗೆ ಬಂದಾಗ ನೀವು ಅನಾಥರ ಬಗ್ಗೆ ಯೋಚಿಸದಿದ್ದರೆ, ಮಾನವ ಮೌಲ್ಯಗಳ ಬಗ್ಗೆ ಯೋಚಿಸದಿದ್ದರೆ, ಇತರರಿಗೆ ಕಷ್ಟಕೊಡುವವರಾದರೆ ನಿಮ್ಮ ನಮಾಝ್ ನಿರ್ವಹಣೆ, ನಿಮ್ಮ ಮಸೀದಿಗೆ ಆಗಮಿಸುವುದು, ಈ ಮಸೀದಿಯ ನಿರ್ಮಾಣ ಕಾರಣ ಏನೂ ಪ್ರಯೋಜನ ನೀಡದು. ಆದುದರಿಂದ ಈ ಮಸೀದಿಯ ನಿರ್ಮಾಣ ಕಾರ್ಯದ ಜೊತೆಯಲ್ಲಿ ಎಲ್ಲಿ ನಾವು ಅಲ್ಲಾಹನ ಆರಾಧನೆ ಮಾಡುತ್ತೇವೆಯೋ ಅಲ್ಲಿ ಇನ್ನೊಬ್ಬರ ಭಾವನೆಗಳ ಬಗ್ಗೆಯೂ ಚಿಂತಿಸಬೇಕಾಗುತ್ತದೆ. ಅವರು ಯಾವುದೇ ಧರ್ಮಕ್ಕೆ ಸಂಬಂಧಿಸಿದವರಾಗಿರಲಿ ಅಥವಾ ನಾಸ್ತಿಕತೆ ಆಗಿರಲಿ, ಅವರ ಭಾವನೆಗಳನ್ನು ಗೌರವಿಸಬೇಕಾಗುತ್ತದೆ. ಧಾರ್ಮಿಕ ಭಿನ್ನತೆಗಳನ್ನು ಮುಂದಿರಿಸುವ ಬದಲು ಏಕಮತ ಹೊಂದಿದ ವಿಷಯಗಳನ್ನು ಮುಂದಿರಿಸಬೇಕು. ಹಾಗಾದಾಗ ಮಾತ್ರ ಐಕ್ಯದಿಂದ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ತನ್ನ ದೇಶ ಹಾಗೂ ಸಮುದಾಯದ ಹಿತಕ್ಕಾಗಿ ಕಾರ್ಯ ಮಾಡಲು ಸಾಧ್ಯವಾಗುತ್ತದೆ. ತನ್ನ ದೇಶ ಹಾಗೂ ಸಮುದಾಯದ ಹಿತಕ್ಕಾಗಿ ಕಾರ್ಯ ಮಾಡಲು ಸಾಧ್ಯವಾಗುತ್ತದೆ.

ಹುಝೂರ್(ಅಬಿಅ) ಹೇಳಿದರು! ಅನಂತರ ನಾನು ಅಹ್ಮದಿಯರಿಗೂ ಅದೇ ಹೇಳಬಯಸುತ್ತೇನೆ. ಈ ಮಸೀದಿ ನಿರ್ಮಾಣ ನಂತರವೂ ನಿಮ್ಮ ಕರ್ತವ್ಯ, ಯಾರು ಈ ಕ್ಷೇತ್ರದಲ್ಲಿರುವರೋ ಇನ್ನೂ ಹೆಚ್ಚಾಗುವುದು. ಮೊದಲಿಗಿಂತ ಹೆಚ್ಚು ನಾವು ಈ ದೇಶದ ಪ್ರಾಮಾಣಿಕ ನಾಗರಿಕರಾಗಿದ್ದೇವೆ ಎಂದು ಸಾಬೀತುಪಡಿಸಬೇಕು. ನೀವು ನೈತಿಕ ಮೌಲ್ಯಗಳನ್ನು ಗೌರವಿಸುವವರಾಗಬೇಕು. ಪ್ರತಿಯೊಬ್ಬ ಅಹ್ಮದಿಯು ಮೊದಲಿಗಿಂತ ಹೆಚ್ಚು ಇಲ್ಲಿ ಶಾಂತಿ ನೆಮ್ಮದಿ ಮತ್ತು ಮೈತ್ರಿ ಬಯಸುವವರಾಗಿದ್ದೇವೆ ಎಂದು ಸಾಬೀತುಪಡಿಸಬೇಕು. ಅಲ್ಲಾಹನು ನಿಮಗೆ ಆ ಭಾಗ್ಯ ದಯಪಾಲಿಸಲಿ. ನಿಮ್ಮೆಲ್ಲರಿಗೂ ಧನ್ಯವಾದಗಳು.

ಹುಝೂರ್(ಅಬಿಅ) ಅವರ ಈ ಸಂಬೋಧನೆ 6 ಗಂಟೆ 10 ನಿಮಿಷದವರೆಗೆ ಜಾರಿಯಲ್ಲಿತ್ತು. ಅನಂತರ ದುಆ ಮಾಡಿಸಿದರು, ಅದರಲ್ಲಿ ಅತಿಥಿಗಳು ತಮ್ಮದೇ ಆದ ರೀತಿಯಲ್ಲಿ ಭಾಗಿಯಾಗಿದ್ದರು.

ಈ ಸಮಾರಂಭದ ನಂತರ 7 ಗಂಟೆಗೆ ಮಸ್ಜಿದ್ ಬೈತುಲ್ ಬಸೀರ್ (ಮಹದಿಯಾಬಾದ್) ಗೆ ಆಗಮಿಸಿ ಮಗ್ರಿಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು. ಇಂದು ಕಾರ್ಯಕ್ರಮದನ್ವಯ ಮಹದಿಯಾಬಾದ್ (Nahe) ಯಿಂದ osnabmuck ಕಡೆ ಪ್ರವಾಸ ಹೊರಡಬೇಕಾಗಿತ್ತು.

ಹುಝೂರರಿಗೆ ವಿದಾಯ ಕೋರಲು ದೊಡ್ಡ ಸಂಖ್ಯೆಯಲ್ಲಿ ಜಮಾಅತ್ ಬಾಂಧವರು ಬಂದು ಸೇರಿದ್ದರು. ಸ್ತ್ರೀ ಪುರುಷರ ಒಂದು ದೊಡ್ಡ ಸಮೂಹವೇ ಆಗಮಿಸಿತ್ತು. ಬಾಲಕ ಬಾಲಕಿಯರ ತಂಡಗಳು ವಿದಾಯ ಗೀತೆಗಳನ್ನು ಹೇಳುತ್ತಿದ್ದರು. 7 ಗಂಟೆ 55 ನಿಮಿಷಕ್ಕೆ ತಮ್ಮ ವಸತಿನಿಲಯದಿಂದ ಹೊರ ಬಂದು ಜಮಾಅತ್ ಬಾಂಧವರ ನಡುವೆ ಕೆಲ ಕಾಲ ಉಪಸ್ಥಿತರಿದ್ದು ನಂತರ ಅವರ ಸಮೂಹವು ಮಹದಿಯಬಾದಿನಿಂದ ಓಸ್ನಾಬರೂಕ್‌ಗೆ ಪ್ರಯಾಣಿಸಿತು.

ಮಹದಿಯಾಬಾದಿನಿಂದ ಓಸ್ನಾಬರೂಕ ನಡುವೆಯಿರುವ ದೂರ 262 ಕಿ.ಮೀ ಆಗಿರುತ್ತದೆ. ಸುಮಾರು ಎರಡೂವರೆ ತಾಸಿನ ಪ್ರಯಾಣದ ನಂತರ ರಾತ್ರಿ ಹತ್ತುವರೆ ಗಂಟೆಗೆ ಮಸ್ಜಿದ್ ಬಶಾರತ್ ಓಸ್ನಾಬರೂಕ್ ತಲುಪಿದರು. ಓಸ್ನಾಬರೂಕ್ ಜಮಾಅತ್ ಬಾಂಧವರು ತಮ್ಮ ಪ್ರೀತಿಯ ಇಮಾಮರಿಗೆ ಭವ್ಯ ಸ್ವಾಗತ ಕೋರಿದರು. ಸ್ತ್ರೀ ಪುರುಷರು, ಬಾಲಕ ಬಾಲಕಿಯರು ದೊಡ್ಡ ಸಂಖ್ಯೆಯಲ್ಲಿ ಸೇರಿ ತಮ್ಮ ಪ್ರೀತಿಯ ಇಮಾಮರ ಆಗಮನವನ್ನು ನಿರೀಕ್ಷಿಸುತ್ತಿದ್ದರು.

ಹುಝೂರ್(ಅಬಿಅ) ವಾಹನದಿಂದ ಹೊರಗೆ ಆಗಮಿಸುತ್ತಲೇ ಓಸ್ನಾಬರೂಕ ಜಮಾಅತಿನ ಅಧ್ಯಕ್ಷರು ಮಲಿಕ್ ನವೀದ್ ಅಹ್ಮದ್ ಸಾಹಿಬ್ ಮತ್ತು ಮುರಬ್ಬಿಯರಾದ ಹನ್ನಾನ್ ಸೋಭಿ ಸಾಹಿಬ್ ಹುಝೂರರಿಗೆ ಸ್ವಾಗತ ಕೋರಿದರು ಮತ್ತು ಹಸ್ತಲಾಘವ ಮಾಡಿದರು. ಹುಝೂರ್(ಅಬಿಅ) ಕೈ ಮೇಲಕ್ಕೆತ್ತಿ ಎಲ್ಲರಿಗೂ ಅಸ್ಸಲಾಮ್ ಅಲೈಕುಂ ಹೇಳಿ ತಮ್ಮ ವಸತಿ ನಿಲಯಕ್ಕೆ ತೆರಳಿದರು. ಹುಝೂರರ ವಸತಿಯೂ ಮಸೀದಿ ಬಶಾರತ್‌ಗೆ ಹೊಂದಿಕೊಂಡಿರುವ ಮಿಶನ್ ಹೌಸಿನ ವಸತಿ ಭಾಗದಲ್ಲಿತ್ತು.

**ಅತಿಥಿಗಳ ಅನಿಸಿಕೆಗಳು:**

ಮಸ್ಜಿದ್ ಬೈತುಲ್ ಬಸೀರ್ ಉದ್ಘಾಟನಾ ಸಮಾರಂಭದ ನಿಮಿತ್ತ ಸಮಾರಂಭದಲ್ಲಿ ಪಾಲ್ಗೊಂಡ ಅತಿಥಿಗಳ ಮೇಲೆ ಹುಝೂರರ ಸಂಬೋಧನೆಯು ಗಾಢವಾದ ಪ್ರಭಾವ ಬೀರಿತು. ಹಲವು ಅತಿಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವು ಅತಿಥಿಗಳ ಅನಿಸಿಕೆಗಳು ಪ್ರಸ್ತುತವಿದೆ.

* Guido Gerdemann ಸಾಹಿಬ್ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತ ಹೀಗೆ ಹೇಳಿದರು. ಇಂದಿನ ಕಾರ್ಯಕ್ರಮವು ನನಗೆ ತುಂಬ ಮೆಚ್ಚುಗೆಯಾಯಿತು.

* Jan Eders ಅವರ ಸಂಬೋಧನೆಯೂ ನನಗೆ ತುಂಬ ಮೆಚ್ಚುಗೆಯಾಯಿತು. ಏಕೆಂದರೆ ಅವರು ನಾವೆಲ್ಲರೂ ಅನುಸರಿಸಬೇಕಾದಂತಹ ವಿಷಯಗಳನ್ನೇ ಹೇಳಿರುತ್ತಾರೆ. ಇಂದು ಆ ಮೌಲ್ಯಗಳು ತುಂಬ ಮಹತ್ವದ್ದಾಗಿವೆ. ಸಮಾನತೆ ತೋರುವುದು ಮತ್ತು ಶಾಂತಿಯಿಂದಿರುವುದು." ಇಮಾಮ್ ಜಮಾಅತ್ ಅಹ್ಮದಿಯಾ ಅವರ ವ್ಯಕ್ತಿತ್ವವು ನನಗೆ ತುಂಬ ಪ್ರೀತಿಯುಳ್ಳ ಮತ್ತು ಶಾಂತಿ ಪ್ರಿಯರಾಗಿ ಕಂಡಿತು.

\- Jan Eders ಸಾಹಿಬ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತ ಹೇಳಿದರು. ನನಗೆ ಇಂದಿನ ಸಮಾರಂಭವು ಆಸಕ್ತಿದಾಯಕವಾಗಿ ಕಂಡಿತು. ಏಕೆಂದರೆ ನಾನು ಮೊದಲ ಬಾರಿಗೆ ಇಂತಹ ಸಮ್ಮೇಳನದಲ್ಲಿ ಭಾಗವಹಿಸಿರುತ್ತೇನೆ. ಖಲೀಫರ ಸಂಶೋಧನೆಯಲ್ಲಿ ನನಗೆ ಅತ್ಯಂತ ಒಳ್ಳೆಯದಾಗಿ ಕಂಡ ವಿಷಯವೆಂದರೆ ಅವರು ಇತರ ಭಾಷಣಗಾರರ ಮಾತುಗಳನ್ನು ಸಹ ತಮ್ಮ ಸಂಬೋಧನೆಯಲ್ಲಿ ಪ್ರಸ್ತಾಪಿಸಿದರು.

* Steffan Murdig ಸಾಹಿಬ್ ಹೇಳುತ್ತಾರೆ. ನನಗೆ ಇಮಾಮ್ ಜಮಾಅತ್ ವ್ಯಕ್ತಿತ್ವವು ತುಂಬ ಆಕರ್ಷಣೀಯವಾಗಿ ಕಂಡಿತು ಅವರ ಮಾತುಗಳೊಡನೆ ನನಗೆ ಪೂರ್ಣ ಸಹಮತವಿದೆ. ವಿಶೇಷವಾಗಿ ಅವರು ಮಾನವೀಯ ಮೌಲ್ಯಗಳ ಕುರಿತು ಹೇಳಿದ ಮಾತು ತುಂಬ ಮೆಚ್ಚುಗೆಯಾಯಿತು. ಏಕೆಂದರೆ ಇದು ಪ್ರತಿ ಮನುಷ್ಯರಿಗೆ ಮಹತ್ವವುಳ್ಳ ವಿಷಯವಾಗಿದೆ.

* ಮತ್ತೊಬ್ಬ ಅತಿಥಿಯಾದ Ulf Daude ಸಾಹಿಬ್ ಅವರು consultant ಆಗಿರುವವರು, ಅವರು ಹೇಳುತ್ತಾರೆ. ಖಲಿಫರ ಸಂಬೋಧನೆಯು ತುಂಬ ಭವ್ಯವಾಗಿತ್ತು. ಅವರ ಸಂಬೋಧನೆಯಲ್ಲಿ ನನಗೆ ಅತ್ಯುತ್ತಮವಾಗಿ ಕಂಡ ವಿಷಯವೆಂದರೆ ಅವರು ಪ್ರಸ್ತಾಪಿಸಿದ ಎಲ್ಲ ಮಾತುಗಳು ಸರ್ವ ಧರ್ಮದಲ್ಲಿ ಐಕ್ಯತೆ ಮೂಡಿಸುವಂತಿತ್ತು.

ನಾನು ಒಂದು ಕ್ರೈಸ್ತ ಚರ್ಚಿನ ಸದಸ್ಯನಾಗಿದ್ದೇನೆ, ನಮ್ಮ ಆರಾಧನ ಕ್ರಮ ಮತ್ತು ಅವರ ಧರ್ಮಗಳಲ್ಲಿರುವ ಹಲವು ಮಾತುಗಳಲ್ಲಿ ಭಿನ್ನತೆಯಿದ್ದರೂ ಇಮಾಮ್ ಜಮಾಅತ್ ಅವರು ಹೇಳಿದ ಮಾತುಗಳನ್ನು ಎಲ್ಲರೂ ಒಪ್ಪುವಂತಹದ್ದಾಗಿವೆ. ನನ್ನ ವಿಶ್ವಾಸ ಪ್ರಕಾರ ನಮ್ಮೆಲ್ಲರ ದೇವನು ಒಬ್ಬನೇ ಆಗಿದ್ದಾನೆ. ಕೇವಲ ಆರಾಧನೆ ಕ್ರಮಗಳು ಬೇರೆ ಬೇರೆಯಾಗಿವೆ.

ಅವರು ಮುಂದುವರೆದು ಹೇಳಿದರು. ಖಲೀಫರ ವ್ಯಕ್ತಿತ್ವವು ಎಲ್ಲರ ಗಮನ ತನ್ನೆಡೆಗೆ ಸೆಳೆಯುವಂತಹದ್ದಾಗಿದೆ. ನಿಸ್ಸಂಶಯವಾಗಿ ನನಗೆ ಉರ್ದು ಅಂತೂ ಬರುವುದಿಲ್ಲ. ಆದರೂ ಆಲಿಸುತ್ತ ಅವರ ಮಾತುಗಳನ್ನು ವಿಚಾರಿಸುತ್ತಿದ್ದೆ. ಏಕೆಂದರೆ ಅವರ ಪದಗಳು ನನ್ನ ಮೇಲೆ ಯಾವ ಪ್ರಭಾವ ಬೀರಬಹುದು ಎಂಬುದು ನೋಡಬಯಸುತ್ತಿದ್ದೆ. ಅವರ ವ್ಯಕ್ತಿತ್ವ ಹಾಗೂ ಪ್ರಭಾವ ಹೇಗಿತ್ತೆಂದರೆ ಒಂದು ಕ್ಷಣಕ್ಕಾದರೂ ನನಗೆ ಇಲ್ಲಿಂದ ಎದ್ದು ಹೋಗಬೇಕೆಂದು ಎನಿಸುತ್ತಿರಲಿಲ್ಲ.

* ಈ ಸಮಾರಂಭದಲ್ಲಿ ಭಾಗವಹಿಸಿದ ಓರ್ವ ಮಹಿಳಾ ಅತಿಥಿ Barbona Gunther ಸಾಹಿಬಾ ಹೇಳುತ್ತಾರೆ. ನಾನು ಖಲೀಫರನ್ನು ಮೊದಲ ನೋಟದಲ್ಲಿ ಕಂಡಾಗ ಅವರಲ್ಲಿ ಶ್ರದ್ದೆ ಉಂಟಾಯಿತು ಮತ್ತು ಅವರು ಅತ್ಯಂತ ಗೌರವಾರ್ಹರು ಎಂಬ ಭಾವ ಉಂಟಾಯಿತು. ಖಲೀಫರ ಸಂಬೋಧನೆಯಲ್ಲಿ ಒಂದು ಮಾತು ತುಂಬ ಮೆಚ್ಚುಗೆಯಾಯಿತು ಅದು ಎಲ್ಲರೂ ಗಮನಿಸಬೇಕಾಗಿದೆ ಮತ್ತು ಅದರ ಪ್ರಕಾರ ನಡೆದುಕೊಳ್ಳಬೇಕಾಗಿದೆ. ಅದೇನೆಂದರೆ ನಾವು ಸಹೋದರತೆ ಮತ್ತು ಐಕ್ಯತೆ ಉಂಟಾಗುವಂತಹ ಮಾತುಗಳಿಗೆ ಪ್ರಾಮುಖ್ಯತೆ ನೀಡಬೇಕಾಗಿದೆ.

* Kai vogel ಸಾಹಿಬ್ ಅವರು ಸ್ಥಳೀಯ ಅಸೆಂಬ್ಲಿಗೆ ಸಂಬಂಧಿಸದವರಾಗಿದ್ದಾರೆ. ತಮ್ಮ ಅನಿಸಿಕೆಗಳನ್ನು ಹೇಳುತ್ತ ಹೇಳಿದರು. ನನಗೆ ಇಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ತುಂಬ ಸಂತೋಷವಾಯಿತು. ಏಕೆಂದರೆ ಈ ಮಸೀದಿಯ ಉದ್ಘಾಟನೆಯ ವಿಷಯ ಕೇವಲ ಅಹ್ಮದಿಯಾ ಜಮಾಅತಿನ ಸದಸ್ಯರಿಗಷ್ಟೇ ಅಲ್ಲ. ಬದಲಾಗಿ ಈ ಕ್ಷೇತ್ರದವರಿಗೂ ಒಂದು ಅತ್ಯಂತ ಸಂತೋಷದ ಸಂದರ್ಭವಾಗಿದೆ. ಖಲೀಫರನ್ನು ನೋಡುತ್ತಲೇ ಅವರು ಒಬ್ಬ ಪ್ರಮುಖ ವ್ಯಕ್ತಿ ಎಂಬುದು ಸ್ಪಷ್ಟವಾಗುತ್ತದೆ. ನನ್ನ ದೃಷ್ಟಿಯಲ್ಲಿ ಕ್ಯಾಥೋಲಿಕ್ ಕ್ರೈಸ್ತರಲ್ಲಿರುವ ಪೋಪ್ ಸ್ಥಾನವೇ ನಿಮ್ಮಲ್ಲಿ ಖಲೀಫರದ್ದಾಗಿರಬಹುದು ಎಂದಾಗಿದೆ. ನಮಗೂ ಇದು ತುಂಬ ಗೌರವದ ವಿಷಯವಾಗಿದೆ. ಇಂತಹ ಒಬ್ಬ ವ್ಯಕ್ತಿಯೊಡನೆ ಮಾತನಾಡುವ ಸಂದರ್ಭ ಒದಗಿ ಬಂದಿದೆ. ನನಗೆ ಈ ಭೇಟಿ ಅನುಗ್ರಹದಾಯಕವಾಗಿ ಕಂಡಿತು. ಮತ್ತು ಖಲೀಫರ ಸಂಬೋಧನೆಯಲ್ಲಿ ನನಗೆ ಅತ್ಯಂತ ಪ್ರಮುಖ ಎನಿಸಿದ ಮಾತು. ನಮಗೆ ಇತರರ ಬಗ್ಗೆಯಿರುವ ಆತಂಕಗಳನ್ನು ಕೊನೆಗಾಣಿಸಬೇಕಾಗಿದೆ. ಆಗ ಮಾತ್ರ ಶಾಂತಿ ಸ್ಥಾಪಿಸಲು ಸಾಧ್ಯವಾದಿತು. ಮತ್ತು ಈ ಕಾಲದ ಸಮಸ್ಯೆಗಳು ಅಂತ್ಯವಾಗಬಹುದು.

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 02 July 2020 Issue No. 25

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 24ರ ವರದಿಯ ಉಳಿದ ಭಾಗ)**

ಕೊನೆಯಲ್ಲಿ ಅವರು ಹೇಳಿದರು. ನಾನಿಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸ ಬಯಸುತ್ತೇನೆ. ಅದು ನನ್ನ ದೃಷ್ಟಿಯಲ್ಲಿ ಬಹಳ ಪ್ರಾಮುಖ್ಯತೆ ಹೊಂದಿದೆ. ಅದೇನೆಂದರೆ christchrch ನ ಮೇಲೆ ಆದ ಆ ಹಲ್ಲೆಯು ಒಂದು ಉಗ್ರವಾದಿಗಳ ಹಲ್ಲೆಯಾಗಿತ್ತು. ಇಂದು ಸಹ ನಾವು Security ಯ ಒಂದು ವ್ಯವಸ್ಥೆಯನ್ನು ನೋಡಿದ್ದೇವು. Halle ನಲ್ಲಿ ಆದ ಘಟನೆಗಳು ನಮಗೆ ತೋರಿಸಿಕೊಟ್ಟದ್ದೇನೆಂದರೆ ಜರ್ಮನಿಯಲ್ಲಿಯೂ ಸಹ ಜನರ ಮೇಲೆ ಕೇವಲ ಧರ್ಮ ಕಾರಣದಿಂದಾಗಿ ಹಿಂಸೆ ಮಾಡಬಹುದಾಗಿದೆ ಎಂದು.

ಅವರು ಹೇಳಿದರು. ನಾವೆಲ್ಲರೂ ಒಟ್ಟುಗೂಡಿ ಇಂತಹ ಶತ್ರಗಳ ವಿರುದ್ಧ ಧ್ವನಿ ಎತ್ತಬೇಕಾಗಿದೆ. ದೇಹದಲ್ಲಿರುವ ಧಾರ್ಮಿಕ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕಾಗಿದೆ. ಈ ಪೈಕಿ ಒಂದು ನಿರ್ಧಿಷ್ಟ ಹಂತ interna-tional disbae (ಧಾರ್ಮಿಕ ಐಕ್ಯತೆಯ) ಚರ್ಚೆ ಆಗಿದೆ. ಕೊನೆಯಲ್ಲಿ ನನ್ನ ಆಶಯವೇನೆಂದರೆ ಮಸೀದಿಯು ಒಂದು ಶಾಂತಿಯ ಸ್ಥಳವಾಗಿರಲಿ, ಅದರಲ್ಲಿ ನಾವೆಲ್ಲರೂ ಸೇರುವೆವು. ಈ ನೆಲೆಯಲ್ಲಿ ನೆನಪಿಡಬೇಕಾದ ವಿಷಯವೇನೆಂದರೆ "Love for All, Hatred for none."

ಈ ಸಂಬೋಧನೆಯ ನಂತರ Gero storjochann ಸಾಹಿಬ್ ಅವರ ರಾಷ್ಟ್ರೀಯ ಅಸೆಂಬ್ಲಿಯ ಸದಸ್ಯರಾಗಿರುವವರು. ಅವರು ತಮ್ಮ ಪರಿಚಯ ಭಾಷಣದಲ್ಲಿ ಹೇಳಿದರು. ಅವರು ಹುಝೂರ್(ಅಬಿಅ) ರಿಗೆ ಮತ್ತು ಇತರ ಉಪಸ್ಥಿತರಿಗೆ ಸ್ವಾಗತ ಕೋರಿದರು ಮತ್ತು ಹೇಳಿದರು. ಈ ಮಸೀದಿ ನಿರ್ಮಾಣದಲ್ಲಿ ಕಳೆದ 80 ವರ್ಷಗಳು ನಿಶ್ಚಯವಾಗಿಯೂ ಸರಳವಾಗೇನೂ ಇರಲಿಲ್ಲ. ಆದರೆ ಜಮಾಅತ್ ಈ ಕುರಿತು ತುಂಬ ಒಳ್ಳೆಯ ಕೆಲಸವನ್ನು ಮಾಡಿದೆ ಮತ್ತು ಜನರಲ್ಲಿ ವಿಶ್ವಾಸ ಉಂಟಾಗಿದೆ. ನಿಮ್ಮ ಜಮಾಅತ್ ಒಂದು ಶಾಂತಿಪ್ರಿಯ ಜಮಾಅತ್ ಆಗಿದೆ ಎಂದು.

ಅವರು ಹೇಳಿದರು. ಮಸೀದಿಯ ಉದ್ಘಾಟನೆಯಿಂದ ನನಗೆ ತುಂಬ ಸಂತೋಷವಾಗುತ್ತಿದೆ. ಜರ್ಮನಿಯಲ್ಲಿ ಮುಸಲ್ಮಾನನೊಬ್ಬ ಮಸೀದಿಯನ್ನು ನಿರ್ಮಿಸುವುದಾದರೆ ಅದೊಂದು ಸಾಮಾನ್ಯವಾದ ಮಾತಾಗಿರಬೇಕು. ಮಸೀದಿ ನಿರ್ಮಿಸುವುದಾದರೆ ಅವನು ಇಲ್ಲಿ ವಾಸಿಸಲು ಬಯಸುತ್ತಾನೆ ಎಂದಾಗಿರಬೇಕು. ಇಂತಹ ಜನರಿಗೆ ಜರ್ಮನಿಯಲ್ಲಿ ಒಂದು ಮನೆ ದೊರೆತಂತೆಯೇ ಸರಿ. ಆದುದರಿಂದ ಮಸೀದಿ ನಿರ್ಮಿಸುವುದೆಂದರೆ ತಮ್ಮನ್ನು ಎಲ್ಲರಿಂದ ಪ್ರತ್ಯೇಕಗೊಳಿಸುವಂತೆ ಎಂದು ಅರ್ಥವಲ್ಲ. ಬದಲು ಐಕ್ಯತೆಯ ಸೂಚಕವಾಗಿರಬೇಕು. Nahe ಯಲ್ಲಿ ಯಾವ ರೀತಿಯಾಗಲಿ ಸಮಸ್ಯೆಗಳನ್ನು ಹುಟ್ಟು ಹಾಕಲಿಲ್ಲವೆಂಬುದು ನನಗೆ ತುಂಬ ಸಂತೋಷದ ವಿಷಯವಾಗಿದೆ. ನಿಮ್ಮ ಜಮಾಅತ್ ಮೊದಲಿನಿಂದಲೂ transpareney ಯಿಂದ ಕಾರ್ಯ ನಿರ್ವಹಿಸಿದೆ. ಅದರ planning ಮತ್ತು ನಿರ್ಮಾಣ ಕಾರ್ಯದಲ್ಲಿ ತುಂಬ ತಡವಾಗಿದೆ. ಆದರೆ ಇದು ಇತರ ಕೆಲಸಗಳಲ್ಲೂ ಕಾಣಬಹುದಾಗಿದೆ. ಉದಾಹರಣೆಗೆ Air-port ನಿರ್ಮಣ ಹೊಸ ರಸ್ತೆ ನಿರ್ಮಾಣ ಅಥವಾ cycle Road ನಿರ್ಮಾಣ, ಇಷ್ಟೊಂದು ತಡವಾಗಲು ಒಂದು ಕಾರಣ ನೀವು ಕೇವಲ ನಿಮ್ಮ ಜಮಾಅತ್ತಿನ ಸದಸ್ಯರಿಂದ ಹಣ ಸಂಗ್ರಹ ಮಾಡುತ್ತೀರಿ. ನೀವು ಯಾರಿಂದಲೂ ಸಹಾಯ ಬೇಡಲಿಲ್ಲ. ನೀವು ಒಂದು ಸರಳ ರೀತಿಯ ಮಸೀದಿಯನ್ನು ನಿರ್ಮಿಸಿದ್ದೀರಿ. ಕೊನೆಯಲ್ಲಿ ಅವರು ಮತ್ತೊಮ್ಮೆ ಶುಭಾಶಯಗಳನ್ನು ಕೋರಿದರು.

ಮತ್ತು ಹೇಳಿದರು. ಈ ಮಸೀದಿಯ ನಿರ್ಮಾಣ ಕಾರ್ಯವು ನಿಮಗೆ ಶುಭವಾಗಿರಲಿ.

ಅನಂತರ 5 ಗಂಟೆ 40 ನಿಮಿಷಕ್ಕೆ ಹುಝೂರ್(ಅಬಿಅ) ಅತಿಥಿಗಳೊಡನೆ ಸಂಬೋಧಿಸಿದರು.

**ಮಸ್ಜಿದ್ ಬೈತುಲ್ ಬಶೀರ್ ಉದ್ಘಾಟನಾ ಸಮಾರಂಭದಲ್ಲಿ ರ ಸಂಬೋಧನೆ.**

ಹುಝೂರ್(ಅಬಿಅ) ತಶಹ್ಹುದ್, ತಊಝ್ ಮತ್ತು ತಸ್ಮಿಯಾ ನಂತರ ಹೇಳಿದರು.

ಎಲ್ಲ ಆಚರಣೆಯ ಅತಿಥಿಗಳಿಗೆ ಅಲ್ಲಾಹನು ನಿಮ್ಮ ಮೇಲೆ ಶಾಂತಿಯನ್ನು ಅನುಗ್ರಹವನ್ನು ದಯಪಾಲಿಸಲಿ. ಪ್ರಪ್ರಥಮವಾಗಿ ನಾನು ತಮ್ಮೆಲ್ಲ ಅತಿಥಿಗಳಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನೀವು ನಮ್ಮ ಮಸೀದಿಯ ಉದ್ಘಾಟನಾ ಜಮಾಅತ್ ಸದಸ್ಯರಲ್ಲದೆ, ಅಮುಸ್ಲಿಮರು ಬಂದು ಸೇರುವರು ಎಂದು ನಿರೀಕ್ಷಿಸಿರಲಿಲ್ಲ. ಆದರೆ ಇಲ್ಲಿ ನಿಮ್ಮ ಆಗಮನವು ನಮ್ಮ ಹೃದಯ ವೈಶಾಲ್ಯವನ್ನು ತೋರಿಸುತ್ತದೆ. ಇನ್ನೊಂದು ನನಗೆ ಸಂತೋಷದ ವಿಷಯವೆಂದರೆ ನೀವು ನಮ್ಮ ಜಮಾಅತ್ತಿನ ಬಗ್ಗೆ ಪರಿಚಿತರಾಗಲು ಇಲ್ಲಿ ಬಂದಿರುತ್ತೀರಿ. ಜಮಾಅತ್ತಿನ ಸದಸ್ಯರು ಈ ಕ್ಷೇತ್ರದಲ್ಲಿ ಮನಸಾರೆ ಕೂಡಿಕೊಂಡು ಇರುವವರಾಗಿದ್ದಾರೆ. ನೀವು ಅವರೊಡನೆ ಬೆರೆತಿದ್ದೀರಿ. ಪರಸ್ಪರ ಈ ಹೊಂದಾಣಿಕೆಯ ಭಾವದಿಂದಾಗಿ ನೀವು ನಮ್ಮ ಮಸೀದಿಯ ಉದ್ಘಾಟನಾ ಸಂದರ್ಭದಲ್ಲಿ ಬಂದಿರುತ್ತೀರಿ. ಅದು ನಮಗೆ ಸಂತೋಷದ ವಿಷಯವಾಗಿದೆ. ಆದರೆ ನಮ್ಮ ಸಂತೋಷದಲ್ಲಿ ನೀಮ್ಮ ಪಾಲ್ಗೊಳ್ಳುವಿಕೆ ನಮ್ಮ ಸಂತೋಷವನ್ನು ಇಮ್ಮಡಿಗೊಳಿಸುತ್ತದೆ. ಅಹ್ಮದಿ ಮುಸ್ಲಿಮರು ವಾಸ್ತವದಲ್ಲಿ ತಮ್ಮ ನೆರೆಹೊರೆಯವರೊಡನೆ ಒಳ್ಳೆಯ ಸಂಬಂಧವಿರಿಸಿಕೊಳ್ಳುವವರಾಗಿದ್ದಾರೆ. ಇದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುತ್ತಾ ಕೆಲ ಮಾತುಗಳನ್ನು ಹೇಳಬಯಸುತ್ತೇನೆ.

ಹುಝೂರ್(ಅಬಿಅ) ಹೇಳಿದರು ಅಮೀರ್ ಸಾಹಿಬ್ ಹೇಳಿದರು ಇದೊಂದು ಸಣ್ಣ ಊರಾಗಿದೆ. ಈ ಅಲ್ಪ ಜನಸಂಖ್ಯೆಯಲ್ಲಿ ನಮ್ಮದು ಮೊದಲ ಮಸೀದಿ ನಿರ್ಮಾಣವಾಗುತ್ತಿದೆ. ಊರು ಸಣ್ಣವಾಗಿರುವುದು ಅಥವಾ ದೊಡ್ಡದಾಗಿರುವುದು ಪ್ರಾಮುಖ್ಯತೆ ಹೊಂದುವುದಿಲ್ಲ. ಅನಿವಾರ್ಯವಾಗಿರುವುದೇನೆಂದರೆ ಅಲ್ಲಿಯ ಜನರ ನೈತಿಕತೆ ಮತ್ತು ಐಕ್ಯಭಾವನೆಯಿಂದ ಇರುವುದಾಗಿದೆ. ಸಣ್ಣ ಜಾಗದಲ್ಲಿ ಹೆಚ್ಚು ಆತ್ಮೀಯತೆ ಇರುತ್ತದೆ. ಸಣ್ಣ ನಗರಗಳಲ್ಲಿ ಇರುವವರು, ಊರುಗಳಲ್ಲಿ ಇರುವವರು ಅಥವಾ ಹಳ್ಳಿವಾಸಿಗಳು ಬೃಹತ್ ನಗರವಾಸಿಗಳಿಂದ ಹೆಚ್ಚು ಸರಳವಾಗಿರುತ್ತಾರೆ. ಅದೊಂದು ತುಂಬ ಒಳ್ಳೆಯ ವಿಷಯವಾಗಿದೆ. ಆದುದರಿಂದಲೇ ಹೆಚ್ಚಿನ ಜನರು ದೊಡ್ಡ ನಗರಗಳಿಗಿಂತ ಹೊರಗಿನ ಪ್ರದೇಶದಲ್ಲಿ ಮನೆಮಾಡಿ ವಾಸಿಸಲು ಇಷ್ಟಪಡುತ್ತಾರೆ. ನಾನು ಯು.ಕೆಯಲ್ಲಿ ಇರುತ್ತೇನೆ. ಅಲ್ಲಿಯ ರಿವಾಜು ರೀತಿ ಎಂದರೆ afford ನಲ್ಲಿರುವ ಜನರು ಹೊರಗೆ ಹೋಗಿ ಸ್ವಚ್ಛ ಪರಿಸರದಲ್ಲಿ ತಮ್ಮ ಮನೆ ಮಾಡುತ್ತಾರೆ. ಅದರಿಂದ ಒಂದು ಪ್ರಯೋಜನವೆಂದರೆ ಒಂದು ಸರಳವಾದ ಪರಿಸರ ಲಭ್ಯವಾಗುತ್ತದೆ. ಎರಡನೆಯ ದೊಡ್ಡ ಪ್ರಯೋಜನವೆಂದರೆ ಶುದ್ಧ ವಾಯು ದೊರೆಯುತ್ತದೆ. ಎಲ್ಲ ರೀತಿಯ ಪ್ರದೋಷಣ ರಹಿತ ಪರಿಸರ ದೊರೆಯುತ್ತದೆ. ಆ ನೆಲೆಯಲ್ಲಿ ನಾನು ಭಾವಿಸುವುದು ಈ ಜಾಗ ನಮಗಾಗಿ ಸಣ್ಣದಾಗಿದ್ದು, ಇಲ್ಲಿ ವಾಸಿಸುವವರು ಸ್ವಚ್ಛ ವಾಯುವಿನಲ್ಲಿ ಇದ್ದು ತಮ್ಮನ್ನು ತಾವು ಆರೋಗ್ಯವಂತರನ್ನಾಗಿ ಮಾಡಬಹುದು. ಅದೇ ರೀತಿ ನನಗೆ ವಿಶ್ವಾಸವಿದೆ. ಈ ಜನರು ಸರಳತೆಯಿಂದಾಗಿ ತಮ್ಮ ಆತ್ಮೀಯತೆಯನ್ನು ಬೆಳೆಸಿಕೊಳ್ಳುವರು. ತಮ್ಮ ಸೃಷ್ಟಿಕರ್ತನೊಂದಿಗೆ ಸಂಬಂಧ ದೃಢಪಡಿಸಿಕೊಳ್ಳುವರು.

ಹುಝೂರ್(ಅಬಿಅ) ಹೇಳಿದರು. ಅವರು ಈ ವಾತನ್ನು ಉಲ್ಲೇಖಿಸಿದ್ದಾರೆ. ಇದು ಐತಿಹಾಸಿಕ ಸ್ಥಳವಾಗಿದೆ. ಇತಿಹಾಸವು ಪ್ರಾಮುಖ್ಯತೆ ಹೊಂದಿರುತ್ತದೆ. ಸಮುದಾಯಗಳು ತನ್ನ ಇತಿಹಾಸವನ್ನು ರಕ್ಷಿಸಿಕೊಳ್ಳಬೇಕಾಗಿದೆ. ಇತಿಹಾಸವೇ ಬಹಳಷ್ಟು ಅಡಗಿಕೊಂಡ ವಿಷಯಗಳನ್ನು ಬಹಿರಂಗಗೊಳಿಸುತ್ತದೆ. ಇಸ್ಲಾಮಿನ ಬಗ್ಗೆ ಬಹಳಷ್ಟು ವಿಷಯಗಳನ್ನು ಹೇಳಲಾಗುತ್ತದೆ. ಬಹಳಷ್ಟು ಆತಂಕಗಳಿವೆ. ನಾವು ಇಸ್ಲಾಮಿ ಇತಿಹಾಸವನ್ನು ನೋಡುವವರಾದರೆ ಈ ಆತಂಕಗಳು ಅಂದರೆ ಮುಸಲ್ಮಾನರು exterimist ಆಗಿರುವರು. ಉಗ್ರವಾದಿಗಳಾಗಿರುವವರ, ಇತಿಹಾಸವು ಅದನ್ನು ಅಲ್ಲಗಳೆಯುತ್ತದೆ. ನಾವು ಇಸ್ಲಾಮಿನ ಪ್ರಾಥಮಿಕ ಕಾಲವನ್ನು ಅವಲೋಕನ ಮಾಡಿದರೆ ಇಸ್ಲಾಮ್‌ನ

*(ಉಳಿದ ವರದಿ ಪುಟ ಸಂಖೆ 09 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.